
ಕಲ್ಯಾಣ ಕಿರಣ

ಏಪ್ರಿಲ್ 1991

ಬೆಲೆ ರೂ. ೩



ಕಲ್ಯಾಣ ಕಿರಣ

ಮಾಸ ಪತ್ರಿಕೆ ಮಾರ್ಚ-ಏಪ್ರಿಲ್ 1991 ಬಿಡಿ ಸಂಚಿಕೆ ೩ ರೂ.

ಸಂಪುಟ : 19 ಸಂಚಿಕೆ : 11-12 ಬಸವ ಶಕೆ : 885

ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300 ರೂ.

ಕಿರಣಗನ್ನಡಿ

ಹೊದ್ದಿಕೆಯ ಮುಖ ಪುಟ : ಬಸವ ಧರ್ಮ ಪೀಠವು ಏನಾದರೂ ರಾಕೇಟನ್ನು ಆಕಾಶಕ್ಕೆ ಕಳಿಸುತ್ತಿದೆಯೇ? ಎಂದು ಗಾಬರಿಗೊಳ್ಳಬೇಡಿ. ಪಕ್ಕಕ್ಕೆ ತಿರುಗಿಸಿ ನೋಡಿರಿ, ಕನ್ನಡಿಯಂತೆ ನಿಂತಿರುವ ಬಸವ ಸಾಗರದ ಮಧ್ಯೆ ಇರುವ ಬಸವೇಶ್ವರ ಐಕ್ಯ ಮಂಟಪ ಮತ್ತು ಸಂಗಮೇಶ್ವರ ದೇವಾಲಯ.

ಛಾಯಾಗ್ರಾಹಕರು : ಸುರೇಶ, ಕೂಡಲ ಸಂಗಮ.

ಹೊದ್ದಿಕೆಯ ನಾಲ್ಕನೇ ಪುಟ : ಶರಣ. ಮಡಿವಾಳಪ್ಪ ಉಟಗಿ ಮತ್ತು ಶರಣೆ. ಚಂಗಳವ್ವ ಕನ್ನೂರು ಅವರ ಮಗ ಚಿ॥ ಚನ್ನಬಸವ

ಬೆಂಗಳೂರು ವಿಳಾಸ : **ಕಲ್ಯಾಣ ಕಿರಣ ಮಾಸಪತ್ರಿಕೆ** ದೂರವಾಣಿ : 325335

ಬಸವಮಂಟಪ, 2035, 2ನೇ ಬ್ಲಾಕು, 20 ನೆಯ ಮುಖ್ಯ ರಸ್ತೆ, ರಾಜಾಜಿನಗರ, ಬೆಂ–10

ಕಲ್ಯಾಣ ಕಿರಣ

ಸಂಪುಟ : 19 ಸಂಚಿಕೆ : 11-12 ಮಾರ್ಚ-ಏಪ್ರಿಲ್, 1991 ಬಸವ ಶಕೆ : 885

ನುಡಿ ನೈವೇದ್ಯ

ಓ......ಓ...... ಆತ್ಮನೇ ಆಗು ನೀ ಶರಣ
ಹಿಡಿದು ಶಿವಚರಣ, ಪಡೆದು ಗುರುಕರುಣ ॥ಪ॥


ಲೋಕವೆಂಬುದು ಹಿರಿಯ ಸಂತೆ
ಹೊತ್ತು ಬಂದಿಹೆ ಕೆಡುವ ಬೊಂತೆ
ತುಂಬಿಹುದು ಬಗೆ ಬಗೆಯ ಕಂತೆ
ಮಾಡಬೇಡ ನೀ ವ್ಯರ್ಥ ಚಿಂತೆ ॥೧॥

ವಿಶ್ವವೆಂಬುದು ದೇವನ ಸೃಷ್ಟಿ
ಮನುಜ ಜನುಮವು ಅದರ ಮುಕುಟ
ಅರಿವಿನಾಗರ, ಸುಖದ ಸಾಗರ
ನಿನ್ನ ನಿಲುವು ತಿಳಿದು ನೋಡಲು ॥೨॥

ಶಿಲೆಯ ಮರೆಯ ಹೊನ್ನಿನಂತೆ
ಸುಮದಲಡಗಿಹ ಕಂಪಿನಂತೆ
ದೇವನಡಗಿಹ ಆತ್ಮದಲ್ಲಿ
ಕಾಣುತಿಹ ನೀ ನೋಡಿದಲ್ಲಿ ॥೩॥

ದೇವರೂಪವನರಿತು ಧ್ಯಾನಿಸು
ದೇವ ಮಂತ್ರದಿ ಮನವ ಮೀಯಿಸು
ದೇವನೊಲುಮೆಯ ಪಡೆಯಲೆಳಸು
ಸಚ್ಚಿದಾನಂದನೊಳು ಬೆರೆಸು ॥೪॥

—ಜಗದ್ಗುರು ಮಾತೆ ಮಹಾದೇವಿ



ಶೋಷಕ-ಶೋಷಿತ-ಸುಧಾರಕ

ರಾಣೇಬೆನ್ನೂರು ಒಂದು ಪ್ರಸಿದ್ಧ ವ್ಯಾಪಾರ ಸ್ಥಳ. ಅಲ್ಲಿಯ ಮುನಿಸಿಪಲ್ ಹೈಸ್ಕೂಲ್ ಮೈದಾನದಲ್ಲಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರು 28-1-1991 ರಿಂದ 18-3-1991 ರ ವರೆಗೆ ಪ್ರವಚನವನ್ನು ಮಾಡಿದರು. ಅದು ಅತ್ಯಂತ ಅಮೋಘವೂ ಯಶಸ್ವಿಯೂ ಆಯಿತು. ಜನರಂತೂ ಪ್ರವಚನದ ಅತಿ ಹೆಚ್ಚಿನ ಉಪಯೋಗವನ್ನು ಪಡೆದುಕೊಂಡು ಸಂತೋಷಿಸಿದರು.

ಮಧ್ಯದಲ್ಲಿ ಒಂದು ವಿಲಕ್ಷಣ ಪ್ರಸಂಗ ಘಟಿಸಿತು. ಪಂಚಾಚಾರ್ಯ ವಾದಿಗಳಾದ ಕೆಲವರು ಬಸವ ಭಾಸ್ಕರನ ಪ್ರಕಾಶ ಜನರ ಹೃನ್ಮನಗಳನ್ನು ಹೊಕ್ಕು ಚೇತನಿಸುತ್ತಿರುವುದನ್ನು ಕಂಡು, ತಾವು ಹತಚೇತನರಾಗಿ ಸ್ವಾಮೀಜಿಯವರು ಪಂಚಾಚಾರ್ಯರನ್ನು ಕುರಿತು ಅವಹೇಳನದ ಮಾತನ್ನಾಡಿದ್ದಾರೆಂದು, ಇದನ್ನು ಪ್ರತಿಭಟಿಸಬೇಕು ಎಂದು ಆಲೋಚಿಸಿ ಏನೇನೋ ಸಂಚನ್ನು ಹೂಡಿದರು. ಜಂಗಮ ವಂಶಸ್ಥರೆಂದು ಹೇಳಿಕೊಳ್ಳುವ ಒಬ್ಬಿಬ್ಬರು, ಮುಗ್ಧ ಭಕ್ತರನ್ನು ಪ್ರಚೋದಿಸಲೆತ್ನಿಸಿದರು. ನಾವು ಇತ್ತೀಚಿನ ಕೆಲವು ವರ್ಷಗಳಲ್ಲಿ ಪಂಚಾಚಾರ್ಯರ ಸುದ್ದಿಯನ್ನೇ ಎತ್ತಲು ಹೋಗುವುದಿಲ್ಲ. ಗುರು ಬಸವಣ್ಣನವರನ್ನು ಆದ್ಯರನ್ನಾಗಿ ನಂಬಿ, ವಚನ ಸಾಹಿತ್ಯವನ್ನು ಧರ್ಮಶಾಸ್ತ್ರವೆಂದು ಭಾವಿಸಿ ಇವೆರಡರ ತಳಹದಿಯ ಮೇಲೆ ರೂಪುಗೊಳ್ಳುವ ಸಿದ್ಧಾಂತ, ಸಮಾಜಶಾಸ್ತ್ರ, ಸರ್ವತೋಮುಖ ಸಮಾನತೆ ಮುಂತಾದ ಪ್ರಗತಿಪರ ವಿಚಾರಗಳನ್ನು ವಿಧಾಯಕವಾಗಿ ಹೇಳಲು ವಿಪುಲ ಅವಕಾಶವಿದ್ದು, ಇದಕ್ಕೇ ಸಮಯದ ಅಭಾವವಿರುವಾಗ, ಇನ್ನು ಮತ್ತೇನನ್ನೋ ಹೇಳಹೋಗುವ ಅಗತ್ಯವಿಲ್ಲ ಎಂಬ ನಿರ್ಧಾರಕ್ಕೆ ಬಂದು ಬಿಟ್ಟಿದ್ದೇವೆ. ಆದರೆ, ಅಂಥಾ ವಿಷಯಗಳಲ್ಲಿ ಆಸಕ್ತಿ ಇರುವ ಯಾರಾದರೂ ಚರ್ಚೆಯನ್ನು

ಇಷ್ಟಪಟ್ಟರೆ ಉತ್ಸುಕರಾಗಿ ಚರ್ಚಿಸುತ್ತೇವೆ. ಪೂಜ್ಯ ಅಪ್ಪಾಜಿಯವರು ಅಂಥ ಜನರಿಗೆ ಹೇಳಿದ್ದಾರೆ, " ಒಂದು ಚರ್ಚಾಗೋಷ್ಠಿ ಇಡಿರಿ. ವಾದಕ್ಕೆ ಸಿದ್ಧರಾಗಿ. ನಿಮ್ಮ ವಿದ್ವಾಂಸರನ್ನಾಗಲೀ, ಸ್ವಾಮಿಗಳನ್ನಾಗಲೀ ಕರೆತನ್ನಿರಿ." ಎಂದು. ಅವರು ವಾದಕ್ಕೆ ಸಿದ್ಧರಿಲ್ಲ, ಗೊಂದಲ ಎಬ್ಬಿಸಲು ಮಾತ್ರ ಆಸಕ್ತರು. ಸರಿ, ಗೊಂದಲವನ್ನೂ ಮಾಡಲು ಅವರಿಗೆ ಆಗಲಿಲ್ಲ. ಅಂಥ ಜನರಲ್ಲಿ ಇದ್ದ ಲಿಂಗಾಯತ ಸಮಾಜದ ಉಪಪಂಗಡದವರನ್ನು ಗಮನಿಸಿದರೆ, ಒಬ್ಬಿಬ್ಬರು ಅಯ್ಯನವರ ಮನತನದವರು. ಉಳಿದವರೆಲ್ಲ ಮುಖ್ಯವಾಗಿ ಪಂಚಮಸಾಲಿ ಲಿಂಗಾಯತರು. ಪೂಜ್ಯ ಅಪ್ಪಾಜಿಯವರು ತಮ್ಮ ಭಾಷಣದಲ್ಲಿ ಹಲವಾರು ಸಂಗತಿ ಹೇಳಿದ್ದಾರೆ. ಒಂದು ವಿಷಯ ಹೀಗೆ ಹೇಳಿದ್ದಾರೆ, "ನಾವು ಜಾತಿವಾದಿಗಳಲ್ಲ ; ಎಲ್ಲ ಮಾನವರ ಹಕ್ಕು ಬಾಧ್ಯತೆ ಎತ್ತಿಹಿಡಿಯುವವರು. ನಾವು ಒಳಗೊಳಗೇ ಉಪಪಂಗಡಗಳ ಸಂಘಟನೆ ಮಾಡುವವರಲ್ಲ. ಅಂಥ ಸಂಕುಚಿತ ಬುದ್ಧಿ ನಮಗಿದ್ದಿದ್ದರೆ ಲಿಂಗವಂತ ಸಮಾಜದಲ್ಲಿ ಬಲಿಷ್ಠರು, ಬಹುಸಂಖ್ಯಾತರೂ ಆದ ಪಂಚಮಸಾಲಿಯವರನ್ನು ನಾನು ಅವರ ಜಾತಿಗುರುವಾಗಿ, ಕುಲಗುರುವಾಗಿ ಸಂಘಟಿಸಬಹುದಿತ್ತು. ಇಂಥ ಸಂಕುಚಿತ ಮನೋಭಾವ ಬಸವ ತತ್ತ್ವಕ್ಕೆ ಸಲ್ಲದ್ದು ಎಂದು ಮೊದಲಿನಿಂದಲೂ ಉದಾರವಾದಿಗಳಾಗಿ ಎಲ್ಲರ ಧಾರ್ಮಿಕ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಿದ್ದೇವೆ. ಇಂದು, ದಲಿತ ಸಮಾಜದವರಲ್ಲಿರುವ ಜಾಗೃತಿ ಕೂಡ ನಿಮ್ಮಲ್ಲಿಲ್ಲವಲ್ಲ. ಸನ್ಯಾಸಿಯಾಗಿ ಜಾತಿ ಅಭಿಮಾನ ಇಲ್ಲದಿದ್ದರೂ ನಿಮ್ಮ ಕುಲಗುರು ಎಂಬ ಅಭಿಮಾನ ನಿಮಗಿರಬಹುದಿತ್ತು. ನಿಮ್ಮೆಲ್ಲರ (ಭಕ್ತ ವರ್ಗದವರ) ಹಕ್ಕಿಗಾಗಿ ನಾನು ಹೋರಾಡುವುದನ್ನಾದರೂ ಅರ್ಥಮಾಡಿಕೊಳ್ಳಬಹುದಿತ್ತು. ಎಂಥಾ ಜನ ನೀವು !

ವರ್ಣಾಶ್ರಮ ವಿಭಜನೆಯನ್ನು ಅತಿವರ್ಣಾಶ್ರಮ ವ್ಯವಸ್ಥೆಯನ್ನು ಲಿಂಗಾಯತ ಸಮಾಜದ ಮೇಲೆ ಹೇರಿ, ಒಕ್ಕಲುತನವನ್ನೇ ಮುಖ್ಯ ವೃತ್ತಿಯನ್ನಾಗಿ ಇರಿಸಿಕೊಂಡ ಪಂಚಸಾಲಿಯವರನ್ನು ಲಿಂಗೀಶೂದ್ರರೆಂದು ಕರೆಯುವ ಪಂಚಾಚಾರ್ಯವಾದಿಗಳ ಪರ ಹಿಡಿದು, ಬಸವ ತತ್ತ್ವದ ಸಂವಿಧಾನ ಹಿಡಿದು ನಿಮ್ಮನ್ನು ಶರಣರನ್ನು ಮಾಡುತ್ತೇವೆನ್ನುವ ನಮ್ಮನ್ನು ಅರ್ಥಾತ್ ಬಸವ ತತ್ತ್ವವನ್ನು ವಿರೋಧಿಸುವಿರಲ್ಲ. ಇದು ಎಂಥಾ ದುರ್ದೈವದ ಸಂಗತಿ ! ಹುಟ್ಟಿನಿಂದ ನಾನು ಭಕ್ತವರ್ಗದವನು (ಪಂಚಮ ಸಾಲಿ) ಎಂಬ ಕಾರಣವಿಡಿದು ಉತ್ತರ ಕರ್ನಾಟಕದ ಸಂಪ್ರದಾಯವಾದಿ ಸ್ವಾಮಿಗಳು ನನಗೆ ಜಂಗಮದೀಕ್ಷೆ ಕೊಡಲಿಲ್ಲ. ಇಂದು ಬಸವಾದಿ ಪ್ರಮಥರ ತತ್ತ್ವಗಳು ಪ್ರಸಾರಗೊಂಡು ಜಾತಿವಾದದ ಸದ್ದು ಅಡಗುತ್ತಿದೆ. ಆದರೆ ನಿಮಗೆ ನಾವು ಯಾವುದರ ಸಲುವಾಗಿ, ಯಾರ ಸಲುವಾಗಿ ಹೋರಾಡುತ್ತೇವೆ ಎಂಬ ಜಾಗೃತಿ ಬೇಡವೆ?" ಎಂದು ಸಿಂಹ ವಾಣಿಯಿಂದ ಮೊಳಗಿದಾಗ ಬಹುಪಾಲು ಎದುರಾಳಿಗಳ ಸತ್ವ ಉಡುಗಿತ್ತು. ಇನ್ನು ಕೆಲವರ ಹೃದಯ ಪರಿವರ್ತನೆಯಾಗಿತ್ತು.

ಈ ಪ್ರಸಂಗ ಬಹಳ ವಿಚಾರಾರ್ಹ. ಧಾರ್ಮಿಕ ರಂಗದಲ್ಲಿ ಶೋಷಿತರು, ಶೋಷಕರು ಇರುತ್ತಾರೆ. ಶೋಷಕರ ಸಂಖ್ಯೆ ಕಡಿಮೆಯೇ ಇರುವುದು. ಆದರೂ

ಶೋಷಿತರು ಶೋಷಕರ ಕೈಗೊಂಬೆಗಳಾಗಿರುತ್ತಾರೆ. ಶೋಷಕರನ್ನೇ ತಮ್ಮ ಹಿತ
ಚಿಂತಕರು ಎಂದು ತಿಳಿಯುತ್ತಾರೆ. ಬಸವ ತತ್ತ್ವವಾದಿ ಅಯ್ಯನವರ ವರ್ಗದವರು
ಉದಾರವಾದಿಗಳು, ಚಿಂತನಶೀಲರು, ವೈಚಾರಿಕರು, ಗುಣಗ್ರಾಹಿಗಳು ಇರುತ್ತಾರೆ.
ಬಸವ ತತ್ತ್ವದ್ವೇಷಿ ಅಯ್ಯನವರು ಶ್ರೇಣೀಕೃತ ಪದ್ಧತಿಯನ್ನು ದೃಢವಾಗಿ ನಂಬು
ತ್ತಾರೆ. ಅವರನ್ನು ನಂಬಿದ ಭಕ್ತರೂ ಅಷ್ಟೇ ವಿಶ್ವಾಸದಿಂದ ಶ್ರೇಣೀಕೃತ ವ್ಯವಸ್ಥೆ
ಯನ್ನು ಒಪ್ಪುತ್ತಾರೆ. ಅವರ ವಿಚಾರ ಸರಣಿ ಹೀಗಿರುತ್ತದೆ. "ನಾವು ಬಹಳ
ಶ್ರೇಷ್ಠರಪ್ಪ ; ಏಕೆಂದರೆ ಜಂಗಮ ವಂಶೀಯರು. ನೀವು ಬಣಜಿಗರು, ಪಂಚಮ
ಸಾಲೆಯವರು ಉಳಿದ (ಶೂದ್ರ) ಲಿಂಗಾಯತರಿಗಿಂತಲೂ ಶ್ರೇಷ್ಠರು. (ಆದರೆ ನಮ್ಮ
ಷ್ಟಲ್ಲ ಮತ್ತು ನಮಗಿರುವ ಹಕ್ಕುಗಳನ್ನು ಪಡೆದುಕೊಳ್ಳಲಾರಿರಿ.) ನೀವು ನಮ್ಮ
ಭಕ್ತರಾಗಿರುವಿರಿ. ಉಳಿದ ಲಿಂಗಾಯತರು ಅಂದರೆ ಗಾಣಿಗ ಸಜ್ಜನರು, ಸಾದರು, ರೆಡ್ಡಿ,
ಪಟ್ಟಸಾಲಿ, ಇತ್ಯಾದಿಯವರು ನಿಮ್ಮಷ್ಟು ಶ್ರೇಷ್ಠರಲ್ಲ, ನಿಮಗಿಂತ ಕನಿಷ್ಟ !" ಈ
ಮಾತಿನಿಂದ ಹಿಗ್ಗಿ ಹೀರೇಕಾಯಿ ಆಗಿ, ಕೆಲವು ಊರುಗಳಲ್ಲಿ ಬಣಜಿಗರು, ಕೆಲವು
ಊರಲ್ಲಿ ಪಂಚಮಸಾಲೆಯವರು ಅಡ್ಡಪಲ್ಲಕ್ಕಿ ಹೊತ್ತು ಹೊತ್ತು ಸಂತೋಷಪಟ್ಟು
ಧನ್ಯರಾದೆವೆಂದು ಭಾವಿಸುತ್ತಾರೆ. ಮತ್ತು ಕೆಲವರಂತೂ ಬಸವಣ್ಣನವರನ್ನು ದ್ವೇಷಿಸಿ
ನಿಂದಿಸುತ್ತಾರೆ. "ಯಾರ್‍ಯಾರಿಗೂ ದೀಕ್ಷೆಕೊಟ್ಟು ನಮ್ಮ ಜಾತಿಯನ್ನು ಕೆಡಿಸಿದರು."
ಎನ್ನುವರು. ಅಂಥವರನ್ನು ನೋಡಿದಾಗ ಮರುಕ ಒಂದು ಕಡೆ, ಸಿಟ್ಟು ಒಂದು ಕಡೆ.
ಯಾವ ಬಸವ ತತ್ತ್ವವು ಇವರ ಸಮಾನತೆಯನ್ನು ಎತ್ತಿಹಿಡಿಯುತ್ತದೋ, ಇವರ
ಆತ್ಮಗೌರವವನ್ನು ರಕ್ಷಿಸುವುದೋ ಅಂಥದನ್ನು ಈ ಕೆಲವರು ದ್ವೇಷಿಸುತ್ತಾರೆ ; ಇವ
ರನ್ನು ಕೀಳು ಎನ್ನುವವರನ್ನು ಆದರಿಸಿ, ಗೌರವಿಸುತ್ತಾರೆ. ಲಿಂಗಾಯತ ಸಜ್ಜನ
ಸಮಾಜದವರ ಪಾಡೂ ಹೀಗೇ ಆಗಿದೆ. ಲಿಂಗಾಯತ ಶೂದ್ರರು ಎಂಬ ಹಣೆಪಟ್ಟಿ
ಹೊತ್ತು, ನೀವು ಶರಣರು-ಸಮಾನರು ಎನ್ನುವ ಬಸವ ತತ್ತ್ವವನ್ನೇ ದ್ವೇಷಿಸುತ್ತ
ಲಿಂಗಾಯತ ಸಜ್ಜನ ಸಮಾಜದವರು ಪಂಚಾಚಾರ್ಯರ ನಿಷ್ಠಾವಂತ ಅನುಯಾಯಿ
ಗಳಂತೆ ಕಾಣಿಸಿಕೊಳ್ಳುವುದನ್ನು ಕೆಲವು ಊರುಗಳಲ್ಲಿ ಕಾಣಬಹುದು.

ಹೀಗಾಗಿಯೇ ಭಾರತ ದೇಶದಲ್ಲಿ ಶೋಷಕರ ಪರವಾಗಿಯೇ ಶೋಷಿತರು ನಿಂತು, ಸಮತಾವಾದಿಗಳನ್ನು, ಸುಧಾರಕರನ್ನು, ಹಿತಚಿಂತಕರನ್ನು ದ್ವೇಷಿಸುವರು, ವಿರೋಧಿಸುವರು. ಯಾವ ಪರಿವರ್ತನೆಯೂ ಆಗಗೊಡದಂತೆ ವ್ಯವಸ್ಥೆಯನ್ನು ಪೋಷಿಸುವ ಪುರೋಹಿತಶಾಹಿಗೆ ಶೋಷಿತರೇ ಭದ್ರ ಶ್ರೀರಕ್ಷೆಯಾಗುವುದು ಈ ನೆಲದ ವಿಪರ್ಯಾಸ! ಗದ್ದುಗೆ ಏರಿದವನು, "ನನಗಷ್ಟೇ ಹಕ್ಕು ನಿನಗಿಲ್ಲ" ಎಂದು ಹುಟ್ಟನ್ನು ಜಾತಿಯನ್ನು ಅರ್ಹತೆಯನ್ನಾಗಿ ತೋರಿಸಿದಾಗ "ಅದೇಕೆ ನನಗಿಲ್ಲ ; ಅರ್ಹತೆಯಿಂದ ನಾನು ಗುರು-ಜಂಗಮ ವಾಗಬಲ್ಲೆ" ಎಂಬ ಎಚ್ಚರ, ಹಕ್ಕಿನ ಅರಿವು ಮೂಡಿದಾಗಲಷ್ಟೆ ಈ ಸಮಾಜದಲ್ಲಿ ಬದಲಾವಣೆಯು ಗಾಳಿ ಬೀಸಲು ಸಾಧ್ಯ ! !

—ಮಾತಾಜಿ

ಬಸವ ಧರ್ಮ ಪ್ರಚಾರಕರ ತರಬೇತಿ ಯೋಜನೆ ಮತ್ತು ನಿಧಿಯ ರಚನೆ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರು ಅನೇಕ ಮಠಾಧೀಶರು, ಧಾರ್ಮಿಕ ಮುಖಂಡರು, ಸಮಾಜದ ಮುಂದಾಳುಗಳು ಮುಂತಾದವರನ್ನೆಲ್ಲ ಭೇಟಿಯಾದಾಗಲೆಲ್ಲ ಧರ್ಮಪ್ರಚಾರಕರ ತರಬೇತಿ ಮತ್ತು ನೇಮಕದ ಯೋಜನೆಯನ್ನು ಪ್ರಸ್ತಾಪಿಸುತ್ತಿದ್ದರು. ಈ ಬಗ್ಗೆ ನಾವು ಬಹಳ ವರ್ಷಗಳಿಂದ ಚಿಂತಿಸಿ, ಈಗ ಇದಕ್ಕೊಂದು ರೂಪಕೊಡುವ ಆಲೋಚನೆ ಹೊಂದುತ್ತಿದ್ದೇವೆ. ಬಸವ ಧರ್ಮ ಸಂಸತ್ ಸದಸ್ಯರ ಕಳೆದ ವರ್ಷದ ಮತ್ತು ಈ ವರ್ಷದ ಸಮಾವೇಶದಲ್ಲಿ ಚಿತ್ರದುರ್ಗದ ಶರಣ. ಲಿಂಗಣ್ಣನವರು ಈ ಬಗ್ಗೆ ಸೂಚಿಸಿದರು. ಈಗ ಅತ್ಯಂತ ಸಮೀಪದಲ್ಲಿ ಪೂರೈಸಬೇಕಾದ ಕೆಲವು ಯೋಜನೆಗಳಿರುವುದರಿಂದ ನಾವು ಈಗಲೇ ಧನ ಸಂಗ್ರಹ ಮಾಡಲು ಸಾಧ್ಯವಾಗದು. ಧರ್ಮಗ್ರಂಥವನ್ನು ಬಿಡುಗಡೆ ಮಾಡಿದ ನಂತರ ಈ ಯೋಜನೆಯನ್ನು ಕೈಗೆ ಎತ್ತಿಕೊಳ್ಳಲಾಗುವುದು ಎಂದು ತಿಳಿಸಿದೆ. ಆಗ ಲಿಂಗಣ್ಣನವರು, "ನಮಗೆ ಅಂದರೆ ಸಂಸತ್ ಸದಸ್ಯರಿಗೆ, ಯೋಜನೆಯ ರೂಪು-ರೇಷೆ ಹಾಕಿಕೊಟ್ಟು, ಜವಾಬ್ದಾರಿ ವಹಿಸಿರಿ, ಎಷ್ಟು ಸಾಧ್ಯವೋ ಅಷ್ಟನ್ನು ನಾವೂ ಪೂರೈಸುತ್ತೇವೆ" ಎಂದು ಒತ್ತಾಯಪಡಿಸಿದ್ದಕ್ಕೆ, ದಿ. 14-3-91 ರಂದು ಇನ್ನಿತರ ಸದಸ್ಯರು ಅನುಮೋದನೆ ನೀಡಿದರು.

1. ಒಂದು ಕಾಯಂ ನಿಧಿಯನ್ನು ಮಾಡುವುದು. ಒಂದು ಲಕ್ಷ ರೂ ನಿಧಿ ಎಂದು ಕೊಳ್ಳೋಣ. ಅದಕ್ಕೆ ವರ್ಷಕ್ಕೆ ಸುಮಾರು 11000/- (ಹನ್ನೊಂದು ಸಾವಿರ) ರೂಗಳ ಬಡ್ಡಿ ಬರುತ್ತದೆ. ಸುಮಾರು ತಿಂಗಳಿಗೆ 500 ರೂ. ಒಬ್ಬ ಪ್ರಚಾರಕನಿಗೆ ಗೌರವಧನ ಕೊಟ್ಟರೆ, ಒಂದ ಲಕ್ಷ ರೂಪಾಯಿ ನಿಧಿಯಿಂದ ಇಬ್ಬರನ್ನು ನೇಮಿಸಿಕೊಳ್ಳಲು ಸಾಧ್ಯವಿದೆ.
2. ಹೀಗೆ ನೇಮಿಸಿಕೊಳ್ಳುವ ಪ್ರಚಾರಕರು ವೈರಾಗ್ಯ ಜೀವನವನ್ನು ಸ್ವಯಂ ಇಚ್ಛೆಯಿಂದ ಆರಿಸಿಕೊಂಡ ತ್ಯಾಗಿಗಳಿರಬಹುದು. ಅಥವಾ ಗೃಹಸ್ಥಜೀವನ ಸ್ವೀಕರಿಸಿಯೂ ಧರ್ಮ ಪ್ರಚಾರ ಮಾಡುವ ಹಂಬಲ ಉಳ್ಳವರಾಗಿರಬಹುದು.
3. ಪ್ರಚಾರಕರನ್ನು ಆಯ್ಕೆ ಮಾಡುವಾಗ ಕನಿಷ್ಟ ಶಿಕ್ಷಣ ಎಸ್. ಎಸ್. ಎಲ್. ಸಿ. ಯನ್ನು ನಿರೀಕ್ಷಿಸುವುದು. ಆದರೆ ಮುಖ್ಯವಾಗಿ ಗಮನಾರ್ಹವಾಗುವವು ಕಾರ್ಯಕರ್ತರಲ್ಲಿರುವ ತತ್ತ್ವನಿಷ್ಠೆ, ಮಿಷನರಿ ಜೀಲ್, ವಾಗ್ಮಿತ್ವ. ಇವರಿಗೆ ತರಬೇತಿ ಕೊಡುವುದು.
4. ನಂತರ ಇವರನ್ನು ಪ್ರಚಾರಕ್ಕೆ ತೊಡಗಿಸುವುದು. ಈಗಾಗಲೇ ನಿರ್ಮಾಣವಾದ ರಾಷ್ಟ್ರೀಯ ಬಸವ ದಳಗಳ ಬಸವ ಮಂಟಪಗಳನ್ನು ನೋಡಿಕೊಳ್ಳಲು, ಆ

ಕೇಂದ್ರದಲ್ಲಿದ್ದುಕೊಂಡು ಸುತ್ತಲಿನ ಗ್ರಾಮಗಳಲ್ಲಿ ಪ್ರಚಾರ ಕಾರ್ಯ ಕೈಗೊಳ್ಳುವದಕ್ಕೆ ಅವಕಾಶ ಮಾಡುವುದು.

5. ಗೃಹಸ್ಥ ಜೀವನ ಸ್ವೀಕರಿಸಿದ ಶರಣನಿಗೆ 500 ರೂ. ವೇತನ ಸಾಕಾಗದಷ್ಟೆ. ಆತನಿಗೆ ಇನ್ನಷ್ಟು ಅನುಕೂಲವಾಗುವಂತೆ ಕೆಲವು ಆದಾಯ ಮೂಲಗಳನ್ನು ರೂಪಿಸುವುದು.

   ೧. ಸದ್ಭಕ್ತರು ತಮ್ಮ ಮನೆಗಳಿಗೆ ಧಾರ್ಮಿಕ ವಿಧಿ–ವಿಧಾನ ಪೂರೈಸಲು ಕರೆದೊಯ್ದಾಗ ಏನಾದರೂ ಕಾಣಿಕೆ ಕೊಡುವುದು.

   ೨. ಡಿಸ್‌ಕೌಂಟ್(ರಿಯಾಯಿತಿ) ದರದ ಮೇಲೆ ಒದಗಿಸುವ ಧಾರ್ಮಿಕ ಪುಸ್ತಕ, ಶರಣರ ಭಾವಚಿತ್ರ, ಧಾರ್ಮಿಕ ಸಾಮಗ್ರಿ ಮಾರಿ ಅದರಿಂದಲೂ ಆದಾಯ ರೂಢಿಸಿಕೊಳ್ಳುವುದು.

   ೩. ತಾನಿರುವ ಸ್ಥಳದಲ್ಲಿ ಧಾರ್ಮಿಕ ಗ್ರಂಥ ಭಂಡಾರವಿಟ್ಟು, ಸದಸ್ಯರನ್ನು ಹೊಂದಿ, ಓದಲು ಪುಸ್ತಕ ಒದಗಿಸಿ, ಸದಸ್ಯತ್ವ ಶುಲ್ಕ ಪಡೆದುಕೊಳ್ಳುವುದು. ಇತ್ಯಾದಿ, ಇತ್ಯಾದಿ.

6. ಧರ್ಮ ಪ್ರಚಾರಕ ನಿಧಿಯಿಂದ ಹೀಗೂ ಮಾಡಬಹುದು. ಕೆಲವು ಜನ ಶರಣರು ಈಗಾಗಲೇ ತಮ್ಮ ಸ್ವಂತ ಖರ್ಚು ಮಾಡಿಕೊಂಡು ವಾರಕ್ಕೆ ಮೂರು ನಾಲ್ಕು ಸ್ಥಳಗಳನ್ನು ಸಂದರ್ಶಿಸಿ ಪ್ರಾರ್ಥನಾ ಸಭೆ ನಡೆಸುತ್ತಿದ್ದಾರೆ. ದೇವರ ಅನುಗ್ರಹದಿಂದ ಅವರು ಅನುಕೂಲವಾಗಿದ್ದು, ನಿಧಿಯ ಸಹಾಯ ಕೇಳದಿದ್ದರೆ ಕೊಡುವ ಅಗತ್ಯವಿಲ್ಲ. ಆದರೆ ಮತ್ತೆ ಕೆಲವರು ಆರ್ಥಿಕ ಸಂಕಷ್ಟದಲ್ಲಿದ್ದೂ ಸಹ ತಾವು ಧರ್ಮಪ್ರಚಾರಕ್ಕಾಗಿ ಖರ್ಚು ಮಾಡುತ್ತಿದ್ದಾರೆ. ಇಂಥವರಿಗೆ ಸಹಾಯಧನವನ್ನಾಗಿ ಕೊಂಚ ಹಣವನ್ನು ನಿಧಿಯಿಂದ ಕೊಡಬಹುದು.

7. ಕೆಲವರು ಪೂರ್ಣಾವಧಿ ಕಾರ್ಯಕರ್ತರಾಗಿದ್ದಾರೆ. ಆದರೆ ನಮ್ಮ ಸಂಸ್ಥೆಯಿಂದ ಊಟ-ಬಟ್ಟೆ-ವೈದ್ಯಕೀಯ ನೆರವು ಬಿಟ್ಟು ಇನ್ನೇನಕ್ಕೂ ಹಣ ಕೇಳರು ಮತ್ತು ಸಂಬಳವನ್ನೂ ಪಡೆಯರು. ಇಂಥವರ ಹೆಸರಿಗೆ ಧರ್ಮಪ್ರಸಾರ ನಿಧಿಯಿಂದಲೇ ಇನ್‌ಷೂರೆನ್ಸ್ ಮಾಡಿಸುವುದು, ಅಥವಾ ನಿಧಿಯಿಂದಲೇ ಆರ್.ಡಿ. ಮಾಡುವುದು. ತಮ್ಮ ಜೀವಿತಾವಧಿಯಲ್ಲಿ ಬೇಕಾದರೆ ಅವರು ಆ ಹಣ ಬಳಸಿಕೊಳ್ಳಬಹುದು. ಅಗತ್ಯವೇ ಬೀಳದಿದ್ದರೆ, ಅವರ ಜೀವಿತಾ ನಂತರ ಆ ಹಣವನ್ನು ಪುನಃ ಧರ್ಮ ಪ್ರಚಾರ ನಿಧಿಗೇ ಸೇರಿಸುವುದು.

ಹೀಗೆ ಇನ್ನೂ ಹಲವಾರು ಯೋಜನೆ ರೂಪಿಸಬಹುದು. ಈ ದಿಶೆಯಲ್ಲಿ ಶರಣ ಬಂಧುಗಳೂ ತಮ್ಮ ಸಲಹೆ–ಸೂಚನೆ ನೀಡಬಹುದು.

8. ಕೆಲವರು ಶಿಕ್ಷಕರು, ಕೃಷಿ ಕಾಯಕದವರು ಮುಂತಾದವರು ಪ್ರತಿಭಾವಂತರು, ಧಾರ್ಮಿಕ ಶ್ರದ್ಧಾಳುಗಳು, ವಾಗ್ಮಿಗಳು, ಜ್ಞಾನಿಗಳೂ ಇದ್ದಾರೆ. ಇವರಿಗೆ

ಗೌರವಧನಕೊಟ್ಟು, ವಾರದಲ್ಲಿ 2–3 ದಿವಸಗಳನ್ನಾದರೂ ಧರ್ಮ ಪ್ರಚಾರಕ್ಕೆ ಮೀಸಲಿಡುವಂತೆ ಪ್ರೇರೇಪಿಸಬಹುದು.

ಹೀಗೆ ಇಂದು ಅತ್ಯಗತ್ಯವಾಗಿ ಆಗಬೇಕಾದ ಧಾರ್ಮಿಕ ಮತ್ತು ನೈತಿಕ ಮೌಲ್ಯಗಳ ಪ್ರಚಾರಕ್ಕೆ ವ್ಯವಸ್ಥಿತವಾದ ಚಾಲನೆ ನೀಡಬಹುದು. ಇದಕ್ಕಾಗಿಯೇ ಒಂದು ಹಣಕಾಸು ನಿರ್ವಹಣಾ ಸಮಿತಿಯನ್ನು ಬಸವ ಧರ್ಮ ಸಂಸತ್ ಸದಸ್ಯರ ಮಧ್ಯದಿಂದಲೇ ಮಾಡಿ ಬಸವ ಧರ್ಮ ಪೀಠದ ಆಶ್ರಯದಲ್ಲಿ ಧರ್ಮ ಪ್ರಸಾರಕರ ಆಯ್ಕೆ, ತರಬೇತಿ, ನೇಮಕಕ್ಕೆ ಚಾಲನೆ ಕೊಡಬಹುದು. ಇದರಿಂದ ಕೆಲವು ಪ್ರತಿಭಾವಂತರಾದ ಯುವಕರ ಶಕ್ತಿಯನ್ನು ಉದಾತ್ತ ಕಾರ್ಯಕ್ಕೆ ಬಳಸಲು ಸಾಧ್ಯವಾಗಬಹುದು.

ಈ ಬಗ್ಗೆ ಕಲ್ಯಾಣ ಕಿರಣದ ಓದುಗರು, ಶರಣ ಬಂಧುಗಳು ತಮ್ಮ ಅಭಿಪ್ರಾಯ, ಸಲಹೆ, ಸೂಚನೆ ನೀಡಬೇಕು.

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರು 60 ವರ್ಷಗಳನ್ನು ಪೂರೈಸುವ ದಿವಸ 11–9–91 ರಂದು ಈ ನಿಧಿಯನ್ನು ಕ್ರೋಢೀಕರಿಸಿ, ಸದ್ಗುರುಗಳಿಗೆ ಸಮರ್ಪಿಸಿ, ಯೋಜನೆಗೆ ಚಾಲನೆ ಕೊಡಬೇಕೆಂದು ಸೂಚಿಸುತ್ತೇವೆ.

—ಮಾತಾಜಿ, ಬ. ಧ. ಪೀಠ

ಪೂಜ್ಯ ಸದ್ಗುರುಗಳ ಪ್ರವಚನಗಳ ವೀಡಿಯೋ ಕೆಸೆಟ್ಟು ತಯಾರಿಕೆ

ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮೀಜಿಯವರ ಅಮೋಘವಾದ ಪ್ರವಚನಗಳನ್ನು ವೀಡಿಯೋ ಕೆಸೆಟ್ಟು ರೂಪದಲ್ಲಿ ಸಿದ್ಧಪಡಿಸುತ್ತಿದ್ದು ಕೆಳಗೆ ಸೂಚಿಸಿದ ಹೆಸರಿನ ಶರಣರು ತಲಾ 1000-00 (ಒಂದು ಸಾವಿರ)ರೂಪಾಯಿಗಳಂತೆ ಕೊಟ್ಟಿದ್ದಾರೆ.

1. ಶರಣ. ಬಿ. ಮಲ್ಲೇಶಪ್ಪ, ತುಮಕೂರು
2. ರಾಷ್ಟ್ರೀಯ ಬಸವ ದಳ, ಮೈಸೂರು
3. ರಾಷ್ಟ್ರೀಯ ಬಸವ ದಳ, ವಿಜಯಪುರ
4. ರಾಷ್ಟ್ರೀಯ ಬಸವ ದಳ, ಸಕಲಟ್ಟಿ, ತಮಿಳುನಾಡು
5. ಶರಣ. ಎಸ್. ಬಿ. ಸುಲ್ತಾನಪುರಿ, ಬೆಳಗಾಂವ
6. ರಾಷ್ಟ್ರೀಯ ಬಸವ ದಳ, ಬಾಗಲಕೋಟ
7. ಶರಣ. ಅಂದಾನಪ್ಪ ವೀರಬಸಪ್ಪ ಕುಂದರಗಿ, ಗಜೇಂದ್ರಗಡ
8. ಶರಣ. ಸುಬ್ಬಣ್ಣ ನಂಜಪ್ಪ ಮೈಸೂರು, ಬೆಂಗಳೂರು
9. ರಾಷ್ಟ್ರೀಯ ಬಸವ ದಳ, ಬೆಂಗಳೂರು
10. ರಾಷ್ಟ್ರೀಯ ಬಸವ ದಳ, ಚಳ್ಳಕೆರೆ
11. ಶರಣ. ತೋಟಪ್ಪ ದೇವೇಂದ್ರಪ್ಪ ಮುಮ್ಮಿಗಟ್ಟಿ, ಧಾರವಾಡ
12. ಶರಣ. ಮಲ್ಲಿಕಾರ್ಜುನ ಸ್ವಾಮಿ ಗುರುಸ್ಥಲ ಮಠ, ಧಾರವಾಡ
13. ಶರಣೆ. ಸುಲೋಚನಮ್ಮ ಮತ್ತು ಶರಣ. ಆರ್. ಎಸ್. ಹೊನ್ನಪ್ಪನವರು ಧಾರವಾಡ
14. ಶರಣ. ಡಾ॥ ಹಾಲ್ ದೊರೆ, ಕೊಯಮತ್ತೂರು
15. ಶರಣ. ಸಿದ್ಧಪ್ಪ ಲಕ್ಕಣ್ಣನವರು, ಧಾರವಾಡ
16. ಶರಣ. ಸಾತವೀರಪ್ಪ ದುಂಡಪ್ಪ ಅಂಗಡಿ, ಧಾರವಾಡ
17. ರಾಷ್ಟ್ರೀಯ ಬಸವ ದಳ, ಶಿವಮೊಗ್ಗ

❋ ಇವರುಗಳಲ್ಲಿ ಇನ್ನೂ ಯಾರ್ಯಾರು ಹಣ ಕೊಟ್ಟಿಲ್ಲವೋ ಅವರು ಬೇಗನೆ ಹಣವನ್ನು ಕಳಿಸಬೇಕು.

❋ ಈಗಾಗಲೇ ಹಣ ಕೊಟ್ಟವರು ತಮ್ಮ ರಸೀತಿ ಸಂಖ್ಯೆ, ದಿನಾಂಕ ತಿಳಿಸಿ ಪತ್ರ ಬರೆಯಬೇಕು.

❋ ಪ್ರವಚನ ಪ್ರಚಾರದಲ್ಲಿ ಈ ಉದ್ದೇಶಕ್ಕಾಗಿ ಹಣ ಕೊಟ್ಟಿದ್ದು, ಒಂದು ವೇಳೆ ಇಲ್ಲಿ ಪ್ರಕಟವಾಗಿಲ್ಲದಿದ್ದರೆ ಬೇಸರ ಪಡದೆ, ವಿವರ ತಿಳಿಸಬೇಕು. ಯಾರ

ಕೈಲಿ. ಎಲ್ಲಿ ಕೊಟ್ಟಿದ್ದಾರೆಂಬುದನ್ನು ಕಾಣಿಸಿ ಬರೆಯಬೇಕು. ಏಕೆಂದರೆ ಮೊತ್ತವು ಇನ್ನಿತರ ವಿಭಾಗಕ್ಕೆ ಸೇರಿರುವ ತಪ್ಪು ಸಂಭವಿಸಿರಬಹುದು. ಇಷ್ಟರಲ್ಲಿಯೇ ಚಿತ್ರೀಕರಣ ಆರಂಭವಾಗಲಿದೆ. ಕೊಡುವ ದಾನಿಗಳಿಗೆ ವಿಪುಲವಾದ ಅವಕಾಶವಿದೆ. ಸುಮಾರು 50 ಉಪನ್ಯಾಸಗಳನ್ನು ಚಿತ್ರೀಕರಿಸುವ ಅಪೇಕ್ಷೆ ಇದೆ. ಆದ್ದರಿಂದ ಸಹೃದಯರು ದೇಣಿಗೆ ನೀಡಲು ಮುಂದೆ ಬರುವಿರಾಗಿ ನಂಬುತ್ತೇವೆ.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ,
ಬಸವ ಧರ್ಮ ಪೀಠ, ಕೂಡಲ ಸಂಗಮ.

ಬಸವ [ಲಿಂಗಾಯತ] ಧರ್ಮದ ಆರು ಸೂತ್ರಗಳು

1. ಧರ್ಮ ಗುರು–
   ವಿಶ್ವಗುರು ಬಸವಣ್ಣನವರು
2. ಧರ್ಮ ಸಂಹಿತೆ–
   ಸಮಾನತೆ ಸಾರುವ ವಚನ ಸಾಹಿತ್ಯ
3. ಧರ್ಮಲಾಂಛನ–
   ಜಾತ್ಯತೀತತೆ ಘೋಷಿಸುವ ಇಷ್ಟಲಿಂಗ
4. ಧರ್ಮಕ್ಷೇತ್ರ–
   ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮ
5. ಧರ್ಮಧ್ವಜ–
   ಬಸವ ಮಂತ್ರ ಸಹಿತ ಷಟಸ್ಥಲ ಧ್ವಜ
6. ಧರ್ಮದಧ್ಯೇಯ–
   ಜಾತಿವರ್ಣವರ್ಗರಹಿತ ಕಲ್ಯಾಣ ರಾಜ್ಯ ನಿರ್ಮಾಣ

ಶ್ರೀ ಡಾ|| ಎಲ್. ಬಸವರಾಜು ಅವರ ವಚನ ವಿಶ್ಲೇಷಣೆ

— ವಸಾತಾಜಿ

ರಿಣ ತಪ್ಪಿದ ಹೆಂಡಿರಲ್ಲಿ, ಗುಣ ತಪ್ಪಿದ ನಂಟರಲ್ಲಿ
ಜೀವವಿಲ್ಲದ ದೇಹದಲ್ಲಿ ಫಲವೇನೋ ?
ಆಳ್ದನೊಲ್ಲದ ಆಳಿನಲ್ಲಿ, ಸಿರಿ ತೊಲಗಿದ ಅರಸಿನಲ್ಲಿ
ವರವಿಲ್ಲದ ದೈವದಲ್ಲಿ ಫಲವೇನೋ ?
ಕಳಿದ ಹೂವಿನಲ್ಲಿ ಕಂಪನು, ಉಳಿದ ಸೊನೆಯಲ್ಲಿ ಹೆಂಪನು,
ಕೊಳಚೆಯ ನೀರಿನಲ್ಲಿ ಗುಣ್ಪನು, ಅರಸುವಿರಿ ಮರುಳೆ !
ವರಗುರು ವಿಶ್ವಕ್ಕೆಲ್ಲ, ಗಿರಿಜಾ ಮನೋವಲ್ಲಭ
ಪರಮ ಕಾರಣಿಕ ನಮ್ಮ ಕೂಡಲ ಸಂಗಮದೇವ ||

—ಬ. ಷ. ವ. ೫೬೪

ಇದು ಗುರು ಬಸವಣ್ಣನವರ ವಚನ ; ಮೈಸೂರಿನ ಡಾ|| ಎಲ್. ಬಸವರಾಜು ಅವರು ಸಂಪಾದಿಸಿ, ವ್ಯಾಖ್ಯಾನ ರಚಿಸಿರುವ ಗುಲಬರ್ಗಾದ ಶ್ರೀ ಶರಣ ಬಸವೇಶ್ವರ ಗ್ರಂಥ ವಿಶ್ವವಿದ್ಯಾಲಯದಿಂದ ಪ್ರಕಟಿಸಿರುವ "ಬಸವಣ್ಣನವರ ಷಟ್ಸ್ಥಲ ವಚನಗಳು," ಕೃತಿಯಿಂದ ಆಯ್ದುದು. ಪ್ರಸ್ತುತ ಕೃತಿಯನ್ನು ಸಂಸ್ಥೆಯವರು ತಂದು ಕೊಟ್ಟಾಗ (4-4-91) ಸಂತೋಷವೆನಿಸಿತು. ಕೆಲವು ಭಾಗವನ್ನು ಓದಿದೆ. ಧಾರವಾಡದ ಮುರಘಾಮಠದವರು ಬಸವಣ್ಣನವರ ವಚನಗಳನ್ನು ಪ್ರಕಟಿಸಿದ್ದಾರೆ. ಆ ಪುಸ್ತಕದಲ್ಲಿ ಒಟ್ಟಾರೆ ಎಲ್ಲ ವಚನಗಳು ಜನರಿಗೆ ಲಭ್ಯವಾಗುತ್ತವೆ. ಈ ಕೃತಿಯಲ್ಲಿ ಎಲ್. ಬಸವರಾಜು ಅವರು ವ್ಯಾಖ್ಯಾನ ನೀಡಿದ್ದಾರೆ.

ಕೆಲವೊಂದು ವಚನಗಳನ್ನು ಶ್ರೀ ಎಲ್. ಬಸವರಾಜು ಪ್ರಕ್ಷಿಪ್ತ ಎಂದಿದ್ದಾರೆ. ಯಾರೋ ಮತಾಂಧರು, ಬ್ರಾಹ್ಮಣ ದ್ವೇಷಿಗಳು ಬರೆದು ಸೇರಿಸಿರಬೇಕು ಎಂದು ಊಹಿಸಿದ್ದಾರೆ. ಅಂಥವನ್ನು ಅವರು ನಕ್ಷತ್ರ ಚಿಹ್ನೆಯೊಡನೆ ಗುರುತಿಸಿ, ಬಸವಣ್ಣನವರ ಹೆಸರಿನಲ್ಲಿ ಯಾರೋ ಬರೆದು, ಸೇರಿಸಿ ಅವರ ಹೆಸರಿಗೆ ಕಳಂಕ ಹಚ್ಚಿದ್ದಾರೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಈ ರೀತಿ ಶ್ರೀ ಬಸವರಾಜು ಅವರು ಅಭಿಪ್ರಾಯ ಪಟ್ಟಿರುವುದರಲ್ಲಿ 'ಆದಿ ಪುರಾಣ ಅಸುರರಿಗೆ ಮಾರಿ' ಮುಂತಾದ ಮಹತ್ವದ ವಚನಗಳು ಸೇರಿವೆ. ಆ ವಚನವಂತೂ ಅತ್ಯಂತ ಮಹತ್ವದ್ದು, ಅರ್ಥಗರ್ಭಿತವಾದುದು. ಮೂಢಭಕ್ತಿಯ ಕೆಸರಿನ ಮಡುವಿನಲ್ಲಿ ಮುಳುಗುವವನನ್ನು "ಕೊಂಬು ಹಿಡಿದು ಮೇಲಕ್ಕೆತ್ತುವಷ್ಟು ಶಕ್ತಿಶಾಲಿಯಾದುದು."

ಡಾ|| ಬಸವರಾಜು ಅವರು ಪ್ರಕ್ಷಿಪ್ತವೆಂದು ಗುರುತಿಸಲ್ಪಟ್ಟ ವಚನದಲ್ಲಿ ಮುಖ್ಯವಾಗಿ ಮಹೇಶ್ವರ ಸ್ಥಲದ ವಚನ, ಬಹುದೇವತೋಪಾಸನೆ ನಿರಾಕರಿಸುವ, ನಿಷೇಧಿಸುವ ವಚನ, ಲಿಂಗಾಯತ ಧರ್ಮದ ಸಂವಿಧಾನಕ್ಕೆ ಹೊರತಾದ ಆಚರಣೆಗಳನ್ನು ವಿಡಂಬಿಸುವ ವಚನಗಳು ಸೇರಿವೆ. ನನಗಂತೂ ಇತ್ತೀಚೆಗೆ ವಚನಗಳನ್ನು ಪ್ರಕ್ಷಿಪ್ತ ಎಂದು ಕರೆಯುವವರನ್ನು ಕಂಡರೆ ಸಾಕಷ್ಟು ದಿಗಿಲು ಆಗುತ್ತದೆ. ಒಂದು ದೃಷ್ಟಾಂತ ನೆನಪಾಗುತ್ತಿದೆ. ಒಂದು ಊರಲ್ಲಿ ಗಂಡನೊಬ್ಬನಿಗೆ ಇಬ್ಬರು ಹೆಂಡತಿಯರು ಇದ್ದರು. ಅವನಿಗೆ ಕರಿಯಕೂದಲು, ಬಿಳಿಯ ಕೂದಲು ಎರಡೂ ಇದ್ದವು. ಹಿರಿಯ ಹೆಂಡತಿ, ಅವಳ ಕೂದಲು ಬೆಳ್ಳಗಾಗಿದ್ದುದರಿಂದ ಗಂಡನಿಗೆ ಕರಿಯ ಕೂದಲು ಇದ್ದರೆ ಚೆಂದವಲ್ಲವೆಂದು ಸಮಯ ಸಿಕ್ಕಾಗಲೆಲ್ಲ ಕರಿಯ ಕೂದಲು ಕೀಳುವಳು. ಕಿರಿಯ ಹೆಂಡತಿ, ತನಗೆ ಕರಿಯ ಕೂದಲು ಇದ್ದ ಕಾರಣ ಗಂಡನಿಗೆ ಬಿಳಿಯ ಕೂದಲು ಇದ್ದರೆ ವಯಸ್ಸಿನ ಅಂತರ ಕಾಣುವುದೆಂದು ಸಮಯ ಸಿಕ್ಕಾಗಲೆಲ್ಲ ಬಿಳಿಯ ಕೂದಲು ಕೀಳುವಳು. ಹೀಗಾಗಿ ಆ ಪತಿ ಎನ್ನುವ ಪ್ರಾಣಿ, ಬೋಳು ತಲೆಯವನಾಗುವ ಪಾಳೆ ಬಂದಿತು.

ದಿವಂಗತ ಎಸ್. ಎಂ. ಅಂಗಡಿಯವರು – ನಾವು ಆಗಾಗ ಚರ್ಚಿಸುತ್ತಿದ್ದೆವು. ಬಸವಣ್ಣನವರ ಷಟ್ಸ್ಥಲದ ವಚನಗಳು ಅಧಿಕೃತ ನಂಬಿಗೆಗೆ ಅರ್ಹ. ಹೆಚ್ಚಿನ ವಚನಗಳು ಅಧಿಕೃತವಲ್ಲ ಎಂದು ಅವರು ಆಗಾಗ ಅನ್ನುತ್ತಿದ್ದರು. ಬಸವಣ್ಣನವರ ಷಟ್ಸ್ಥಲದ ಹೆಚ್ಚಿನ ವಚನಗಳನ್ನು ಓದಿದಾಗ ಕೆಲವನ್ನು ಬಿಟ್ಟರೆ, ಅವೂ ಬಹಳ ಮಹತ್ವಪೂರ್ಣ ಎಂದೇ ಎನಿಸುತ್ತದೆ. ವಚನಗಳನ್ನು ಸಂಗ್ರಹಿಸುವಾಗ ಲಭ್ಯವಿದ್ದವನ್ನು ತೆಗೆದುಕೊಂಡು ಅನೇಕ ಸಂಪಾದನಾಕಾರರು ಸಂಗ್ರಹಿಸಿದ್ದಾರೆ, ಒಂದು ಚೌಕಟ್ಟಿಗೆ ಅಳವಡಿಸಿದ್ದಾರೆ. ಅನಂತರ ಹೆಚ್ಚು ಹೆಚ್ಚು ವಚನಗಳು ಸಿಕ್ಕಿರಬಹುದು. ಹಾಗೆ ಸಿಕ್ಕಿದವು ಅಧಿಕೃತವಲ್ಲ ಎನ್ನಲಾದೀತೆ ? ಹೀಗೆ ಎಸ್. ಎಂ. ಅಂಗಡಿಯವರ ಅಭಿಪ್ರಾಯ ಒಪ್ಪಿದರೆ 960 ರಿಂದ 1393 ಅಂದರೆ 433 ವಚನ ತೆಗೆದುಹಾಕಬೇಕಾಗುತ್ತದೆ. ಈಗ ಶ್ರೀ ಡಾ|| ಎಲ್. ಬಸವರಾಜು ರವರು ಕೆಲವನ್ನು ತೆಗೆದು ಹಾಕಿದ್ದಾರೆ, (ಪುಸ್ತಕದಲ್ಲಿ ವ್ಯಾಖ್ಯಾನ ಸಹಿತವಾಗಿ ಮುದ್ರಿಸಿದ್ದಾರೆ. ಆದರೆ ಪ್ರಕ್ಷಿಪ್ತ ಎಂದು ವಿಶೇಷವಾದ ಚಿಹ್ನೆಯಾಗಿ * ಹಾಕಿದ್ದಾರೆ.) ಇನ್ನೂ ಶ್ರೀ ಗಿರಿರಾಜುರವರು ಈ ಬಗ್ಗೆ ಗಮನ ಹರಿಸಿಲ್ಲ. ಅವರು ಶ್ರೀ ಸಿದ್ಧರಾಮೇಶ್ವರರನ್ನು ಶುದ್ಧೀಕರಿಸುವುದರಲ್ಲಿ ನಿರತರಾಗಿದ್ದಾರೆ. ಅವರ ದೃಷ್ಟಿಯಲ್ಲಿ ಇನ್ನೆಷ್ಟು ಬಸವಣ್ಣನವರ ವಚನಗಳಲ್ಲಿ ಪ್ರಕ್ಷಿಪ್ತವಾದವು ಹೊರಡುತ್ತವೋ ! ಅಂತೂ-ಇಂತೂ ಎಲ್ಲರೂ ಸೇರಿ ಕಡೆಗೆ ಬಸವಣ್ಣನವರ ವಚನಗಳನ್ನಾದರೂ ಉಳಿಸುತ್ತಾರೋ ಇಲ್ಲವೋ !

ನಮ್ಮ ದೃಷ್ಟಿಕೋನವೆಂದರೆ, ಒಂದು ತಾತ್ತ್ವಿಕ ಚೌಕಟ್ಟನ್ನು ನಿರ್ಧರಿಸುವುದು. ಈ ಚೌಕಟ್ಟನ್ನು ಹೊಂದಿಸಿಕೊಳ್ಳದ, ಮೂಲ ಆಲೋಚನಾ ಸರಣಿಗೆ ವಿರುದ್ಧವಾದವನ್ನು ಪ್ರಕ್ಷಿಪ್ತ ಎನ್ನುವುದು ಸರಿ ಎಂಬುದಾಗಿದೆ. ಉದಾಹರಣೆಗೆ, ಶರಣರು ಸಮು

ತಾವಾದಿಗಳು. ಈ ಸಮಾನತೆ ಬೋಧಿಸದೆ ಪ್ರತ್ಯೇಕತಾವಾದ, ಜಾತೀಯತೆಯನ್ನು ಪ್ರಚೋದಿಸುವ ವಚನಗಳನ್ನು ಪ್ರಕ್ಷಿಪ್ತವೆನ್ನುವುದು ಸೂಕ್ತ. ಶರಣರು ಏಕೇಶ್ವರವಾದಿಗಳು, ಇದಕ್ಕೆ ವಿರುದ್ಧವಾಗಿ ಯಾವುದಾದರೂ ಬಹುದೇವತೋಪಾಸನೆ ಪ್ರೋತ್ಸಾಹಿಸುವ ವಚನವು, ಶರಣರ ಹೆಸರಿನಲ್ಲಿದ್ದರೆ ಅವನ್ನು ಪ್ರಕ್ಷಿಪ್ತವೆನ್ನುವುದು ಸರಿ. ಹೀಗೆ ಪರಿಷ್ಕರಿಸದಿದ್ದರೆ, ಡಾ॥ ಎಲ್. ಬಸವರಾಜು ಅವರು ಉದಾರವಾದಿಗಳಾದ ಕಾರಣ, ಅವರಿಗೆ ಮತಾಂಧತೆಯ ವಚನ ಬೇಡವಾದರೆ ಜಾತಿವಾದಿಗಳು ವಿಶಾಲತೆ ಬೋಧಿಸುವ ಉದಾರವಾದದ ವಚನಗಳನ್ನು ಕತ್ತರಿಸಬಹುದು. ಆದ್ದರಿಂದ ಈ ದಿಶೆಯಲ್ಲಿ ನಿರ್ದಿಷ್ಟತೆ ಅಗತ್ಯ. ಶ್ರೀ ಬಸವರಾಜುರವರು ಪ್ರಕ್ಷಿಪ್ತವೆಂದಿರುವ, ಲೇಖನದ ಆರಂಭದಲ್ಲಿ ನಾನು ಉಲ್ಲೇಖಿಸಿರುವ ವಚನವನ್ನು ಈಗ ವಿಶ್ಲೇಷಣೆಗೆ ತೆಗೆದುಕೊಳ್ಳೋಣ.

ರಿಣ ತಪ್ಪಿದ ಹೆಂಡತಿ : ಹೆಂಡತಿ ಯಾವುದೋ ಕಾರಣಕ್ಕೆ ತನ್ನ ಗಂಡನ ಸಂಬಂಧ ಬಿಟ್ಟುಕೊಟ್ಟಿದ್ದಾಳೆ, ಋಣ ಸಂಬಂಧ ಹರಿದುಕೊಂಡಿದ್ದಾಳೆ. ತೌರುಮನೆಯ ಮೋಹ ಅಧಿಕವಾದಾಗ ಅಂಥ ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿ ಇರಬಯಸದೆ, ಪುಟುಕ್ಕನೆ ತೌರಿಗೆ ಜಿಗಿಯುತ್ತಾರೆ. ಇನ್ನು ಕೆಲವೊಮ್ಮೆ ವಿವಾಹಪೂರ್ವದ ಸ್ನೇಹವಿದ್ದು, ಆ ನೆನಪಿನಿಂದಾಗಿ ಗಂಡನ ಮನೆಯಲ್ಲಿರಬಯಸದೆ ಗಂಡನನ್ನು ತೊರೆಯುತ್ತಾಳೆ ಎಂದುಕೊಳ್ಳೋಣ. ಇದಾವುದೇ ಅಥವಾ ಇನ್ನಾವುದೇ ಕಾರಣದಿಂದ ಗಂಡನನ್ನು ತೊರೆದು ಹೋದ ಹೆಂಡತಿಯನ್ನು ಕುರಿತು ಗಂಡನು ಪುನಃ ಪುನಃ ನೆನೆಪು ಮಾಡಿ ಕೊಳ್ಳುವುದು ನಿಷ್ಪ್ರಯೋಜಕ. ಅವಳ ಗುಣಗಾನ ಮಾಡುವುದು ಅಷ್ಟೇ ಹಾಸ್ಯಾಸ್ಪದ.

ಗುಣ ತಪ್ಪಿದ ನಂಟರಲ್ಲಿ : ಪರಸ್ಪರರಲ್ಲಿರುವ ವಿಶ್ವಾಸವು, ಹಾರ್ದಿಕ ಬಾಂಧವ್ಯವು ಕೆಟ್ಟುಹೋದಾಗ ಅಂಥವರಿಂದ ದೂರವಿರಬೇಕೇ ವಿನಾ ಪುನಃ ಪುನಃ ಅವರನ್ನು ಓಲೈಸ ಹೋದರೆ, ಅಪಮಾನ, ಔದಾಸೀನ್ಯ, ತಿರಸ್ಕಾರಕ್ಕೆ ಒಳಗಾಗಬೇಕಾಗುವುದು.

ಜೀವವಿಲ್ಲದ ದೇಹ : ಅತ್ಯಂತ ಪ್ರೀತಿ ಪಾತ್ರಳಾದ ಹೆಂಡತಿಯೇ ಆಗಲಿ, ಮಕ್ಕಳೇ ಆಗಲಿ, ಗಂಡನೇ ಆಗಲಿ ಜೀವ ಹೋದ ಬಳಿಕ ಆ ದೇಹವನ್ನು ಮನೆಯಲ್ಲಿ ಇಟ್ಟುಕೊಳ್ಳಲು ಬರುವುದೆ ? ತನಗೆ ಅತ್ಯಂತ ಪ್ರೀತಿಪಾತ್ರರೆಂದು ಅಂಥ ದೇಹವನ್ನು ಪ್ರೀತಿಸಲು ಆಗುವುದೇ ?

ಆಳ್ದನೊಲ್ಲದ ಆಳಿನಲ್ಲಿ : ಅರಸನಿಂದ ತಿರಸ್ಕೃತನಾದ ಅಥವಾ ಅರಸನ ಕೋಪಕ್ಕೆ ತುತ್ತಾದ ಆಳಿನಿಂದ ಯಾವ ಕೆಲಸವನ್ನೂ ನೀವು ಮಾಡಿಸಿಕೊಳ್ಳಲಿಕ್ಕೆ ಸಾಧ್ಯವಾಗದು.

ಸಿರಿ ತೊಲಗಿದ ಅರಸು : ಅಧಿಕಾರದ ಸಿರಿಯಾಗಲೀ ಅಥವಾ ಐಶ್ವರ್ಯದ ಸಿರಿಯಾಗಲೀ, ಅವನ್ನು ಕಳೆದುಕೊಂಡು ದಿಕ್ಕೆಟ್ಟು ಅಲೆಯುವ, ನಿರಾಶ್ರಿತನಾದ ಅರಸು ತನ್ನನ್ನು ಆಶ್ರಯಿಸಿದವರಿಗೆ ಏನು ಕೊಡಬಲ್ಲ ?

ವರವಿಲ್ಲದ ದೈವ : ಅದೇ ರೀತಿ ವರ ನೀಡುವ, ಅನುಗ್ರಹಿಸುವ ಸಾಮರ್ಥ್ಯವಿಲ್ಲದ ದೈವ ತನ್ನನ್ನು ನಂಬಿದವರಿಗೆ ಏನು ಕೊಡಬಲ್ಲುದು ?

ಇಡೀ ವಚನವು ಉದ್ದೇಶಿಸಿರುವುದು ಕ್ಷುಲ್ಲಕ ದೈವದ **ನಿರಾಕರಣೆಯನ್ನು**, ಪರವಸ್ತುವನ್ನು ಕುರಿತಾದ ಭಕ್ತಿಯ **ಧೃಢೀಕರಣವನ್ನು** ಇಂದು ಭಾರತೀಯರು, ಮುಖ್ಯವಾಗಿ ಹಿಂದುಗಳು, ಗಿರಿಜನರು ಮುಂತಾದವರು ಪೂಜೆ ಮಾಡುವ ವಸ್ತುಗಳನ್ನು ನೋಡಿದರೆ ವಿಚಿತ್ರವಾದ ಕಲ್ಲುಗಳು, ಮರದ ತುಂಡುಗಳು, ನಾಗರ ಕಲ್ಲು, ಭಯಂಕರ ಆಕಾರದ ಭೂತಗಳು, ಬೇವಿನ ಗಿಡ, ಅರಳೀಗಿಡ ಮುಂತಾದ ಗಿಡಮರಗಳು– ಇವೆಲ್ಲವೂ ವರವಿಲ್ಲದ ದೈವಗಳು ಮಹಾದಾತನಾದ ಪರಮಾತ್ಮನಿಗೆ ಅನುಗ್ರಹಿಸುವ ಸಾಮರ್ಥ್ಯ ಉಂಟು, ಇಲ್ಲವೇ ಆ ಪರಮಾತ್ಮನ ಅನುಗ್ರಹ ಪಡೆದು ಪುನೀತನಾದ ಮಹಾತ್ಮನಿಗೆ ಅನುಗ್ರಹಿಸುವ ಸಾಮರ್ಥ್ಯ ಉಂಟು. ಪರಮಾತ್ಮನೂ ಅಲ್ಲದ, ಮಹಾತ್ಮರೂ ಆಗದ ಗೊಂಬೆಗಳನ್ನು ಪೂಜಿಸಿದರೆ ಬರುವದೇನು? ವಸ್ತುನಿಷ್ಠ (*objective reality*) ಅಸ್ತಿತ್ವವೇ ಇರದ ಭ್ರಾಂತಿಯ ಕೂಸುಗಳಾದ ಕಾಲ್ಪನಿಕ ವಸ್ತುಗಳನ್ನು ಆರಾಧಿಸಿದರೆ ಬರುವ ಲಾಭವೇನು? ಊರಲ್ಲಿ ಕಾಲರಾ, ಪ್ಲೇಗು ಬಂದಾಗ ಯಾವುದಾದರೊಂದು ವಿಚಿತ್ರಾಕಾರದ ಗೊಂಬೆ ಮಾಡಿ ಊರ ಹೊರಗೆ ಒಯ್ದು ಹಾಕಿ, ನಂತರ ಅದಕ್ಕೊಂದು ಗುಡಿ ಕಟ್ಟುವರು. ಇಂಥವೆಲ್ಲ ವರವಿಲ್ಲದ ದೈವಗಳು. ಇವುಗಳಿಂದ ಅನುಗ್ರಹ ಬಯಸುವುದೆಂದರೆ ಬತ್ತಿ ಹೋದ ಹೂವಿನಲ್ಲಿ ಆಹ್ಲಾದಕರ ಸೌರಭವನ್ನು, ಉಳಿದ ಸೂಳೆ ಎಂದರೆ ಯಾರೂ ಇಷ್ಟ ಪಡದ (ರೋಗರುಜಿನುಗಳ ತವರಾದ ಅಥವಾ ಮುಪ್ಪಿನಿಂದ ಆಕಾರ ಗೆಟ್ಟ ಕಾರಣ ತಿರಸ್ಕೃತಳಾದ) ಸೂಳೆಯಲ್ಲಿ ಸುಖವನ್ನು, ಕೊಚ್ಚೆಯ ನೀರಿನಲ್ಲಿ ಸ್ವಚ್ಛತೆಯನ್ನು–ಸವಿಯನ್ನು ಬಯಸಿದಂತೆ. ಆದ್ದರಿಂದ ಲೋಕಕ್ಕೆಲ್ಲ ಪರಮಗುರುವಾದ, ಶಕ್ತಿ ವಿಶಿಷ್ಟನಾದ (*endowed with power*), ಜಗತ್ತಿನ ಆದಿ ಕಾರಣನಾದ ಪರಮಾತ್ಮನನ್ನು ನಂಬಬೇಕು, ಆರಾಧಿಸಬೇಕು.

ಹೀಗೆ ಪರಮಾತ್ಮನ ಆಧಿಕ್ಯವನ್ನು ಒತ್ತಿ ಹೇಳುವ, ಕ್ಷುದ್ರ ದೈವಂಗಳನ್ನು ಖಂಡಿಸುವ ಅತ್ಯುತ್ತಮ ವಚನವಿದು. ಇದು ಶ್ರೀ ಬಸವರಾಜು ಅವರು ಅಭಿಪ್ರಾಯಪಟ್ಟಂತೆ— "ಕೌಟುಂಬಿಕ ಸುಖವಿಲ್ಲದ, ಸೂಳೆಯ ಸುಖವೂ ಇಲ್ಲದ, ಧನಿಕನಾದೊಬ್ಬ ಒಡೆಯನ ಪೋಷಣೆಯೂ ಇಲ್ಲದ— ಮತ್ತು-ಕಂಪು-ಹೆಂಪು-ಗುಂಪು ಎಂಬಂಥ ಪ್ರಾಸಪ್ರಿಯನಾದೊಬ್ಬ ಕುಕವಿ ಹೊಸೆದು ಕಟ್ಟಿದ ನಿರರ್ಥಕ ವಚನವಿದು," ಕುಕವಿಯ ಕಲ್ಪನೆಯಲ್ಲ. ಸಮಾಜ ಸುಧಾರಕ ಬಸವಣ್ಣನವರ ವಚನ. ಮೂಢಜನರು ಮಾಡುವ ವ್ಯರ್ಥ ಪ್ರಯತ್ನದಿಂದ ಕಳವಳಗೊಂಡು ಅವರು ನುಡಿದ ತಾತ್ತ್ವಿಕ ಬೋಧೆ. ಶ್ರೀ ಬಸವರಾಜು ಅವರಿಗೆ ಇಂಥ ಮಹತ್ವದ ವಚನ ಎಳ್ಳಷ್ಟೂ ಅರ್ಥವಾಗದ್ದು ಆಶ್ಚರ್ಯಕರ ಸಂಗತಿ. ಸೂಳೆಯ ಉದಾಹರಣೆ ತಗೊಂಡದ್ದರಿಂದ ಅವರಿಗೆ ಮುಜುಗರವೆನಿಸಿರಬೇಕು. ಕೆಲವು ಹೋಲಿಕೆಗಳು ಅತ್ಯಂತ ಅನಿವಾರ್ಯ ಆಗಿಬಿಡುತ್ತವೆ.

ಕೂಸುಳ್ಳ ಸೂಳೆ ಧನದಾಸೆಗೆ ಒತ್ತೆಯ ಕೊಂಡಡೆ
ಕೂಸಿಂಗಲ್ಲ, ಭೊಜಗಂಗಲ್ಲ
ಕೂಸನೊಮ್ಮೆ ಸಂತೈಸುವಳು, ಭೊಜಗನನೊಮ್ಮೆ ನೆರೆವಳು
ಧನದಾಸೆ ಬಿಡದು ಕೂಡಲ ಸಂಗಮ ॥

ಈ ವಚನದಲ್ಲಿ ವೇಶ್ಯೆಯ ಹೋಲಿಕೆ ಬಂದಿದೆ. ಎಷ್ಟು ಶಕ್ತಿಶಾಲಿಯಾಗಿ ಧರ್ಮವಂತ-ಶ್ರೀಮಂತನ ಪರಿಸ್ಥಿತಿಯನ್ನು ಬಿಂಬಿಸುತ್ತಿದೆ ನೋಡಿ. ಒಬ್ಬ ವೇಶ್ಯೆಗೆ ಆಕೆಯ ಕರುಳಿನ ಕುಡಿಯಾದ ಕಂದನಿದೆ. ಅವಳು ಅದನ್ನು ಪೋಷಿಸಲು ತನ್ನ ಜೀವಿತಕ್ಕಾಗಿ ವೇಶ್ಯಾವೃತ್ತಿ ಹಿಡಿದಿದ್ದಾಳೆ. ಹಣದ ಆಸೆಗಾಗಿ ಒಬ್ಬ ವಿಟನನ್ನು ಬರಮಾಡಿಕೊಂಡಿದ್ದಾಳೆ. ಆದರೆ ಸಮಯವನ್ನು ಆಕೆ ಪೂರ್ತಿಯಾಗಿ ಕೂಸಿಗೂ ಕೊಡಲಾರಳು, ವಿಟನಿಗೂ ಕೊಡಲಾರಳು. ಅದೋ ಆಗಾಗ ಎದ್ದು ಅಳುತ್ತದೆ. ಅದನ್ನು ಹಾಲುಣಿಸಿ ಸಮಾಧಾನ ಪಡಿಸಿ ಮಲಗಿಸಲು ಹೋದರೆ ಇತ್ತ ಹಣ ತೆತ್ತ ವಿಟ ಗದರುತ್ತಾನೆ. ಇದೇ ರೀತಿ ಇದ್ದಕ್ಕಿದ್ದಂತೆಯೇ ಧನಿಕನಾಗಬೇಕೆಂಬವನ ಪರಿಸ್ಥಿತಿ. ಅತ್ತ ಧರ್ಮ ಪ್ರಜ್ಞೆಯ ಕೂಸು ಆಗಾಗ ಅಳುತ್ತದೆ ; ಇತ್ತ ಧನದಾಸೆ ಎಂಬ ವಿಟ ಗದರುತ್ತಾನೆ. ಅವನ ಅಂತರಾತ್ಮ ಚುಚ್ಚುತ್ತದೆ. ಆದರೂ ಅದನ್ನು ಸಂತೈಸುತ್ತ ಹಣ ಗಳಿಕೆಯಲ್ಲಿ ತೊಡಗುತ್ತಾನೆ.

ಸೂಳೆ–ಕೂಸು–ವಿಟ ಈ ಉದಾಹರಣೆ ಬಿಟ್ಟು, ಇನ್ನಾವ ಉದಾಹರಣೆಯಿಂದ ವ್ಯಕ್ತಿಯ ಹೊಯ್ದಾಟವನ್ನು ಇಷ್ಟು ಪರಿಣಾಮಕಾರಿಯಾಗಿ ಚಿತ್ರಿಸಲು ಸಾಧ್ಯ ? ಆದ್ದರಿಂದ ಇಂಥ ವಿಲಕ್ಷಣ ಉದಾಹರಣೆಗಳ ಅಂತರಾರ್ಥ ಅರಿಯದೆ, ನಾವು ಬಾಲಿಶ ಬುದ್ಧಿಯಿಂದ 'ಇಸ್ಸೀ' ಎಂದು ಜಿಗುಪ್ಸೆ ಪಟ್ಟು, ಅಂಥ ವಚನಗಳೇ ಪ್ರಕ್ಷಿಪ್ತ ಎಂದರೆ ಆದೀತೆ ?

ಏಕೇಶ್ವರವಾದ—ಏಕದೇವೋಪಾಸನೆ

ಇಡೀ ಜಗತ್ತಿನಲ್ಲಿ ದೇವರ ಸ್ಥಾನವನ್ನು ಅತ್ಯಂತ ಉಚಮಟ್ಟದಲ್ಲಿರಿಸಿ, ದೇವರ ಪಾವಿತ್ರ್ಯವನ್ನು ಕಾಪಾಡುವ ಧರ್ಮಗಳೆಂದರೆ ಲಿಂಗಾಯತ ಧರ್ಮ ಮತ್ತು ಇಸ್ಲಾಂ ಮಾತ್ರ. ಇವು ಏಕದೇವೋಪಾಸನೆಯನ್ನು (*Monotheism*) ಬಹಳ ಒತ್ತಿ ಒತ್ತಿ ಹೇಳುವವು.

ಬಸವಣ್ಣನವರು ಪುರುಷನ ಏಕಪತ್ನಿ ನಿಷ್ಠೆ, ಹೆಂಡತಿಯ ಏಕಪತಿ ನಿಷ್ಠೆಗಳನ್ನು ಒತ್ತಿಹೇಳಿದಂತೆ, ದೇವರನ್ನು ಕುರಿತೂ ಪಾತಿವ್ರತ್ಯವನ್ನು ಪ್ರತಿಪಾದಿಸುವರು. "ಅನ್ಯದೈವವೆಂಬುದು ಹಾದರ" ಎಂದರು. ಇದು ತುಂಬಾ ಒರಟಾಗಿ ಇರಬಹುದು. ಆದರೂ ಒಂದು ಕಟು ಸತ್ಯ.

ಅನ್ಯದೈವ ಈ ಪದವನ್ನು ಎರಡು ರೀತಿ ಬಳಸಬಹುದು.

(1) ಜಗತ್ ಕರ್ತನಲ್ಲದ ಉಳಿದ ದೈವಂಗಳೆಲ್ಲ **"ಅನ್ಯ ದೈವಂಗಳು"**

(2) ಲಿಂಗವಂತನಿಗೆ ಗುರು ತೆತ್ತಿಗನಾಗಿ ಅನುಗ್ರಹಿಸಿ ಕೊಟ್ಟ ಇಷ್ಟಲಿಂಗದ ಹೊರತು ಉಳಿದುವು ಅನ್ಯದೈವಂಗಳು.

ಒಬ್ಬ ಗೃಹಿಣಿಗೆ ಪಾತಿವ್ರತ್ಯದ ತತ್ತ್ವದಲ್ಲಿ (*concept*) ವಿಶ್ವಾಸವಿರಬೇಕು. ತನ್ನ ಗಂಡನನ್ನು ಕುರಿತು ನಿಷ್ಠೆಯನ್ನು ಬೆಳಸಿಕೊಳ್ಳಬೇಕು. ಸದ್ಗೃಹಸ್ಥನಿಗೆ ನೀತಿವಂತಿಕೆಯಲ್ಲಿ ವಿಶ್ವಾಸವಿರಬೇಕು. ತನ್ನ ಹೆಂಡತಿಯನ್ನು ಕುರಿತು 'ನಿಷ್ಠೆ' ಇರಬೇಕು; ಅದೇ ರೀತಿ ನಿಜ ಭಕ್ತನಿಗೆ ಸೃಷ್ಟಿಕರ್ತಕನಾದ ದೇವರಲ್ಲಿ ಶ್ರದ್ಧೆ ಇರಬೇಕು. ಗುರುವು ಚುಳುಕಾಗಿಸಿ ಕೊಟ್ಟ ಇಷ್ಟಲಿಂಗದಲ್ಲಿ ನಿಷ್ಠೆ ಇರಬೇಕು. ತನಗೆ ಸೀರೆ-ಒಡವೆಗಳನ್ನು ಗಂಡನಿಗಿಂತಲೂ ಹೆಚ್ಚಾಗಿ ತಂದುಕೊಡುತ್ತಾನೆಂದು ಪರಪುರುಷನನ್ನು ಸ್ತ್ರೀ ಬಯಸುವುದು ಹಾದರವಾದಂತೆ ಹಣದಾಸೆಗೋ, ವರದಾಸೆಗೋ, ಸಂತಾನದಾಸೆಗೋ ಕರ್ತನಾದ ದೇವರನ್ನು ಬಿಟ್ಟು ಅನ್ಯದೈವಂಗಳನ್ನು ಆಶ್ರಯಿಸುವುದು ಹಾದರವೆ. ಆದ್ದರಿಂದ ಏಕದೇವನಿಷ್ಠೆಯನ್ನು, ಪತಿವ್ರತೆಯ ಪತಿನಿಷ್ಠೆಯನ್ನು ಉದಾಹರಣೆಯಾಗಿ ಕೊಡುವ ಮೂಲಕ, ಕಂಡಕಂಡಲ್ಲಿಗೆ ಮನಸ್ಸು ಹರಿಸುವ ಚಂಚಲ ಭಕ್ತಿಯನ್ನು ಪತಿವ್ರತೆಯಲ್ಲದವಳ ಉದಾಹರಣೆ ಕೊಡುವ ಮೂಲಕ ಮಾತ್ರ ಚಿತ್ರಿಸಲು ಸಾಧ್ಯ ! ಡಾ॥ ಎಲ್. ಬಸವರಾಜು ಅವರು "ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೋ" (618) ಎಂಬ ವಚನವನ್ನು ಪ್ರಕ್ಷೇಪ ಎನ್ನುವುದರ ಮೂಲಕ ತೀರಾ ಸ್ವಾತಂತ್ರ್ಯ ತೆಗೆದುಕೊಂಡು, ಮಹಾಪ್ರಮಾದ ಎಸಗಿದ್ದಾರೆ. ಬಹಳ ಹಗುರವಾಗಿ ಹೀಗೆ ಬರೆಯುತ್ತಾರೆ- "ಹೆಂಗಸೆಂದರೆ, ಹಾದರವೆಂದರೆ ಎಲ್ಲರಿಗೂ ಕುತೂಹಲ. ಈ ಉದ್ದೇಶದಿಂದ ಬಸವಣ್ಣನವರು ಬಳಸಲು ಸಾಧ್ಯವೇ? (ಶ್ರೀಯುತರು ಇದು ಬಸವಣ್ಣನವರ ರಚನೆ ಅಲ್ಲವೆಂದಿದ್ದಾರೆ.)

"ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೋ" ಎಂಬ ವಚನವು ತಮ್ಮ ಅನುಯಾಯಿಗಳಲ್ಲಿ ನಿಷ್ಠೆಯನ್ನು ಗಟ್ಟಿಗೊಳಿಸಲು ಗುರುವಾಗಿ ಬಸವಣ್ಣನವರು ಹೇಳಿದ ಮಹಾಬೋಧೆ. ಇನ್ನೊಂದು ವಚನದಲ್ಲಿ (618) ಹೀಗೆ ಹೇಳುತ್ತಾರೆ :

ಬೇಡ ಬೇಡ ಅನ್ಯ ದೈವದ ಸಂಗ ಹೊಲ್ಲ
ಅನ್ಯದೈವವೆಂಬುದು ಹಾದರ ಕಾಣಿರೋ

ಒಬ್ಬ ಹುಡುಗಿ ಮೊದಲಿನಿಂದಲೂ ಸಚ್ಚಾರಿತ್ರ್ಯ ಸಂಪನ್ನೆಯಾಗಿರುವುದು ಅಗತ್ಯ. ಏನೋ ಸಣ್ಣವಯಸ್ಸಿನಲ್ಲಿ ದಾರಿ ತಪ್ಪಿದಳು ಎಂದುಕೊಂಡರೂ, ಮದುವೆಯಾದ ಮೇಲಾದರೂ ಗಂಡನಿಗೆ ನಿಷ್ಠಳಾಗಿ ಇರಬಾರದೆ? ಹಾಗೆಯೇ ಇಷ್ಟಲಿಂಗ ದೀಕ್ಷೆಯ ಅಮೂಲ್ಯ ಅವಕಾಶ ಸಿಗುವ ಮೊದಲು, ಭಕ್ತಿಯ ತೃಪ್ತಿಗಾಗಿ ಕಂಡ ಕಂಡ ಗಿಡ, ಮರ, ಕಲ್ಲು, ನೀರು, ನಾಗರಕಲ್ಲು, ಏನೆಲ್ಲ ಪೂಜಿಸಿದ್ದಾಯಿತು. ದೀಕ್ಷೆಯನ್ನು ಪಡೆದು ಧರ್ಮಾನುಯಾಯಿಯಾದ ಮೇಲೂ ಏಕದೇವನಿಷ್ಠೆ ಬೆಳೆಸಿಕೊಳ್ಳದೆ ಮೊದಲಿನಂತೆಯೇ ಇದ್ದರೆ? ತಾನು ಎಲ್ಲ ರೀತಿಯಿಂದ ಚೆನ್ನಾಗಿ ನೋಡಿಕೊಂಡರೂ ಹೆಂಡತಿ ಪರ-ಪುರುಷನ ಮೇಲೆ ಕಣ್ಣು ಹಾಕಿದರೆ ಗಂಡನು ಎಷ್ಟು ತಪ್ತನಾಗುವುದಿಲ್ಲ. ಅದೇ ರೀತಿ

ತಾನು ಎಲ್ಲ ರೀತಿಯಿಂದ ಚೆನ್ನಾಗಿ ನೋಡಿಕೊಂಡರೂ ಗಂಡನು ಪರಸ್ತ್ರೀ ಸ್ನೇಹವನ್ನು ಬೆಳೆಸಿಕೊಂಡರೆ ಹೆಂಡತಿ ಅದೆಷ್ಟು ತಳಮಳಗೊಳ್ಳುವುದಿಲ್ಲ? ಅದೇ ರೀತಿ ನಿಷ್ಠೆಯಿಲ್ಲದ ಭಕ್ತರನ್ನು ಕಂಡಾಗ ಧರ್ಮಗುರು ಬಸವಣ್ಣನವರೂ ಅಷ್ಟೇ ತಪ್ತರಾಗುವರು, ತಳಮಳಗೊಳ್ಳುವರು.

ಇನ್ನಷ್ಟು ಕಠೋರವಾಗಿ, "ಉಡಿಸುವ ತೊಡಿಸುವ ಗಂಡನಿದ್ದಂತೆ, ಜೋಡ ಮಿಂಡಂಗೆ ಕಣ್ಣು ಚೆಲ್ಲುವಳ ಕೇಡಿಂಗೆ ಬೆರಗಾದೆ ನಾನು," (619) ಎನ್ನುವರು. ಈ ವಚನವು ಡಾ॥ ಬಸವರಾಜು ಅವರ ದೃಷ್ಟಿಯಲ್ಲಿ ಕುಕವಿಯ ರಚನೆ ! ಹಾಗೆ ಭಾವಿಸಬೇಕಿಲ್ಲ. ಬಸವಣ್ಣನವರ ಸ್ವಂತ ರಚನೆ ; ಮತ್ತು ನಾವು ಸಂಕೋಚ ಪಟ್ಟುಕೊಳ್ಳುವಂಥದೇನೂ ಇಲ್ಲ ಇದರಲ್ಲಿ.

ಬಸವಣ್ಣನವರನ್ನು ಇಲ್ಲಿ ಒಬ್ಬ ತಂದೆಗೆ ಹೋಲಿಸೋಣ. ಆತ ಕಷ್ಟಪಟ್ಟು ಅತ್ಯುತ್ತಮ ವರನನ್ನು ಹುಡುಕಿ ತನ್ನ ಮಗಳಿಗೆ (ಭಕ್ತನಿಗೆ) ಲಿಂಗಪತಿಯೊಡನೆ ವಿವಾಹ (ಲಿಂಗದೀಕ್ಷೆ) ಮಾಡಿಸಿದ್ದಾನೆ. ಆ ಗಂಡನೋ ಚೆಲುವ, ಶ್ರೀಮಂತ. ಉಣ್ಣಿಸಿ, ಉಡಿಸುವುದರಲ್ಲಿ, ಪ್ರೀತಿಸುವುದರಲ್ಲಿ ಏನೂ ಕೊರತೆ ಮಾಡಿಲ್ಲ. ಅಂಥ ಗಂಡನನ್ನು ಬಿಟ್ಟು ಅಥವಾ ವಂಚಿಸಿ ಈತನ ಮಗಳು (ಬಸವ ಭಕ್ತರು) ಕಂಡ ಕಂಡ ದೈವಂಗಳೊಡನೆ ಚೆಲ್ಲಾಟವಾಡ ಹೋದರೆ ಯಾವ ತಂದೆ ಸಹಿಸಬಹುದು? ಏಕೆ, ಜಗತ್ಕರ್ತನಾದ ದೇವನು ಇವರಿಗೆ ವರ ಕೊಡಲಾರನೆ ?

ಈ ವಚನಗಳು ಬಸವ ಧರ್ಮದ ಆಶ್ರಯದಲ್ಲಿ ಇದ್ದವರು, ಬಂದವರಿಗೆ ಹೇಳುವ ಮಾತುಗಳು. ನಾವು ಬಸವಶ್ರೀಯಂತಹ ಮಕ್ಕಳಿಗೆ ಹೇಳುತ್ತೇವೆ. "ನಿಮಗೆ ಇಲ್ಲೇ ಹೊಟ್ಟೆತುಂಬುವಷ್ಟು ಊಟ-ತಿಂಡಿ ಇರುತ್ತದೆ. ಯಾರಾದರೂ ಎಲ್ಲೆಲ್ಲೋ ಕೊಡುವುದನ್ನು ತಿನ್ನಬಾರದು." ಎಂದು. ಈ ಎಚ್ಚರಿಕೆಯ ಮಾತನ್ನು ಎಲ್ಲ ಪಾಲಕರು ತಮ್ಮ ತಮ್ಮ ಮಕ್ಕಳಿಗೆ ಹೇಳುತ್ತಾರೆ. ಆಯಾ ಸಂದರ್ಭದ ಹಿನ್ನೆಲೆಯಲ್ಲಿ ಅರ್ಥ ಮಾಡಬೇಕೆ ವಿನಾ, ಹಾಗೆ ಪಾಲಕರು ಹೇಳುವುದು ತಪ್ಪು ಎನ್ನುವುದು ಸರಿಯಲ್ಲ, ಬೇರೆಯವರು ಕೊಟ್ಟ ತಿಂಡಿ ತಿನ್ನಬೇಡ ಎಂದು ಪಾಲಕರು ಹೇಳುವುದು ತಪ್ಪೆನ್ನಲಾಗದು. ಬೈಬಲಿನಲ್ಲಿ ಏಸುವು, ಕುರಾನಿನಲ್ಲಿ ಮೊಹಮ್ಮದ್ ಪೈಗಂಬರರು ಹೀಗೆಯೇ ತಮ್ಮ ಅನುಯಾಯಿಗಳಿಗೆ ಎಚ್ಚರಿಕೆ ನೀಡಿರುವುದನ್ನು ಕಾಣುತ್ತೇವೆ.

ಹೀಗೆ ತಮ್ಮ ಧರ್ಮಾನುಯಾಯಿಗಳಿಗೆ ಗುರುಬಸವಣ್ಣನವರು ನೀಡಿದ ಎಚ್ಚರಿಕೆಯ ಬೋಧೆಯ ಕೆಲವು ವಚನಗಳನ್ನು, ಅವುಗಳ ಮರ್ಮವನ್ನೇ ಅರಿಯದೆ ಸಾರಾಸಗಟಾಗಿ ಪ್ರಕ್ಷೇಪವೆಂದು ನಿರಾಕರಿಸಿರುವುದನ್ನು ನೋಡಿದರೆ ಡಾ॥ ಎಲ್. ಬಸವರಾಜು ಅವರು ವಚನಗಳನ್ನು ಅರ್ಥ ಮಾಡುವುದರಲ್ಲಿ ನಿಜಕ್ಕೂ ಸೋತಿದ್ದಾರೆ ಎನ್ನಿಸುತ್ತದೆ.

ವಚನ ಸಾಹಿತ್ಯ-ಮೌಲ್ಯ ವಿವೇಚನೆ

—ಡಾ॥ ಸಿ. ಪಿ. ಕೆ, ಮೈಸೂರು

[ವಚನ ವಿವೇಚನೆ ಎಂಬ ಕೃತಿಯು 1990 ರಲ್ಲಿ ಮುದ್ರಣಗೊಂಡಿದ್ದು ಡಾ॥ ಸಿ.ಪಿ. ಕೆಯವರು ಕೆಲವು ಮಾತುಗಳನ್ನು ಅತ್ಯುತ್ತಮವಾಗಿ ಬರೆದಿದ್ದಾರೆ. ಕಲ್ಯಾಣ ಕಿರಣದ ಪ್ರಬುದ್ಧ ಓದುಗರು ಓದಿ, ಸಂತೋಷಪಡಲೆಂದು ಪುಸ್ತಕದಿಂದ ಎತ್ತಿ ಪ್ರಕಟಿಸಲಾಗಿದೆ. – ಸಂ]

ವಚನ ಸಾಹಿತ್ಯ ಮೌಲ್ಯಗಳ ಒಂದು ಸಂಕೀರ್ಣ: ಅದು ಹಲವಾರು ಶ್ರೇಯಸ್ಕರ ಮೌಲ್ಯಗಳನ್ನು ಗರ್ಭೀಕರಿಸಿಕೊಂಡಿದೆ ಮಾತ್ರವಲ್ಲ, ತನಗೆ ತಾನೆ ಒಂದು ಮಹತ್ವದ ಮೌಲ್ಯವಾಗಿದೆ. ಈ ಮೌಲ್ಯ ಸಮುಚ್ಚಯದ ಅನುಸಂಧಾನ ಇಂದಿಗೂ ಅತ್ಯಂತ ಪ್ರಸ್ತುತ ಮತ್ತು ಪ್ರಯೋಜಕ.

ಹನ್ನೆರಡನೆಯ ಶತಮಾನದಲ್ಲಿ ಸಂಘಟಿಸಿದ ಶರಣ-ಕ್ರಾಂತಿಯ ಮಾಧ್ಯಮವೂ ಹೌದು, ಫಲವೂ ಹೌದು ವಚನ ವಾಙ್ಮಯ. ಆದ್ದರಿಂದ ವಚನ ವಿವೇಚನೆಯೆಂದರೆ ಶರಣರ ಪರಿಕಲ್ಪನೆಯ ಬದುಕಿನ ವಿವೇಚನೆಯೆ ಸರಿ. ಸಾಹಿತ್ಯ ಪ್ರಜ್ಞೆಯಲ್ಲ, ಜೀವನ ಪ್ರಜ್ಞೆ-ಅದರಲ್ಲೂ ಸಮಷ್ಟಿ ಜೀವನದ ಪ್ರಜ್ಞೆ—ವಚನ ಸಮುದಾಯದ ಮೂಲ ಪ್ರೇರಣೆಯಾಗಿದೆ. ಶಬ್ದಾರ್ಥಗಳ ಸಂಯೋಗ ಎಂಬ ನಿಷ್ಪತ್ತಿಯಷ್ಟೆ ಅಲ್ಲದೆ, ಸಹಿತ- ಎಂದರೆ ಹಿತದಿಂದ ಕೂಡಿದ್ದು- ಎಂಬ ನಿಷ್ಪತ್ತಿಯೂ ನಿಲ್ಲುತ್ತದೆ, ವಚನ ಸಾಹಿತ್ಯ ಸಂದರ್ಭದಲ್ಲಿ.

ನಾವು ನೆನಪಿಡಬೇಕು, ಅಂದು ನಡೆದದ್ದು ಕೇವಲ ಒಂದು ಸುಧಾರಣೆಯಲ್ಲ. ಚಳುವಳಿಯಲ್ಲ, ಒಂದು ಕ್ರಾಂತಿ ಎಂಬುದನ್ನು. ಶರಣರು ತಮ್ಮ ಕಾಲಕ್ಕಿಂತ ಮುಂದೆ ಹೋಗಿ ಆಲೋಚಿಸಿದ್ದರಿಂದ ಮತ್ತು ಅನುಷ್ಠಾನಕ್ಕೂ ಇಳಿಸಿದ್ದರಿಂದ, ಅದಕ್ಕೆಲ್ಲ ಆ ಯುಗ ಇನ್ನೂ ಪಕ್ವವಾಗಿಲ್ಲದ್ದರಿಂದ ಆ ಕ್ರಾಂತಿಯ ಯಶಸ್ಸು ಅಲ್ಪಾವಧಿಯದಾಗುವುದು ಅನಿವಾರ್ಯವಾಯಿತು. ಆದರೆ ಈ ಹೊತ್ತು ನಾವು ಶರಣರ ವಿಚಾರಧಾರೆಯನ್ನು ಕಡೆಯಪಕ್ಷ ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿದ್ದೇವೆ. ಹಾಗೆ ನೋಡಿದರೆ, ಅವರು ಇಂದಿಗೂ ಮುಂದಿದ್ದಾರೆ ಎನಿಸದಿರದು.

ಒಂದು ಕಡೆ ಪುರೋಹಿತಶಾಹಿಯನ್ನು ಪ್ರತಿಭಟಿಸಿ, ಇನ್ನೊಂದು ಕಡೆ ರಾಜಶಾಹಿಯನ್ನು ಧಿಕ್ಕರಿಸಿ, ಅನಿಷ್ಟ ಜಡ ವ್ಯವಸ್ಥೆಯನ್ನು ಛಿದ್ರಗೊಳಿಸುವ, ತನ್ಮೂಲಕ ಜನಶೋಷಣೆಯ ಸರ್ವ ಪ್ರಕಾರಗಳಿಗೂ ಪೂರ್ಣವಿರಾಮ ಹಾಕಿ ಸಕಲ ಜೀವಾತ್ಮರ ಲೇಸನ್ನು -ಸರ್ವೋದಯವನ್ನು- ಸಾಧಿಸುವ ಆಶಯ ವಚನಕಾರರದಾಗಿತ್ತು. ಸಮಾನತೆಯ ಅಡಿಪಾಯದ ಮೇಲೆ ನಿಂತ ನವಸಮಾಜವೊಂದರ ನಿರ್ಮಾಣ ಅವರ ಗುರಿಯಾಗಿತ್ತು; ಒಂದು ತೆರನಾದ ಪ್ರಜಾಪ್ರಭುತ್ವದ ಸ್ಥಾಪನೆ ಆ ಜನಪರ ಆಂದೋಲನದ ಧ್ಯೇಯವಾಗಿತ್ತು. 'ತಮಂಧಘನ'ವಾಗಿದ್ದ ಸಮಾಜಕ್ಕೆ 'ಶಿವನ ಪ್ರಕಾಶ'ವನ್ನು ಹಾಯಿಸುವ ಕಾಯಕವನ್ನು ಕೈಗೊಂಡರು, ಶರಣರು.

"ಆಸು ಒಲಿದಂತೆ ಹಾಡುವೆ"ಎಂಬ ಬಸವಣ್ಣನವರ ಮಾತು ವಚನ ವೈಶಿಷ್ಟ್ಯವನ್ನು ಸೂಚಿಸುವುದಷ್ಟೆ ಅಲ್ಲದೆ, ಸಂಪ್ರದಾಯ ವಿರೋಧಿ ಧೋರಣೆಯನ್ನು, ಸಮರ್ಥವಾಗಿ ಸಂಕೇತಿಸುತ್ತದೆ, ವೇದ ಶಾಸ್ತ್ರಾಗಮ ನಿಷ್ಠವಾದ ಪುರೋಹಿತ ಶಾಹಿಯನ್ನು ಶರಣರು ನೇರವಾಗಿಯೆ ಖಂಡಿಸಿ ನಿರಾಕರಿಸಿದರು. ಆದರೆ ಅವರ ರಾಜತ್ವನಿರಾಕಾರಣ ಅಷ್ಟು ಪ್ರಖರವಾಗಿರದೆ, ಪರೋಕ್ಷವಾದದ್ದು. ರಾಜಪ್ರಭುತ್ವ ಪ್ರೋತ್ಸಾಹಿಸುವ ಎಲ್ಲ ಮೌಲ್ಯಗಳನ್ನು ಅಥವಾ ಅಪಮೌಲ್ಯಗಳನ್ನು ಶರಣರು ಅಲ್ಲಗಳೆದರೆಂಬುದನ್ನು ಗಮನಿಸಬೇಕು. "ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ?" ಎಂಬ ಆಯ್ದಕ್ಕಿ ಲಕ್ಕಮ್ಮನ ಉಕ್ತಿಯಲ್ಲಿ, ಬಿಜ್ಜಳನ ಭಂಡಾರ ಎಮಗೇಕಯ್ಯ ಎಂಬ ಬಸವಣ್ಣನವರ ಉಕ್ತಿಯಲ್ಲಿ ರಾಜತ್ವ ವಿರೋಧಿ ನಿಲುವು ಇಂಗಿತವಾಗಿದೆ. ಶರಣರಾದರೊ 'ನಿರಾಶಾ ಮಹಾತ್ಮ'ರು. ಕಲ್ಯಾಣದ ಕ್ರಾಂತಿ ಬಿಜ್ಜಳನ ಕೊಲೆಯಲ್ಲಿ ಪರ್ಯವಸಾನಗೊಂಡಿತೆಂದು ಹೇಳುತ್ತಾರೆ. ಅದು ಎಷ್ಟರ ಮಟ್ಟಿಗೆ ಐತಿಹಾಸಿಕ ಸತ್ಯವೋ, ಆ ಕೊಲೆಗೆ ಯಾರು ಕಾರಣರೋ ಖಚಿತವಾಗಿ ತಿಳಿಯದು. ಆದರೆ ರಾಜಶಾಹಿಯ ನಿರಾಕಾರಣ, ನಿರಸನಗಳಿಗೆ ಅದೊಂದು ಸಂಕೇತವೆಂದು ಭಾವಿಸಬಹುದು.

ಕಲ್ಯಾಣದ ಸಂಕ್ರಾಂತಿ ನಮಗೆ ಸ್ವಲ್ಪಮಟ್ಟಿಗೆ ಈಚಿನ ಫ್ರೆಂಚ್ ಮಹಾಕ್ರಾಂತಿಯನ್ನು ನೆನಪಿಸುತ್ತದೆ. ಫ್ರಾನ್ಸಿನ ಕ್ರಾಂತಿ ಕೇವಲ ರಾಜಕೀಯವಾದುದಲ್ಲ. ಮೂಲತಃ ಅದು ಬೌದ್ಧಿಕವಾಗಿದ್ದು, ಸ್ಥಗಿತ ಸಾಮಾಜಿಕ ಆರ್ಥಿಕ ವ್ಯವಸ್ಥೆಯ ವಿರುದ್ಧ ನಡೆದದ್ದು ಎಂದು ಚರಿತ್ರಕಾರರು ಹೇಳುತ್ತಾರೆ. ಸ್ವಾತಂತ್ರ್ಯ, ಸಮಾನತೆ ಭ್ರಾತೃತ್ವ(***Liberty, Equality, Fraternity***) ಗಳು ಅದರ ಮಾರ್ಗದರ್ಶನ ಸೂತ್ರಗಳಾಗಿದ್ದುವು. ವೀರಶೈವ ಕ್ರಾಂತಿಯ ಸ್ವರೂಪವೂ ಇಂಥದೇ. ಮೂಲಭೂತವಾಗಿ ಅದು ವೈಚಾರಿಕವಾದುದು.

ಒಂದು ದೃಷ್ಟಿಯಿಂದ ವಚನಕಾರರ ಕ್ರಾಂತಿಗೆ ಸದೃಶವಾದದ್ದು ಪ್ರಾಯಶಃ ಜಗತ್ತಿನ ಇತಿಹಾಸದಲ್ಲಿ ಇನ್ನೊಂದು ಕಂಡುಬರುವುದಿಲ್ಲ ಎಂದರೆ ಉತ್ಪ್ರೇಕ್ಷೆಯಾಗಲಾರದು. ವಚನಕಾರರು ಸಾರತಃ ಅಧ್ಯಾತ್ಮಜೀವಿಗಳು, ಅವರ ಆಂದೋಲನ ಪ್ರಧಾನವಾಗಿ ಧಾರ್ಮಿಕವಾದದ್ದು, ಆದರೆ ಅದು ಅಪ್ರತ್ಯಕ್ಷವೆಂಬಂತೆ ಸಾಮಾಜಿಕ, ಆರ್ಥಿಕ ಆಯಾಮಗಳನ್ನೂ ಮೈಗೂಡಿಸಿಕೊಂಡಿದೆಯೆಂಬುದು ಅದರ ಅನನ್ಯತೆ. ಎಂತಲೇ ಅದು ಬಹುಮುಖ ಕ್ರಾಂತಿ, ಸಮಗ್ರಕ್ರಾಂತಿ.

ಶರಣರು ಇಹ ಪರಗಳನ್ನು, ಲೌಕಿಕ ಪಾರಲೌಕಿಕಗಳನ್ನು ಬೇರೆ ಬೇರೆ ಘಟಕಗಳನ್ನಾಗಿ ಬಗೆಯಲಿಲ್ಲ; ಎರಡನ್ನೂ ಏಕಾಖಂಡವಾಗಿ ತೆಗೆದುಕೊಂಡರು ಎಂಬುದು ಮುಖ್ಯ. ಸ್ವರ್ಗ ಮರ್ತ್ಯಗಳು ಬೇರೆ ಬೇರೆ ಎಂಬ ನಂಬಿಕೆಯೇ ಎಲ್ಲ ಅನರ್ಥ, ಅನಾಚಾರಗಳ ಬೇರು. ಶರಣರಲ್ಲಿ ಅದಕ್ಕೆ ಅವಕಾಶವಿಲ್ಲ. "ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ" ಎಂದು ಘೋಷಿಸುತ್ತಾರೆ. ಬಸವಣ್ಣ, "ಆಚಾರವೇ ಸ್ವರ್ಗ, ಅನಾಚಾರವೇ ನರಕ" ಇತ್ಯಾದಿಯಾಗಿ ಪುನರ್ ಮೌಲ್ಯಮಾಪನ ಮಾಡುತ್ತಾರೆ. ಈ

ನೆಲದ ಮೇಲೆಯೆ ಸ್ವರ್ಗವನ್ನು ಅರಳಿಸುವುದು, ಮರ್ತ್ಯವನ್ನು ಕೈಲಾಸವನ್ನಾಗಿಸುವುದು ಶರಣರ ಆದರ್ಶವಾಗಿತ್ತು. ಸ್ವರ್ಗವೆಂಬುದು ಎಲ್ಲೋ ಇದೆ ಎಂದು ನಂಬಿದರೂ, ಅದರ ಕೀಲಿಕೈ ಮರ್ತ್ಯದಲ್ಲಿದೆಯೆಂಬುದನ್ನು ಮರೆಯಬಾರದು. ಸ್ವರ್ಗ ಪ್ರವೇಶದ ಅರ್ಹತೆಯನ್ನು ಭೂಮಿಯಲ್ಲೆ ಸಂಪಾದಿಸಬೇಕು. "ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು". ವಚನಕಾರರ ದೃಷ್ಟಿಯಲ್ಲಿ ಮುಕ್ತಿ ಎಂಬುದು ಸತ್ತ ಮೇಲೆ ಪಡೆಯುತಕ್ಕದ್ದಲ್ಲ. ಬದುಕಿರುವಾಗಲೆ ಗಳಿಸಬೇಕಾದದ್ದು. ಅದು ಅಂಧಶ್ರದ್ಧೆ ಕಂದಾಚಾರಗಳಿಂದ ಬಿಡುಗಡೆ, ಶೋಷಣೆಯಿಂದ ಬಿಡುಗಡೆ, ಬಡತನದಿಂದ ಬಿಡುಗಡೆ, ಮತ್ತು ಸಾಮಾಜಿಕ ಅಶಿವದಿಂದ ಎಂತೋ ಅಂತೆ ಮಾನಸಿಕ ಅಶಿವದಿಂದ ಬಿಡುಗಡೆ, ಅವರ ದೃಷ್ಟಿ ಆಶ್ಚರ್ಯಕರವಾಗಿ ವೈಜ್ಞಾನಿಕವಾದದ್ದು. ಶುದ್ಧ ಅಧ್ಯಾತ್ಮಕ್ಕೂ ವೈಜ್ಞಾನಿಕತೆಗೂ ವಿರೋಧವಿಲ್ಲ.

ವಚನಕಾರರ ಆಧ್ಯಾತ್ಮಿಕ ಅಭೀಪ್ಸೆ ಎಷ್ಟು ತೀವ್ರವಾದುದೊ ಅಷ್ಟೇ ಪ್ರಗಾಢವಾದುದು ಅವರ ಸಾಮಾಜಿಕ ಪ್ರಜ್ಞೆ. ಅದಕ್ಕೂ ಬೆನ್ನೆಲುಬಾಗಿರತಕ್ಕದ್ದು ಅವರ ಅತೀವ ಮಾನವೀಯ ಧೋರಣೆ ಮತ್ತು ಜೀವ ಪ್ರೇಮ, ಅವರು ಎಲ್ಲವನ್ನೂ ಆಧ್ಯಾತ್ಮೀಕರಿಸಿದರು, ಆದರೆ ಏನೊಂದನ್ನೂ ಅಮಾನವೀಯಗೊಳಿಸಲಿಲ್ಲ. ಸಾಮಾನ್ಯ ಮನುಷ್ಯ ಶರಣರ ಲಕ್ಷ್ಯ; ಅವನ ಉದ್ಧಾರದ ಬಗ್ಗೆ ಅವರ ಕಳಕಳಿ. ವಾಸ್ತವವಾಗಿ, ವೀರಶೈವ ಧರ್ಮ ದೇವರನ್ನು ನೆಮ್ಮಿಯೂ ಮಾನವ ಕೇಂದ್ರಿತವಾದ ಧರ್ಮ, ಮಾನವೀಯ ಧರ್ಮ. ಹಾಗಲ್ಲದೆ, ಧರ್ಮ ದೈವಕೇಂದ್ರಿತವಾದಾಗಲೇ ಎಲ್ಲ ಕೆಡುಕುಗಳು ತಲೆಯೆತ್ತುವುದು. ಶೋಷಣೆಗೆ ಆಸ್ಪದವಾಗುವುದು, ಯಜ್ಞಯಾಗಾದಿ ಕರ್ಮಕಾಂಡ ವಿಜೃಂಭಿಸುವುದು. ಶರಣರು ಶ್ರೀ ಸಾಮಾನ್ಯನ ಘನತೆಗೆ ಒತ್ತು ಕೊಟ್ಟರು. ಅವನಿಗೆ ಒಂದರ್ಥದಲ್ಲಿ ಆತ್ಮವನ್ನು, ಜೊತೆಗೆ ಆತ್ಮಪ್ರತ್ಯಯವನ್ನು ತಂದುಕೊಟ್ಟರು; ಇದು ಸಾಮಾನ್ಯ ಸಂಗತಿಯಲ್ಲ.

ಜನಸಾಮಾನ್ಯರ ಪಾಲಿಗೆ ಧರ್ಮವನ್ನು ಸ್ಪಷ್ಟೀಕರಿಸಿ ಗ್ರಾಹ್ಯವನ್ನಾಗಿ ಮಾಡಿದ್ದು ವಚನಕಾರರ ಒಂದು ದೊಡ್ಡ ಸಾಧನೆ. ಅವರ ಧರ್ಮದ ಪರಿಕಲ್ಪನೆ ಸರಳವಾದುದು ಮತ್ತು ಯಥಾರ್ಥವಾದುದು. "ದಯವೇ ಧರ್ಮದ ಮೂಲವಯ್ಯಾ" ಎಂದು ಸಾರುತ್ತಾರೆ ಬಸವಣ್ಣ. ಜೀವಕಾರುಣ್ಯ, ಅಹಿಂಸೆ ಸದಾಚಾರಗಳು ಧರ್ಮದ ತಳಹದಿ. ಧರ್ಮ ಬೇರೆ ಮತ ಬೇರೆ. ಮತ ವಿಧಿಗಳನ್ನು, ಆಚರಣೆ (*Rituals*) ಗಳನ್ನು ಪುರಸ್ಕರಿಸುತ್ತದೆ. ಅವುಗಳಿಂದ ಪ್ರಯೋಜನವಿಲ್ಲ. "ಆಚಾರವೆಂಬುದು ಹಾವಸೆಗಲ್ಲು" ಎನ್ನುತ್ತಾರೆ ಬಸವಣ್ಣ. ಹೀಗಾಗಿ ಧರ್ಮದ ನೈಜ ಸ್ವರೂಪವನ್ನು ವಚನಕಾರರು ಅನಾವರಣಗೊಳಿಸಿದರು; ಅದು ಎಲ್ಲರೂ ಅವಲಂಬಿಸಬಹುದಾದ್ದು, ಅನುಸರಿಸಬಹುದಾದ್ದು ಎಂದು ತೋರಿಸಿಕೊಟ್ಟರು.

ಮಾನವೀಯ ದೌರ್ಬಲ್ಯಗಳನ್ನು ಒಪ್ಪಿಕೊಂಡವರು ವಚನಕಾರರು. ಮನುಷ್ಯ ಹುಟ್ಟಿನಿಂದಲೆ ಪರಿಪೂರ್ಣ ಎಂಬುದು ಅವರ ತಿಳುವಳಿಕೆಯಲ್ಲ, ಆದರೆ ವಿಕಾಸದಲ್ಲಿ ಅವರಿಗೆ ವಿಶ್ವಾಸ; ಸಾಧನೆಯಿಂದ ನರ ಹರನಾಗಬಲ್ಲ ಎಂಬುದವರ ನಂಬಿಕೆ. ಎಲ್ಲರಿಗೂ ವೈರಾಗ್ಯವನ್ನು ವಿಧಿಸಬಯಸಲಿಲ್ಲ, ಶರಣರು. ಏಕೆಂದರೆ "ಒಲಿವೆನೆಂಬುದು ಕಾಯ ಗುಣ" ಎಂಬುದನ್ನು ಅವರು ಬಲ್ಲವರಾಗಿದ್ದರು. "ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ...ನೀನೆನ್ನಂತೊಮ್ಮೆ ಒಡಲಗೊಂಡು ನೋಡಾ" ಎಂದು ಶಿವನಿಗೆ ಸವಾಲು ಹಾಕುತ್ತಾನೆ, ಜೇಡರ ದಾಸಿಮಯ್ಯ. ಒಟ್ಟಿನಲ್ಲಿ, ತಪ್ಪು ಮಾಡುವುದು ಮನುಷ್ಯನ ಸ್ವಭಾವ, ಆದರೆ ಅದನ್ನು ತಿದ್ದಿಕೊಳ್ಳಬೇಕು, ಗೆದ್ದು ನಿಲ್ಲಬೇಕು ಎಂಬುದು ಶರಣರ ಮತ. ನಾನಾ ಪ್ರಲೋಭನೆಗಳ ಕಾಟದ ಹಾಗೂ ಅವುಗಳ ವಿರುದ್ಧ ನಡೆದ ಉಗ್ರವಾದ ಹೋರಾಟದ ಜ್ವಲಂತ ದಾಖಲೆಗಳೆ ಆಗಿವೆ, ಬಹುಪಾಲು ವಚನಗಳು.

ಶರಣರ ಜೀವನ ಪ್ರೀತಿಯೂ ಮಹತ್ವದ್ದು. ಸಂಸಾರ ತ್ಯಾಗವನ್ನು ಅವರು ಬೋಧಿಸಲಿಲ್ಲ; ಸಂಸಾರದಲ್ಲಿದ್ದುಕೊಂಡೆ ಧರ್ಮವನ್ನಾಚರಿಸಿ ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು, ದೇವರನ್ನು ಮೆಚ್ಚಿಸಬಹುದು ಎಂಬುದು ಅವರ ನಿಲುವಾಗಿತ್ತು. ಹೆಣ್ಣನ್ನು ಅವರು ಮಾಯೆಯೆಂದು ದೂರಲಿಲ್ಲ; ದೂರೀಕರಿಸಲಿಲ್ಲ. "ಹೆಣ್ಣು ಸಾಕ್ಷಾತ್ ಕಪಿಲಸಿದ್ಧಮಲ್ಲಿಕಾರ್ಜುನ" ಎಂಬ ಸಿದ್ಧರಾಮನ ನುಡಿ ಅರ್ಥಪತ್ತಾದುದು. "ಭಕ್ತನ ಮನ ಹೆಣ್ಣಿಗೊಳಗಾದೊಡೆ, ಮದುವೆಯಾಗಿ ಕೂಡುವುದು"ಎಂದು ಅವನು ಅನುಮತಿ ಕೊಡುತ್ತಾನೆ. "ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ"ಎಂಬ ದಾಸಿಮಯ್ಯನ ಮಾತು ದಾಂಪತ್ಯಕ್ಕೆ ಶರಣರು ಕೊಟ್ಟ ಮನ್ನಣೆಯನ್ನು ಅಭಿವ್ಯಕ್ತಿಸುತ್ತದೆ. ಇಹದ ಬಾಳ್ವೆಯಲ್ಲಿ ಸವಿಯಿದೆ, ಅದನ್ನು ಧರ್ಮಕ್ಕೆ ಅವಿರುದ್ಧವಾಗಿ ಆಸ್ವಾದಿಸಬೇಕು ಎಂಬುದು ವಚನಕಾರರ ಒಟ್ಟಿನ ಧೋರಣೆ. ಅಂತೆಯೆ, ಲೋಕದ ಜವಾಬ್ದಾರಿಯಿಂದ ನುಣುಚಿಕೊಂಡು ಪಲಾಯನ ಮಾಡುವುದನ್ನು ಅದು ಒಪ್ಪುವುದಿಲ್ಲ ; 'ಶಿವಲೋಕ ಭ್ರಮೆ'ಗೆ ಉತ್ತೇಜನ ಕೊಡುವುದಿಲ್ಲ.

ದೇಹವನ್ನು ಶರಣರು ಹೇಯವೆನ್ನಲಿಲ್ಲ ಎಂಬುದು ಗಮನಾರ್ಹ. ದೇಹವೇ ದೇಗುಲ ಎಂದು ಬಸವಣ್ಣ ಅಲ್ಲಮಪ್ರಭು ಇಬ್ಬರೂ ಘೋಷಿಸುತ್ತಾರೆ. ಈ ನಿಲುವಿನಿಂದಾಗಿ ದೇವಾಲಯ ನಿರ್ಮಿತಿಯ ಅನಗತ್ಯತೆ ಸ್ಥಾಪಿತವಾಯಿತು ಹಾಗೂ ತನ್ಮೂಲಕ, ಪುರೋಹಿತಶಾಹಿಯ ಅನಾಹುತಗಳನ್ನು ತಪ್ಪಿಸಿದಂತಾಯಿತು.

ಶರಣರು ಪ್ರಾಣಿ ಬಲಿಯನ್ನು ವಿರೋಧಿಸಿದರು, ಸಮಾಜದಲ್ಲಿ ನೇಮಕಗೊಂಡಿದ್ದ ಮೌಢ್ಯದ ವಿವಿಧ ಪ್ರಕಾರಗಳಿಗೆ ಕೊಡಲಿ ಪೆಟ್ಟು ಕೊಟ್ಟರು. ಕರ್ಮತತ್ತ್ವವನ್ನು ತಿರಸ್ಕರಿಸಿದರು; ಎಲ್ಲಕ್ಕಿಂತ ಮುಖ್ಯವಾಗಿ, ಸಾಮಾನ್ಯ ಜನತೆಯನ್ನು ಸುಲಿಯುವ ಪ್ರಬಲ ಸಾಧನವಾಗಿರುವ ಜ್ಯೋತಿಷವನ್ನು ಖಂಡಿಸಿದರು. ದೇವರು ಧರ್ಮಗಳ ಹೆಸರಿನಲ್ಲಿ ರೂಢಮೂಲವಾಗಿದ್ದ ಎಲ್ಲ ಅನಿಷ್ಟಗಳನ್ನು ಬೇರುಸಹಿತ ಕಿತ್ತೊಗೆಯುವುದು

ಅವರ ಉದ್ದೇಶವಾಗಿತ್ತು. ಒಂದರ್ಥದಲ್ಲಿ ಅವರು ಮೊದಲು ಮಾಡಿದ್ದು ಧರ್ಮದ ಶುದ್ಧೀಕರಣ; ಆನಂತರ, ವ್ಯಕ್ತಿಯ ಹಾಗೂ ಸಮಾಜದ ಶುದ್ಧೀಕರಣ, ಉದ್ಧಾರ.

"ವಿಪ್ರ ಮೊದಲಾಗಿ ಅಂತ್ಯಜ ಕಡೆಯಾಗಿ" ಸರ್ವರೂ ಸಮಾನರು, ತಾರತಮ್ಯ ಹುರುಳಿಲ್ಲದ್ದು ಎಂಬುದನ್ನು ಶರಣರು ಸಾರಿದರು ಮಾತ್ರವಲ್ಲ, ಆಚರಣೆಗೂ ತಂದು ತೋರಿಸಿದರು. ಜಾತಿ ಭೇದಗಳನ್ನು, ಅಸ್ಪೃಶ್ಯತೆಯ ಕಳಂಕವನ್ನು ಅವರು ತತ್ಕಾಲಕ್ಕಾದರೂ ತೊಡೆದು ಹಾಕಿದರು. ಅವರು ಪ್ರಾಧಾನ್ಯವಿತ್ತದ್ದು ಜಾತಿಗಲ್ಲ, ನೀತಿಗೆ. ಸಾಮಾಜಿಕ ಸ್ತರದಲ್ಲಿ ಮಾತ್ರವಲ್ಲದೆ, ಧಾರ್ಮಿಕ ಸ್ತರದಲ್ಲೂ ಸಮಾನತೆ ಅದರಿಂದ ಊರ್ಜಿತವಾಯಿತು; ಎಲ್ಲರಿಗೂ ಅಧ್ಯಾತ್ಮ ಸಾಧನೆಯ ಹಕ್ಕುಗಳು ಪ್ರಾಪ್ತವಾದುವು.

ಪುರುಷರ ಸ್ಥಾನಮಾನವನ್ನೇ ವಚನಕಾರರು ಸ್ತ್ರೀಯರಿಗೂ ನೀಡಿದರೆನ್ನುವುದು ಅತ್ಯಂತ ಪ್ರಾಮುಖ್ಯದ ವಿಚಾರ. ಲಿಂಗವನ್ನು ಪತಿ ಸ್ಥಾನದಲ್ಲಿರಿಸಿ ತಾವು ಸತಿ ಸ್ಥಾನದಲ್ಲಿ ನಿಂತ ಶರಣರು ಹೆಣ್ಣನ್ನು ಕೀಳಾಗಿ ಕಾಣುವುದು ಶಕ್ಯವಿರಲಿಲ್ಲ. ಅಂತೂ ಮಹಿಳೆಯರು ಮತ್ತು ಸಮಾಜದ ನಿಮ್ನವರ್ಗಗಳಿಂದ ಬಂದ ಸಾಮಾನ್ಯರು ಕೂಡ ಎಂತಹ ಬೌದ್ಧಿಕ, ಆಧ್ಯಾತ್ಮಿಕ ಎತ್ತರಕ್ಕೇರಬಲ್ಲರೆಂಬುದನ್ನು ಹನ್ನೆರಡನೆಯ ಶತಮಾನದ ಕ್ರಾಂತಿ ನಿಚ್ಚಳವಾಗಿ ನಿದರ್ಶಿಸಿತು. ಹೆಣ್ಣು ಗಂಡಿನ ಪಾಲಿಗೆ ಕೇವಲ ಕಾಮದ ಗೊಂಬೆಯಲ್ಲ ಅಥವಾ ಸಹಧರ್ಮಿಣಿ ಮಾತ್ರವಲ್ಲ, ಅವಳು ಅವನ ಬದುಕಿನಲ್ಲಿ ಬೌದ್ಧಿಕವಾಗಿ ಭಾಗವಹಿಸುವ 'ವಿಚಾರ ಪತ್ನಿ' ಕೂಡ ಅಗಬಲ್ಲಳು, ಆಗಬೇಕು ಎಂಬುದು ಅಂದು ಸಿದ್ಧವಾದ ಸತ್ಯ.

ವಚನಕಾರರು ಕೊಟ್ಟ ಒಂದು ಚಿರಂತನ ಮಹಾಮೌಲ್ಯವೆಂದರೆ, ಕಾಯಕ. ಅದೊಂದು ಸಂಕೀರ್ಣ ತತ್ವ. ಅದು ಏಕಕಾಲದಲ್ಲಿ ಆಧ್ಯಾತ್ಮಿಕವೂ ಹೌದು, ಸಾಮಾಜಿಕವೂ ಹೌದು. "ಕಾಯಕವೇ ಕೈಲಾಸ" ಎಂಬ ಸೂಕ್ತಿ ಇದನ್ನೇ ಸೂಚಿಸುತ್ತದೆ. "ಲಿಂಗವಾದರೂ ಕಾಯಕದೊಳಗು" ಎಂಬ ಆಯ್ದಕ್ಕಿ ಮಾರಯ್ಯಾನ ಮಾತು ವಿಸ್ತಾರವಾದ ವ್ಯಾಖ್ಯಾನವನ್ನು ಬಯಸುವಂಥದು. "ಕಾಯದ ಕಳವಳ" ಕಾಯಕದಿಂದ ಹರಿಯುತ್ತದೆ ಎನ್ನುತ್ತಾರೆ ಬಸವಣ್ಣ. ಎಂದರೆ, ಅವರಿಂದ ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಕ್ಷೇಮ ಸಿದ್ಧಿಸುತ್ತದೆ. ವ್ಯಕ್ತಿಯ ಮತ್ತು ಸಮಾಜದ ಉತ್ಥಾನಕ್ಕೆ ಕಾಯಕವೇ ಶ್ರೇಷ್ಠ ಸಾಧನ. ಅದು ಜಾತಿ ವಿನಾಶಕ್ಕೂ ಸಮಾನತೆಗೂ ನೆರವಾಗಬಲ್ಲುದು; ಅರ್ಥವ್ಯವಸ್ಥೆಗಂತೂ ದೊಡ್ಡ ಕೊಡುಗೆಯಾಗಬಲ್ಲುದು.

ಕಾಯಕದಂತೆಯೆ ಜಂಗಮ ಎಂಬುದೂ ಶರಣರಿತ್ತ ಒಂದು ಘನವಾದ ಮೌಲ್ಯ. ಎರಡೂ ಒಟ್ಟಿಗೇ ಹೋಗುತ್ತವೆ. ಜಂಗಮ ದಾಸೋಹವೆ ಕಾಯಕದ ಮುಖ್ಯ ಧ್ಯೇಯವಾಗಿತ್ತು ಎಂಬುದನ್ನು ನೆನೆಯಬಹುದು. ಈಗ ಜಂಗಮ ಎಂಬುದನ್ನು ಇನ್ನೂ ವ್ಯಾಪಕವಾದ ಅರ್ಥದಲ್ಲಿ ಸಂಭಾವಿಸಬೇಕಾಗುತ್ತದೆ. "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಎಂಬ ಬಸವಣ್ಣನವರ ಸೂತ್ರ ಈ ದಿಶೆಯಲ್ಲಿ ಪೂರಕವಾಗಬಲ್ಲದು. ಸ್ಥಾವರ

ಎಂದರೆ ಜಡವಾದದ್ದು; ಜಂಗಮವಾದರೊ ಚೈತನ್ಯದ, ಚಲನಶೀಲತೆಯ, ಬೆಳವಣಿಗೆಯ, ನಿರಂತರತೆಯ ದ್ಯೋತಕ. ಈ ದೃಷ್ಟಿಯಿಂದ ಜಂಗಮತೆ ಸಮಾಜದ ಲಕ್ಷಣವಾಗಬೇಕು. ಎಲ್ಲ ಬಂಡಾಯಗಳು, ಕ್ರಾಂತಿಗಳು ದುಡಿಯುವುದು ಅದನ್ನು ಸಾಧಿಸುವುದಕ್ಕಾಗಿಯೆ.

ಶರಣರು ವೀರಶೈವಧರ್ಮ ಪ್ರಚಾರಕ್ಕಾಗಿ, ಜನಜಾಗ್ರತಿಗಾಗಿ, ಸಮಾಜ ಪರಿವರ್ತನೆಗಾಗಿ ಹೊಸ ಮಾಧ್ಯಮವೊಂದನ್ನು ಕಂಡುಕೊಂಡರು; ಅದೇ ವಚನ. ತಿರುಳಿನಂತೆ ವಾಹಕವೂ ನೂತನವಾಗುವುದು ಅನಿವಾರ್ಯವಾಗಿತ್ತು. ಅದು ಇತ್ತ ಗದ್ಯವೂ ಅಲ್ಲದ, ಅತ್ತ ಪದ್ಯವೂ ಅಲ್ಲದ, ಆದರೆ ಪದ್ಯಗಂಧಿಯಾದ ಪ್ರಕಾರ. ಗದ್ಯ ಪದ್ಯಗಳ ಸಮನ್ವಯ ಎನ್ನಬಹುದಾದ ಈ ಪ್ರಕಾರ ವಚನಕಾರರ ಸಮನ್ವಯ ದೃಷ್ಟಿಗೆ ಅನುರೂಪವಾದದ್ದು.

ವಚನವೊಂದು ಅಚ್ಚಗನ್ನಡದ ಮಾಧ್ಯಮ. ಅದರಲ್ಲಿರುವುದು ಜನಭಾಷೆ. ಸಂಸ್ಕೃತ ಅಲ್ಲಿ ಇಲ್ಲವೆಂದಲ್ಲ; ಆದರೆ ಅದು ಕೂಡ ಕನ್ನಡವೇ ಎನಿಸುವಷ್ಟು ಪರಿಚಿತವಾದದ್ದು. ಕನ್ನಡ ಭಾಷೆಯ ಸಮಸ್ತ ಸುಪ್ತ ಶಕ್ತಿಯನ್ನು ವಚನಕಾರರು ಎಚ್ಚರಿಸಿ, ಅದ್ಭುತ ರೀತಿಯಲ್ಲಿ ಬಳಸಿಕೊಂಡರು. ಅಷ್ಟೆ ಅಲ್ಲ, ಅದಕ್ಕೆ ಹೊಸ ಆಯಾಮಗಳನ್ನು ಅಳವಡಿಸಿದರು. ಅವರ ಆದಾನ ಪ್ರದಾನ ಸಾಮರ್ಥ್ಯ ವಚನರಚನೆಯಲ್ಲಿ ಸುವ್ಯಕ್ತವಾಗಿದೆ.

ಮಾತಿಗೆ ಮೀರಿದ ಸೂಕ್ಷ್ಮವಾದ ಅನುಭವಗಳನ್ನು ಕೂಡ- ಅವುಗಳನ್ನು ಅನುಭಾವ ಎನ್ನುವುದೆ ಯುಕ್ತ-ಕನ್ನಡದಲ್ಲಿ ಮೈ ಪಡೆದುಕೊಳ್ಳುವ ಸೋಜಿಗದ ಸಿದ್ಧಿಯನ್ನು ವಚನಗಳಲ್ಲಿ ಕಾಣುತ್ತೇವೆ. ಅತೀಂದ್ರಿಯವಾದ ಅಧ್ಯಾತ್ಮದ ಅಭಿವ್ಯಕ್ತಿ ಕನ್ನಡದಲ್ಲಿ ಸಾಧ್ಯ ಎಂದು ವಚನಕಾರರು ಪ್ರತ್ಯಕ್ಷೀಕರಿಸಿರುವಾಗ, ವೈಜ್ಞಾನಿಕ ವಿಷಯಗಳನ್ನು ಕನ್ನಡ ಮಾಧ್ಯಮದಲ್ಲಿ ಸಂವಹನಗೊಳಿಸುವುದು ಕಷ್ಟವೆಂದು ಇಂದು ಹಲವರು ಹೇಳುವುದು ವ್ಯರ್ಥಾಲಾಪ ಎನಿಸುವುದಿಲ್ಲವೆ ?

ಪ್ರತಿಯೊಂದು ವಚನದ ಅಂತ್ಯದಲ್ಲೂ ಆಯಾ ವಚನಕಾರನ ಅಥವಾ ವಚನಕಾರ್ತಿಯ ಅಂಕಿತವಿರುವುದೊಂದು ವಿಶೇಷ. ತನ್ನ ಇಷ್ಟದೈವಕ್ಕೆ, ಆತ್ಮಸಾಕ್ಷಿಗೆ ಮುಖಾಮುಖಿಯಾಗಿ ಆಯಾ ವ್ಯಕ್ತಿ ತನ್ನ ಅಂತರಂಗವನ್ನು ತೋಡಿಕೊಳ್ಳುವ ಪರಿ ಇಲ್ಲಿದೆ. ತಾವು ಹೇಳುವುದನ್ನು ಪ್ರಮಾಣೀಕರಿಸುವುದಕ್ಕಾಗಿ ಅವರು ಕಡೆಯಲ್ಲಿ ಲಿಂಗ ದಿವ್ಯ ಹಿಡಿಯುವ ಪ್ರಕ್ರಿಯೆ ವ್ಯಕ್ತಿಯ ಅಂಕಿತದಿಂದ ಸಂಕೇತಿತವಾಗುತ್ತದೆ. ಎಂತಲೇ ಪ್ರತಿಯೊಂದು ವಚನವೂ ಪ್ರಾಮಾಣಿಕ, ಅಧಿಕೃತ. ಅದೊಂದು ಮೀಸಲು ಪ್ರಕಾರ; ಅಂದಿನ ವಚನಕಾರರ ಪಾಲಿಗೆ ಅನನ್ಯ ಪ್ರಣಾಳಿಕೆ. ಆದರೆ ಇಂದಿನ ವಚನಕಾರರಿಗೆ ಅದು ಅನಿವಾರ್ಯವಲ್ಲದ, ಅನುಕರಣೆಯ ವಸ್ತು ಮಾತ್ರ.

ವಚನಗಳು ಸಾಹಿತ್ಯವಾಗಬೇಕೆಂದು ಮೂಲತಃ ಉದ್ದಿಷ್ಟವಾದುವಲ್ಲ; ಆದರೂ ಅವುಗಳ ಕಾವ್ಯ ಸತ್ತ್ವ ಅಸಾಧಾರಣವಾದುದು. ಸಾಹಿತ್ಯರಚನೆಯ ನಿಲುವಿನಿಂದ ರಚಿತ

ವಾದ ಅಸಂಖ್ಯ ಕೃತಿಗಳು ಸಾಹಿತ್ಯ ಚರಿತ್ರೆಯಲ್ಲಿ ನೀರಸವಾಗಿ ಸಾಲುಗಟ್ಟಿ ನಿಂತಿರುವಾಗ, ಈ ವಚನವಿದ್ಯಮಾನ ಸ್ವಾರಸ್ಯದ ಸಂಗತಿ; ವಿಸ್ಮಯದ್ದು ಕೂಡ. ಇದಕ್ಕೇನು ಕಾರಣ ? ವಚನಕಾರರು ಸೌಂದರ್ಯ ಮೌಲ್ಯಕ್ಕೆ ಗುರಿಯಿಡದೆ, ಶಿವ ಮೌಲ್ಯವನ್ನು ಹಿಡಿದು ನುಡಿದರು; ಅವರ ನುಡಿಗೆ ಅಯಾಚಿತವಾಗಿ, ಸಹಜವಾಗಿ ಸೌಂದರ್ಯ ಒಲಿದು ಬಂತು.

ರಾಜಾಸ್ಥಾನದಲ್ಲಿ ಪ್ರಾಶಸ್ತ್ಯವಿದ್ದುದು 'ಕವಿ, ಗಮಕಿ, ವಾದಿ, ವಾಗ್ಮಿ'ಗಳಿಗೆ. ವಚನಕಾರರು ಈ ವ್ಯವಸ್ಥೆಯನ್ನು ವಿರೋಧಿಸಿ, ಭಕ್ತಿಗೆ ಅಗ್ರಸ್ಥಾನ ಕೊಡುತ್ತಾರೆ; ಅದನ್ನು ಪರಮ ಮೌಲ್ಯವನ್ನಾಗಿ ಪ್ರತಿಪಾದಿಸುತ್ತಾರೆ. ಬಸವಣ್ಣನವರ ಈ ವಚನಗಳನ್ನು ಲಕ್ಷಿಸಬಹುದು:

ಮಾತು ಬಲ್ಲಾತ ಜಾಣನಲ್ಲ
ಗೀತವ ಬಲ್ಲಾತ ಜಾಣನಲ್ಲ
ಲಿಂಗವ ನೆರೆ ನಂಬಿದಾತ. ಆತ ಜಾಣನು!

ಗೀತವ ಹಾಡಿದೊಡೇನು ?
ಶಾಸ್ತ್ರ ಪುರಾಣವ ಕೇಳಿದೊಡೇನು ?
ವೇದ ವೇದಾಂತವನೋದಿದೊಡೇನು ? ...
ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ.

ಆಡಿದರೇನೊ ಹಾಡಿದರೇನೊ ಓದಿದರೇನೊ
ತ್ರಿವಿಧ ದಾಸೋಹವಿಲ್ಲದನ್ನಕ್ಕ ?
ಆಡದೇ ನವಿಲು, ಹಾಡದೇ ತಂತಿ ? ಓದದೇ ಗಿಳಿ ?
ಭಕ್ತಿಯಿಲ್ಲದವರನೊಲ್ಲ ಕೂಡಲ ಸಂಗಮದೇವ.

ಕಾವ್ಯ, ಸಂಗೀತ, ನೃತ್ಯಾದಿ ಕಲೆಗಳಲ್ಲಿನ ಪರಿಣತಿಯಾಗಲಿ ಶಾಸ್ತ್ರಜ್ಞಾನ ಪಾಂಡಿತ್ಯಗಳಾಗಲಿ ನಿಷ್ಪ್ರಯೋಜಕ; ಭಕ್ತಿಯೊಂದೆ ಶ್ರೇಷ್ಠ ಮತ್ತು ತಾರಕ ಎಂಬುದು ಬಸವಣ್ಣನವರ ನಿಲುವು. "ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕು". "ಕೂಡಲ ಸಂಗನ ಶರಣರು ಮನತೆರೆದು ಮಾತನಾಡಿದರೆ ಲಿಂಗವ ಕಾಣಬಹುದು" ಎಂಬ ಮಾತುಗಳನ್ನು ಗಮನಿಸಬೇಕು. ಆದರೆ ಕಲಾಮೌಲ್ಯಗಳನ್ನು ಭಕ್ತಿ, ಅನುಭಾವಗಳ ಮೌಲ್ಯ ನಿರಾಕರಿಸಬೇಕೆಂದೇನೂ ಇಲ್ಲ; ಅದು ಅವುಗಳನ್ನೊಳಗೊಂಡು, ಅವುಗಳಿಂದ ಕಪ್ಪ ಒಪ್ಪಿಸಿಕೊಂಡು ಸಾರ್ವಭೌಮ ಭಂಗಿಯಲ್ಲಿ ನಿಲ್ಲಬಹುದು. ಶರಣರ ವಚನಗಳು ಇದಕ್ಕೆ ಸಾಕ್ಷಿ.

ಈ ದೃಷ್ಟಿಯಿಂದ ಅಕ್ಕಮಹಾದೇವಿಯ ಈ ಉದ್ಗಾರವನ್ನು ಲೆಕ್ಕಿಸಬಹುದು: "ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆನವ್ವಾ"! ಭಗವತ್ ಸ್ವರೂಪವನ್ನು ಅಕ್ಕ ಇಲ್ಲಿ ನಿರೂಪಿಸಿದ್ದಾಳೆ. ಶಬ್ದ ಕ್ರಮವನ್ನು ಎಚ್ಚರಿಕೆಯಿಂದ ಲಕ್ಷಿಸಬೇಕು. ದೇವನಿಗೆ ಸಾವಿಲ್ಲ, ಕೇಡಿಲ್ಲ, ರೂಹಿಲ್ಲ; ಆದ್ದರಿಂದಲೇ ಅವನು ಚೆಲುವನೂ ಹೌದು. ಇದು

ಸಾಮಾನ್ಯ ಕಲ್ಪನೆಗೆ ವಿರುದ್ಧವಾದ ಮಾತು. ಚೆಲುವುಳ್ಳ ವಸ್ತು ಸಾವಿಲ್ಲದ್ದು, ಕೇಡಿಲ್ಲದ್ದು ಎಂಬುದು ಸಾಮಾನ್ಯರ ಭ್ರಮೆ. ಆದರೆ ಹಾಗಲ್ಲ. ಶಿವವಿದ್ದಲ್ಲಿ ಸೌಂದರ್ಯವಿರುತ್ತದೆ. ಶಿವದಿಂದಲೇ ಸೌಂದರ್ಯ ನಿಷ್ಪನ್ನವಾಗುತ್ತದೆ, ಸೌಂದರ್ಯದಿಂದ ಶಿವನಲ್ಲ. ಅಕ್ಕನ ವಿಶೇಷಣಗಳನ್ನು ಹಿಂದೆ ಮುಂದೆ ಮಾಡುವಂತಿಲ್ಲ ಅವು. “*Best words in the best order*”

ಪ್ರಾಚೀನ ಕಾವ್ಯಮೀಮಾಂಸೆಯಾಗಬಹುದು, ಆಧುನಿಕ ಕಾವ್ಯತತ್ತ್ವವಾಗಬಹುದು, - ಯಾವ ಒರೆಗಲ್ಲಿನ ಮೇಲಾದರೂ ತಮ್ಮ ಸಾಚಾತನವನ್ನು ವಚನಗಳು ಅನಾಯಾಸವಾಗಿ, ಅಸಂದಿಗ್ಧವಾಗಿ ಸಾಬೀತುಪಡಿಸಿಕೊಳ್ಳುತ್ತವೆ. ಪ್ರಾಚೀನ ಸಾಹಿತ್ಯವನ್ನು ಅನುಮಾನದ ಕಣ್ಣಿನಿಂದ ನೋಡುವವರೂ ವಚನಗಳ ಉತ್ಕೃಷ್ಟತೆಯನ್ನು ಮುಕ್ತಮನಸ್ಸಿನಿಂದ ಒಪ್ಪಿಕೊಳ್ಳುತ್ತಾರೆ.

ಪ್ರಾಚೀನ ಕಾವ್ಯತತ್ತ್ವ ಪುರಸ್ಕರಿಸುವ ವಿವಿಧ ಅರ್ಥಾಲಂಕಾರ ಶಬ್ದಾಲಂಕಾರಗಳು, ರಸಧ್ವನಿಗಳು, ಅಷ್ಟೇ ಅಲ್ಲ, ಚಿತ್ರಕಾವ್ಯದ ಕೆಲವು ಮಾದರಿಗಳು ಕೂಡ ವಚನಗಳಲ್ಲಿ ಗೋಚರಿಸುತ್ತವೆ (ಚಿತ್ರ ಕಾವ್ಯಪ್ರಸಕ್ತಿಶ್ಲೇಷೆ ಹಾಗೂ ಬೆಡಗಿನ ವಚನಗಳಲ್ಲಿದೆ. ಅನೇಕ ವಚನಕಾರರು ಅನುಭಾವಕ್ಕೆ ಬೆಡಗಿನ ರೂಪ ತೊಡಿಸಿದ್ದಾರೆ. “ಅಂದಿನ ಸಮಾಜದ ಕೆಳಗಿನ ಸ್ತರದಿಂದ ಬಂದ ವಚನಕಾರರಲ್ಲೇ ಯಾಕೆ ಇಂಥ ಬೆಡಗಿನ ವಚನಗಳು ಅಧಿಕ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುತ್ತವೆ?” ಎಂಬ ಪ್ರಶ್ನೆಯನ್ನು ಜಿ.ಎಸ್. ಶಿವರುದ್ರಪ್ಪನವರು ಒಂದೆಡೆ ಎತ್ತಿದ್ದಾರೆ. ಕಾರಣ ಸ್ಪಷ್ಟ. ಅಂಥ ವಚನಕಾರರು ಜಾನಪದಕ್ಕೆ ನಿಕಟವಾಗಿದ್ದವರು. ಜನಪದ ಸಾಹಿತ್ಯದಲ್ಲಿ ಒಗಟುಗಳ ಪ್ರಾಚುರ್ಯ ಮಿಗಿಲು. ಅವುಗಳ ಮಾದರಿಯಲ್ಲಿ ಬೆಡಗಿನ ವಚನಗಳು ರಚಿತವಾಗಿವೆ, ಆದರೂ ತಮ್ಮತನವನ್ನುಳಿಸಿಕೊಂಡಿವೆ). ಹಾಗೆಯೆ, ಅರ್ವಾಚೀನ ಕಾವ್ಯವಿಮರ್ಶೆಯಲ್ಲಿ ಪ್ರಚಲಿತವಾದ ಸಂಕೀರ್ಣತೆ, ಪ್ರತಿಮಾ ಪ್ರತೀಕ ಸಂಕೇತ ವಿಧಾನಗಳು, ನಾಟಕೀಯತೆ, ಭಾಷೆಯಲ್ಲಿ ಭಾವಾಭಿನಯ, ಆಡುಮಾತಿನ ಲಯ ಇತ್ಯಾದಿಗಳೂ ಅಲ್ಲಿ ನಿದರ್ಶಿತವಾಗುತ್ತವೆ. ತಮಗಿಂತ ಹಿಂದೆ ಸಾಹಿತ್ಯ ಪ್ರಪಂಚದ ಮುಖವನ್ನೇ ಕಂಡರಿಯದಿದ್ದ ವಸ್ತುಗಳನ್ನು, ಪ್ರಾಣಿಗಳನ್ನು, ವಚನಕಾರರು ಉಪಮೆ, ರೂಪಕ, ಪ್ರತಿಮೆಗಳನ್ನಾಗಿ ದುಡಿಸಿಕೊಳ್ಳುತ್ತಾರೆ. ಅದೊಂದು ಅನಂತ ವೈವಿಧ್ಯಪೂರ್ಣ ಲೋಕ. ತಮ್ಮ ತಮ್ಮ ವೃತ್ತಿಗಳನ್ನೇ ರೂಪಕ ಮಾಡಿಕೊಂಡು ತಮ್ಮ ಅಂತರಂಗಕ್ಕೆ ಅಭಿವ್ಯಕ್ತಿ ಕೊಟ್ಟಿರುವ ವಚನಕಾರರೂ ಉಂಟು. ಈ ಎಲ್ಲ ಕಾರಣಗಳಿಂದ ವಚನಗಳು ಇಂದಿಗೂ ಅತ್ಯಂತ ನವ್ಯವಾಗಿ, ಜೀವ ಸಂಪನ್ನವಾಗಿ ಕಂಗೊಳಿಸುತ್ತಿವೆ.

ಅಮೂರ್ತವನ್ನು ಮೂರ್ತಗೊಳಿಸುವುದರಲ್ಲಿ, ಬಯಲನ್ನು ರೂಪ ಮಾಡುವುದರಲ್ಲಿ ವಚನಕಾರರ ದಕ್ಷತೆ ದೊಡ್ಡದು. ಒಂದು ಸಣ್ಣ ಉದಾಹರಣೆಯನ್ನಷ್ಟೆ ಇಲ್ಲಿ ಗಣಿಸಬಹುದು. “ಕಪ್ಪೆ ಸರ್ಪನ ನೆಳಲಲ್ಲಿ ಇಪ್ಪಂತೆ ಎನಗಾಯಿತ್ತಯ್ಯಾ” ಎಂಬ ಬಸವಣ್ಣನವರ ವಚನದಲ್ಲಿ ಹೇಗೆ ಮೃತ್ಯುವಿನ ಘೋರ ಭೀಕರತೆ ಒಂದು ಸುಮೂರ್ತ ಚಿತ್ರದ ಮೂಲಕ ಧ್ವನಿತವಾಗುತ್ತದೆಂಬುದನ್ನು ಪರಿಭಾವಿಸಬೇಕು. ಕಪ್ಪೆ, ನೆರಳು, ಸರ್ಪಗಳ ರೂಪಕಗಳಲ್ಲಿ ಇಡೀ ಬದುಕನ್ನೆ ಅಡಗಿಸಿದೆ, ಬಸವ ಪ್ರತಿಭೆ. ಒಂದು ಕಡೆ “ಕತ್ತೆ ಕುದುರೆಗೆ ಹುಟ್ಟಿದ ವೇಸರನಂತೆ” ಎನ್ನುವಲ್ಲಿ ಅವರು ಕೊಡುವ ಹೇಸರಕತ್ತೆಯ ಹೋಲಿಕೆ ಎಷ್ಟು ನವೀನ ಮತ್ತು ಅರ್ಥಪೂರ್ಣ !

ಇನ್ನು ಸಂಕೀರ್ಣತೆಯನ್ನು ತೆಗೆದುಕೊಂಡರೆ, ಜೇಡರ ದಾಸಿಮಯ್ಯನ “ಸತಿ ಪತಿಗಳೊಂದಾಗದವರ ಭಕ್ತಿ ಅಮೃತದೊಳಗೆ ವಿಷ ಬೆರೆದಂತೆ ಕಾಣಾ” ಎಂಬುದೊಂದು ಮಾತು ಇಲ್ಲಿ ಸಾಕು. ಅಮೃತಾಂಶವಿರುವುದರಿಂದ ಸಾಯುವಂತಿಲ್ಲ, ವಿಷಾಂಶವಿರುವುದರಿಂದ ಬದುಕುವುದೂ ಶಕ್ಯವಿಲ್ಲ! ವಿರಸ ದಾಂಪತ್ಯದ ಭಯಂಕರ ದುರಂತಸ್ಥಿತಿ ಯಶಸ್ವಿಯಾಗಿ ಪ್ರತೀತವಾಗುತ್ತದೆ.

“ಮೂರ್ತಿಯಾದುದಕ್ಕೆ ಪ್ರಳಯ ತಪ್ಪದು” ಎಂಬುದು ಅಲ್ಲಮನ ಉಕ್ತಿ; “ಸ್ಥಾವರಕ್ಕಳಿವುಂಟು, ಜಂಗಮಕ್ಕಳಿಲ್ಲ” ಎಂಬ ಬಸವೋಕ್ತಿಗೆ ಸಂವಾದಿಯಾದದ್ದು. ಆದರೆ ಸಾಹಿತ್ಯಕ್ಕೆ ಇದು ಅನ್ವಯಿಸುವುದಿಲ್ಲ; ಏಕೆಂದರೆ ರೂಪವಿಲ್ಲದೆ ಸಾಹಿತ್ಯ ಸಿದ್ಧಿಸದು. ಶರಣರು ತಮ್ಮ ಅನಿಸಿಕೆಗಳಿಗೆ ವಾಗ್ರೂಪ ಕೊಟ್ಟಿದ್ದಾರೆ. ಆದರೂ ಅವರ ಅಭಿವ್ಯಕ್ತಿ “ಶಬ್ದದೊಳಗಣ ನಿಶ್ಶಬ್ದ”ಕ್ಕೆ ನಿಷ್ಠವಾದದ್ದು: “ನುಡಿಯಿಲ್ಲದ ನಿಸ್ಸೀಮ ಗ್ರಾಮ”ದತ್ತ ತುಡಿಯುವಂಥದು. ವಚನಗಳು ರೂಪಸಹಿತವಾಗಿಯೂ ಜಂಗಮ ಶಕ್ತಿಯಾಗಿವೆ ಎಂಬುದನ್ನು ಗಮನಿಸಬೇಕು. ಪ್ರಾಯಃ ರೂಪ ಅರೂಪಗಳ ಸಾಮರಸ್ಯದಲ್ಲಿದೆ, ಶರಣರಸಿದ್ಧಿ. ಅವರು ಮಾತನ್ನು ಜ್ಯೋತಿರ್ಲಿಂಗವಾಗಿಸಿದರು.

ಅಲ್ಲಮಪ್ರಭುವಿನ ವಚನವೊಂದರಿಂದ ಮುಗಿಸಬಹುದು;
ಕೆಂಡದ ಮಳೆ ಕರೆವಲ್ಲಿ ಉದಕವಾಗಿರಬೇಕು,
ಜಲಪ್ರಳಯವಾದಲ್ಲಿ ವಾಯುವಿನಂತಿರಬೇಕು,
ಮಹಾಪ್ರಳಯವಾದಲ್ಲಿ ಆಕಾಶದಂತಿರಬೇಕು.
ಜಗತ್ಪ್ರಳಯವಾದಲ್ಲಿ ತನ್ನ ತಾ ಬಿಡಬೇಕು.
ಗುಹೇಶ್ವರಲಿಂಗ ತಾನಾಗಿರಬೇಕು.

ಪ್ರಭುವಾಣಿ ಲೌಕಿಕಕ್ಕೂ ಅನ್ವಯಿಸುತ್ತದೆ, ಪಾರಮಾರ್ಥಿಕಕ್ಕೂ ಅನ್ವಯಿಸುತ್ತದೆ. ಇದು ಅದ್ವೈತದ ಔನ್ನತ್ಯದಲ್ಲಿ ನಿಂತು ಆಡಿದ ಮಾತಾದರೂ, ಸಾಮಾನ್ಯರಿಗೆ ಕೂಡ ಆತ್ಯುಪಯುಕ್ತ. ಬದುಕಿಗೆ ಕೆಚ್ಚು ನೆಚ್ಚು ನಂಬಿಕೆಗಳನ್ನು ತುಂಬುವ, ಜೀವನ ಸಂಗ್ರಾಮಕ್ಕೆ ವ್ಯಕ್ತಿಯನ್ನು ಅಣಿಗೊಳಿಸುವ ಪ್ರಚಂಡ ತೂರ್ಯನಿನಾದ ಇಲ್ಲಿದೆ. ಇದಕ್ಕಿಂತ ಮಿಗಿಲಾದ ಮೌಲ್ಯವಾಗಲಿ ಸಂದೇಶವಾಗಲಿ ಇನ್ನೊಂದಿರಲಾರದು. ಇದು ಲೋಕಕ್ಕೆ ಶರಣರ ಕೊಡುಗೆ.

ಶ್ರೀ ಐ. ಎಂ. ಮುಗದುಮ್‌ರವರು ಅಧ್ಯಕ್ಷರಾಗಿ ಮುಂದುವರಿಯುವ ಬಗ್ಗೆ

ಆತ್ಮೀಯರಾದ ಶರಣ ಬಂಧುಗಳೇ,

ಅಖಿಲ ಭಾರತ ವೀರಶೈವ ಮಹಾಸಭೆ ಲಿಂಗವಂತ ಸಮಾಜದ ಆಗು-ಹೋಗು, ಸಂಸ್ಕಾರ-ಸಂಘಟನೆ, ಸಂಸ್ಕೃತಿ - ಸಮಾಜಾಭಿವೃದ್ಧಿಗಳ ದೃಷ್ಟಿಯಲ್ಲಿ ರೂಪುಗೊಂಡ ಸಂಸ್ಥೆ. ದಿವಂಗತ ಜೆ. ಬಿ. ಮಲ್ಲಾರಾಧ್ಯರ ನಂತರ ಶ್ರೀ ಐ. ಎಂ. ಮುಗದುಮ್‌ರವರು ಇದರ-ಅಧ್ಯಕ್ಷರಾಗಿದ್ದಾರೆ. ಶ್ರೀ ಐ. ಎಂ. ಮುಗದುಮ್‌ರವರು ಇದ್ದಕ್ಕಿದ್ದಂತೆಯೇ ಅನಾರೋಗ್ಯ ಪೀಡಿತರಾದಾಗ ಬಹಳ ಜನಕ್ಕೆ ಆಘಾತವಾಯಿತು. ಅನೇಕ ಆಯೋಗಗಳ ವರದಿ 1991ರ ಜನಗಣತಿ ಇವು ಎರಗಿ ಬಂದಾಗ ಮುಂದೇನು ಎಂದು ಸಮಾಜದ ಹಿತಚಿಂತಕರು ಕಳವಳಿಸುವಾಗ ಶ್ರೀ ಐ. ಎಂ. ಮುಗದುಮ್‌ರವರು ಚೇತರಿಸಿಕೊಂಡು ಸಹಾಯಕರ ನೆರವಿನಿಂದ ಸೂಕ್ತ ರೀತಿಯಲ್ಲಿ ಕಾರ್ಯಗಳನ್ನು ನಿರ್ವಹಿಸಿದರು. ದೇವರ ದಯದಿಂದ ಶ್ರೀಯುತರು ಮತ್ತಷ್ಟು ಚೇತರಿಸಿಕೊಂಡಿದ್ದಾರೆ ಎಂಬುದು ತಿಳಿದು ಸಂತೋಷವಾಗಿದೆ. ಬಸವ ಕೃಪೆಯಿಂದ ಬೇಗನೆ ಅವರು ಗುಣಮುಖರಾಗಿ ಪ್ರವಾಸವನ್ನು ಕೈಗೊಳ್ಳಲೂ ಸಮರ್ಥರಾಗಲಿ ಎಂದು ಹಾರೈಸೋಣ.

ಶ್ರೀಯುತ ಮುಗದುಮ್‌ರವರು ಅನಾರೋಗ್ಯ ಪೀಡಿತರಾಗಿದ್ದಾಗ ಕರೆದ ಸಭೆಯೊಂದರಲ್ಲಿ, ಬೇಗನೆ ಮಹಾಧಿವೇಶನ ಕರೆದು, ಮುಂದಿನ ಅಧ್ಯಕ್ಷರನ್ನು ಆಯ್ಕೆ ಮಾಡಲು ಸೂಚನೆ ನೀಡಿದರು. ಅದರಂತೆ ಬೆಳಗಾವಿಯಲ್ಲಿ ನಡೆಯುವ ಮಹಾಧಿವೇಶನದಲ್ಲಿ ನೂತನ ಅಧ್ಯಕ್ಷರನ್ನು ಆಯ್ಕೆಮಾಡಲು ಪ್ರಯತ್ನ ನಡೆದಿರಬಹುದು. ಈ ಬಗ್ಗೆ ನಮ್ಮ ಕಳಕಳಿಯ ಸೂಚನೆ ಹೀಗಿದೆ.

ವಿಚಾರ ಸಾಮರ್ಥ್ಯ, ಬುದ್ಧಿಮತ್ತತೆ, ನಿರ್ಭಯತೆ, ಸಮಾಜ ಪ್ರೇಮ ಶ್ರೀ ಐ. ಎಂ. ಮುಗದುಮ್‌ರವರ ವಿಶೇಷ ಗುಣಗಳು. ಅವರು, ಯಾವುದೇ ಸಮಸ್ಯೆಯ ಆಳಕ್ಕಿಳಿದು ಚಿಂತಿಸಬಲ್ಲರು. ಹಾಗೆಯೇ ಸ್ಪಷ್ಟ ಮತ್ತು ಸುಸಂಬದ್ಧ ಮಾತುಗಳಲ್ಲಿ ವಿಷಯವನ್ನು ಮನವರಿಕೆ ಮಾಡಿಕೊಡಬಲ್ಲರು. ತಮ್ಮ ವಿಚಾರ ಸರಣಿಯಲ್ಲಿ ಅವರಿಗೆ ಆತ್ಮವಿಶ್ವಾಸ ಮತ್ತು ಗುರಿಯಲ್ಲಿ ನಿರ್ದಿಷ್ಟತೆ ಇದೆ. ಜೊತೆಗೆ, ಅ. ಭಾ. ವಿ. ಮಹಾಸಭಾದಂತಹ ಸಂಸ್ಥೆಯ ಹೆಸರು ಬಳಸಿ ರಾಜಕೀಯ ಮತ್ತು ಆರ್ಥಿಕ ಲಾಭಮಾಡಿಕೊಳ್ಳುವ ಅಪೇಕ್ಷೆಯುಳ್ಳವರಲ್ಲ. ಈ ಎಲ್ಲ ದೃಷ್ಟಿಯಿಂದ ಶ್ರೀ ಐ. ಎಂ. ಮುಗದುಮ್‌ರವರು ಇನ್ನೊಂದು ಅವಧಿಗೆ ಮಾತ್ರವಲ್ಲ ಅವರು ಇರುವವರೆಗೂ ಅಧ್ಯಕ್ಷರಾಗಿ ಮಾರ್ಗದರ್ಶನ ಮಾಡುವುದು ಅತೀವ ಅಗತ್ಯವಿದೆ. ಶ್ರೀಯುತರು ಚೇತರಿಸಿಕೊಂಡಿರುವುದು ನಾವು ಈ ಸೂಚನೆ ನೀಡಲು ನಮಗೂ ಧೈರ್ಯವನ್ನು ನೀಡಿದೆ. ಅನೇಕ

ರೀತಿಯ ಆಘಾತಗಳು ಲಿಂಗವಂತ ಸಮಾಜಕ್ಕೆ ಎರಗುತ್ತಿವೆ. ಸಾತ್ವಿಕರು, ಪ್ರೌಢರು, ಸಕಲ ಜೀವರಾಶಿಗೆ ಲೇಸು ಬಯಸುವ ಉತ್ತಮ ಜನ ಎಂದು ಕೀರ್ತಿಪಡೆದಿದ್ದ ಲಿಂಗವಂತರು ಒಳ-ಹೊರಗಿನ ಕಾರಣಗಳಿಂದ ಮೂದಲಿಕೆಗೆ ಒಳಗಾಗುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಸರ್ಕಾರವು ಸಮಾಜದ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸಿದಾಗ ಸರ್ಕಾರವನ್ನೇ ಟೀಕಿಸಬಲ್ಲ ಧೈರ್ಯವಂತರು ಬೇಕಾಗಿದ್ದಾರೆ. ರಾಜಕಾರಣಿಗಳು, ಸರ್ಕಾರದಿಂದ ಹಲವಾರು ಸಹಾಯ ಪಡೆದವರು, ಪಡೆಯುವವರು ನಿರ್ಭಯವಾಗಿ ಮಾತನಾಡಲಾರರು. ಈ ಎಲ್ಲ ದೃಷ್ಟಿಯಿಂದ ಶ್ರೀ ಮುಗದುಮ್‌ರವರು ಸಮರ್ಥರು. ಅವರು ಎಷ್ಟೂ ಕಾರ್ಯನಿರ್ವಹಿಸಲು ಅಶಕ್ತರಾದಾಗ ಅನಿವಾರ್ಯವಾಗಿ ಅಧ್ಯಕ್ಷರನ್ನು ಹೊಸದಾಗಿ ಆಯ್ಕೆಮಾಡಬಹುದೇ ವಿನಾ ಈಗ ಅದರ ಅಗತ್ಯ ಕಾಣದು. ಅವರೆಗು ಕೆಲವರು ಶ್ರೀಯುತರ ಸಲಹೆಯಂತೆ ಫೀಲ್ಡ್‌ವರ್ಕ್ ಮಾಡಿ ತರಬೇತಿ ಪಡೆಯುವುದು ಅವಶ್ಯವಿದೆ.

ಶ್ರೀ ಐ. ಎಂ. ಮುಗದುಮ್‌ರವರು ಅಖಿಲ ಭಾರತ ವೀರಶೈವ ಮಹಾಸಭೆಗೆ ಹೆಚ್ಚಿನ ಪ್ರಸಿದ್ಧಿ–ಕೀರ್ತಿ ತಂದುದು ಮಾತ್ರವಲ್ಲದೆ, ಅದರ ಅಧ್ಯಕ್ಷರಾಗಿ ಹೋರಾಟ ಕೈಗೊಂಡು ಅನೇಕ ವಿಷಯಗಳಲ್ಲಿ ಜಯಶೀಲರಾಗಿದ್ದಾರೆ.

1. ಕೂಡಲಸಂಗಮೇಶ್ವರ ದೇವಾಲಯವನ್ನು ಮೂಲಸ್ಥಳದಲ್ಲಿ ರಕ್ಷಿಸುವಂತೆ ಮಾಡಿದುದು.
2. ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿರುವ ವೀರಶೈವ(ಲಿಂಗವಂತ)ರನ್ನು ತಮಿಳುನಾಡು, ಆಂಧ್ರ, ಕೇರಳ, ಮಧ್ಯಪ್ರದೇಶಗಳಲ್ಲಿ ಹಿಂದುಳಿದ ವರ್ಗಕ್ಕೆ ಸೇರುವಂತೆ ಮಾಡಿದುದು.
3. ಹಾವನೂರು-ವೆಂಕಟಸ್ವಾಮಿ ವರದಿ ಕುರಿತು ದೋಷವನ್ನು ಮನಗಾಣಿಸಿ ಅವುಗಳನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಮಾಡಿದುದು ಇತ್ಯಾದಿ.

ಹೀಗಾಗಿ ಸಮಾಜಾಭಿಮಾನವುಳ್ಳವರು, ವಿಚಾರಶೀಲರು, ವ್ಯವಹಾರಿಕ ಮತ್ತು ಕಾಯಿದೆಯ ಜ್ಞಾನವುಳ್ಳ ಶ್ರೀ ಐ. ಎಂ. ಮುಗದುಮ್‌ರವರು ಸಮರ್ಥ ಅಧ್ಯಕ್ಷರಾಗಿದ್ದಾರೆ.

ಶ್ರೀ ಸಂಗಮೇಶ್ವರ ದೇವಾಲಯದ ಪುನರ್ನಿರ್ಮಾಣದ ಕೆಲಸವನ್ನು ಸರ್ಕಾರವು ಇನ್ನೂ ಕೈಗೆತ್ತಿಕೊಂಡಿಲ್ಲ. ಚಿನ್ನಪ್ಪರೆಡ್ಡಿ-ಮಂಡಲ್ ವರದಿಗಳ ಸಾಧಕ-ಬಾಧಕ ಕುರಿತು ಚರ್ಚಿಸಬೇಕಾಗಿದೆ. ಇಂಥ ಸನ್ನಿವೇಶದಲ್ಲಿ ಶ್ರೀ ಮುಗದುಮ್‌ರವರ ಮಾರ್ಗದರ್ಶನವು ಅತ್ಯಗತ್ಯವಾಗಿ ಬೇಕಾಗಿರುವ ಕಾರಣ ಅವರೇ ಮುಂದುವರಿಯಲು ಮನಸ್ಸು ಮಾಡಬೇಕೆಂದು ನಮ್ಮ ಹೃತ್ಪೂರ್ವಕ ಸೂಚನೆ. ಅದೇ ರೀತಿ ಕಾರ್ಯಕಾರಿ ಸಮಿತಿಯವರೂ ಶ್ರೀಯುತರ ಮೇಲೆ ಒತ್ತಾಯ ತಂದು, ಅವರು ಅಧ್ಯಕ್ಷರಾಗಿ ಮುಂದುವರಿಯಲು

ಆಗ್ರಹಿಸಬೇಕೆಂದು ಸಮಾಜದ ಹಿತದೃಷ್ಟಿಯಿಂದ ನಮ್ಮ ಸೂಚನೆ ಇದೆ. ಶರಣ ಬಂಧುಗಳು ಇದನ್ನು ಗಮನಿಸುವಿರಾಗಿ ನಂಬುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ
ಕೂಡಲ ಸಂಗಮ–587115

ವಿ. ಸೂ. : ಲಿಂಗವಂತ ಸಮಾಜದ ಹಿತದೃಷ್ಟಿಯಿಂದ ನೀವು ಮಹಾಸಭೆಯ ಕಾರ್ಯಕಾರಿ ಸಮಿತಿಗೆ ಪತ್ರ ಬರೆದು, ಶ್ರೀ ಐ.ಎಂ. ಮಗದುಮ್‌ರವರೇ ಅಖಿಲ ಭಾರತ ವೀರಶೈವ ಮಹಾಸಭಾಧ್ಯಕ್ಷರಾಗಿ ಮುಂದುವರಿಯಲು ಒತ್ತಾಯಿಸಬೇಕಾಗಿ ಸೂಚಿಸುವೆವು.

ಕಾರ್ಯಕಾರಿ ಸಮಿತಿ, ಅಖಿಲ ಭಾರತ ವೀರಶೈವ ಮಹಾಸಭೆ
ನಂ. 18, ಜಯದೇವ ಹಾಸ್ಟೆಲ್, ಶೇಷಾದ್ರಿ ರಸ್ತೆ,
ಬೆಂಗಳೂರು-560009

ಕಲ್ಯಾಣ ಕಿರಣ ಓದುಗರೇ ಗಮನಿಸಿರಿ

ಕಲ್ಯಾಣ ಕಿರಣ ಪತ್ರಿಕೆಯು ಅಂಚೆಯಲ್ಲಿ ಬರುತ್ತಿದ್ದಂತೆಯೇ ನಿಮ್ಮ ಚಂದಾ ಸಂಖ್ಯೆ, ಆಜೀವ ಸದಸ್ಯತ್ವ ಸಂಖ್ಯೆ ಗುರುತು ಮಾಡಿ ಒಂದು ಕಡೆ ಬರೆದು ಇಟ್ಟುಕೊಳ್ಳಿರಿ. ಸಕಾಲದಲ್ಲಿ ಪತ್ರಿಕೆ ಕೈ ಸೇರದೆ ಇದ್ದಾಗ, ವಿಳಾಸ ತಿದ್ದುಪಡಿ, ಬದಲಾವಣೆ ಮಾಡುವಾಗ ನಿಮ್ಮ ಚಂದಾ ಸಂಖ್ಯೆಯನ್ನು ಬರೆಯಿರಿ. ದಿನ ದಿನಕ್ಕೆ ವೃದ್ಧಿಯಾಗುತ್ತಿರುವ ಚಂದಾದಾರರ ಪಟ್ಟಿಯಲ್ಲಿ ಕ್ರಮಸಂಖ್ಯೆಯಿಲ್ಲದೆ ಹುಡುಕುವುದು ಕಷ್ಟಸಾಧ್ಯವಾಗುತ್ತದೆ ಮತ್ತು ಕಾರ್ಯಕರ್ತರ ಸಮಯ ವ್ಯರ್ಥವಾಗುತ್ತದೆ ಎಂಬುದನ್ನು ಮನಗಾಣಿರಿ. ಪತ್ರವ್ಯವಹಾರ ಮಾಡುವಾಗ ಚಂದಾ ಸಂಖ್ಯೆಯೊಡನೆ ಪೂರ್ಣ ವಿಳಾಸವನ್ನೂ ಬರೆಯುವ ಅಭ್ಯಾಸ ಇಟ್ಟುಕೊಳ್ಳಿರಿ.

ಅರ್ಥಗರ್ಭಿತ ವಚನ

—**ಮಾತಾಜಿ**

ಕೂಸುಳ್ಳ ಸೂಳೆ ಧನದಾಸೆಗೆ ಒತ್ತೆಯ ಕೊಂಡಡೆ.
ಕೂಸಿಂಗಲ್ಲ, ಭೊಜಗಂಗಲ್ಲ !
ಕೂಸನೊಮ್ಮೆ ಸಂತೈಸುವಳು, ಭೊಜಗನನೊಮ್ಮೆ ನೆರೆವಳು
ಧನದಾಸೆ ಬಿಡದು ಕೂಡಲ ಸಂಗಮದೇವಾ !

–ಬ. ಷ. ವ. ೧೦೧

ಈ ವಚನವು ವಿಲಕ್ಷಣವಾದ ಒಂದು ಹೋಲಿಕೆಯನ್ನು ನೀಡಿ, ಅತ್ಯಮೂಲ್ಯವಾದ ಒಂದು ತತ್ತ್ವವನ್ನು ಪ್ರತಿಪಾದಿಸುತ್ತದೆ. ಒಲೆಹತ್ತಿ 'ಉರಿದಡೆ ನಿಲಬಹುದಲ್ಲದೆ' ವಚನದಲ್ಲಿ ಯಾವುದೇ ಒಂದು ನಿರ್ಣಯಕ್ಕೆ ಬರದೆ ಇನ್ನಾರಿಗೆ ದೂರುವೆ ? ಎಂದು ಬಸವಣ್ಣನವರು ಕೈಬಿಟ್ಟಿರುವುದರಿಂದ ಹೇಗೆ ಆ ವಚನವನ್ನು ಬದುಕಿನ ಹಲವಾರು ಸನ್ನಿವೇಶಗಳಲ್ಲಿ ಬಳಸಿಕೊಳ್ಳಬಹುದೋ ಹಾಗೆ, ಮೇಲಿನ ವಚನದ ಪರಿಸ್ಥಿತಿಯೂ ಇದೆ. ಇನ್ನೂ, ಕಡೆಯ ವಾಕ್ಯದಲ್ಲಿ ಧನದಾಸೆ ಎಂಬುದರಲ್ಲಿ ಧನ ಇಲ್ಲದೆ, ಆಸೆ ಎಂಬುದಷ್ಟೆ ಇದ್ದಿದ್ದರೆ, ಈ ವಚನಕ್ಕೆ ಇನ್ನೂ ಹೆಚ್ಚಿನ ಶಕ್ತಿ ಬರುತ್ತಿತ್ತು. ಬಸವಣ್ಣನವರ ಮೂಲ ವಚನದಲ್ಲಿ ಮೊದಲು ಏನಿತ್ತೋ, ಸ್ವಲ್ಪ ಹೆಚ್ಚಿನ ಸ್ಪಷ್ಟತೆಗೋಸ್ಕರ ಯಾರಾದರೂ 'ಧನ' ಎಂದು ಸೇರಿಸಿರಬಹುದು.

ಕೂಸು ಇರುವ ಸೂಳೆ, ಇಲ್ಲದಿರುವವಳು. ಗಂಡನಿದ್ದು ಅವನ ಮಗುವನ್ನು ಹೊಂದಿರುವ ಗೃಹಿಣಿ. ಗಂಡನಲ್ಲದೆ, ಮಗುವಿದ್ದು ಭೊಜಗನನ್ನು ಹೊಂದಿರುವವಳು. 'ಕೂಸು' ಎಂದು ಬರುತ್ತಲೇ ಅದರ ಬಗ್ಗೆ ಎಂತಹವರಿಗೂ ಮರುಕವು ಚಿಮ್ಮುತ್ತದೆ. ಅದು ಪಾಪಿಯದೇ ಇರಬಹುದು ; ಅನಾಥನಿರಬಹುದು. ತಪ್ಪು ಮಾಡಿ ಕೂಸನ್ನು ಹೆತ್ತವಳನ್ನು ಬೈಯುವರೇ ವಿನಾ, ಆ ಕೂಸನ್ನು ಯಾರೂ ದ್ವೇಷಿಸರು. ಹೀಗೆ 'ಕೂಸು' ಮರುಕವನ್ನು, ವಾತ್ಸಲ್ಯವನ್ನು ತನ್ನ ಕಡೆಗೆ ಸೆಳೆದುಕೊಳ್ಳುವ ಒಂದು ಜೀವ.

ಆ ಕೂಸಿನ ವಿಷಯ ಬರುತ್ತಲೇ ಆ ವೇಶ್ಯೆಯ ಕರುಳು ಚುರುಗುಟ್ಟುವುದು. ಅದರ ಅಳುವನ್ನು ಕೇಳುತ್ತಲೇ ಅವಳು ಚಟಪಟಿಸುವಳು. ಆದರೆ ಉಪಜೀವನ ಅಥವಾ ಬದುಕಲು ವೇಶ್ಯಾವೃತ್ತಿಯನ್ನು ಕೈಗೊಂಡಿರುವ ಕಾರಣ ಅವಳು ಭೊಜಗನನ್ನು ಬರಮಾಡಿಕೊಂಡಿದ್ದಾಳೆ. ಅವನಿಗೆ ಆ ಮಗುವಿನ ಬಗ್ಗೆ ಎಷ್ಟೂ ಅಂತಃಕರಣವಿಲ್ಲ. ಅವನಿಗೆ ಬೇಕಾಗಿರುವುದು ಅವಳ ಶರೀರ ಸುಖ. ಅದಕ್ಕಾಗಿ ಅವನು ಹಣ ಕೊಡುತ್ತಾನೆ. ಇಲ್ಲಿ ಪರಸ್ಪರರ ಸಂಬಂಧ ಕೇವಲ ಹಣದ ಮೇಲೆ; ಇದು ಧನಾಧಾರಿತವೇ ವಿನಾ ಮೌಲ್ಯಾಧಾರಿತ ಅಲ್ಲ. ವ್ಯಾವಹಾರಿಕ ಸಂಬಂಧವೇ ವಿನಾ ಹಾರ್ದಿಕವಾದುದಲ್ಲ. ಹೀಗಾಗಿ ಆ ಮಗು ಅತ್ತರೆ, ಇವಳು ಅದನ್ನು ಸಂತೈಸಲು ಹೋದರೆ ಆ ಭೊಜಗನಿಗೆ ಕೋಪವೇ ವಿನಾ ಸಮಾಧಾನವಿಲ್ಲ. ಅದೇ ವಿವಾಹವಾದ ಪತಿಯೇ ಇದ್ದರೆ,

ಮಗು ಅವನದಾಗಿದ್ದರೆ ಅವನು ಮಗು ಅತ್ತರೆ, ಚಟಪಟಿಸುವನು. "ಹೋಗು ಬೇಗ ಹಾಲುಣಿಸು, ಅದನ್ನು ಅಳಿಸಬೇಡ" ಎನ್ನುವನು. ಮಗುವು ಸಮಾಧಾನ ಹೊಂದದಿದ್ದರೆ ತಾನೂ ಹೆಂಡತಿಗೆ ಅದನ್ನು ಸಮಾಧಾನಿಸಲು ಸಹಾಯ ಮಾಡುವನು. ಇಲ್ಲಿ ಕೂಸು, ತಾಯಿ, ಅವಳ ಗಂಡ, ಮೂವರ ಮಧ್ಯೆ ನಿಕಟವಾದ ಸಂಬಂಧವಿದೆ. ಭೊಜಗನದು ಯಾಂತ್ರಿಕವಾದ, ಭಾವನಾರಹಿತ ಸಂಬಂಧ.

ಈ ಹೋಲಿಕೆಯನ್ನು ಈಗ ವಿಶ್ಲೇಷಿಸೋಣ. ಕೂಸು ಆದರ್ಶವೊಂದರ ಪ್ರತೀಕ; ಅಥವಾ ಸತ್ಯದ ಹೋಲಿಕೆ. ಈ ಆದರ್ಶಕ್ಕೆ ತಕ್ಕ ಜೀವನ ವಿಧಾನ, ಉದ್ಯೋಗ ಸಿಕ್ಕರೆ ಆ ವ್ಯಕ್ತಿ ಕೂಸುಳ್ಳ, ಪತಿಯುಳ್ಳ ಗರತಿ. ಇಲ್ಲದಿದ್ದರೆ ಅವನ ಹೊಯ್ದಾಟ, ತೊಳಲಾಟ ವಿಪರೀತ. ಕೂಸಿದ್ದ ವೇಶ್ಯೆಯನ್ನು ಆದರ್ಶ ಮೌಲ್ಯದಲ್ಲಿ ನಂಬಿಕೆಯುಳ್ಳ ಓರ್ವ ವ್ಯಕ್ತಿಗೆ, ಕೂಸಿಲ್ಲದ ವೇಶ್ಯೆಯನ್ನು ಆದರ್ಶ ಮೌಲ್ಯದಲ್ಲಿ ನಂಬಿಕೆಯಿಲ್ಲದ, ಪಾಪ ಪ್ರಜ್ಞೆಯಿಲ್ಲದ ವ್ಯಕ್ತಿಗೆ ಹೋಲಿಸಬಹುದು. ಈ ನಂತರದ ಮನುಷ್ಯ ನಿರ್ಭಯವಾಗಿ ಪಾಪದ ದಾರಿಯಲ್ಲಿ ನಡೆಯುವನು. ಮೊದಲನೆಯವನಿಗೆ, ಆಗಾಗ ಆದರ್ಶವು ಕೂಸಿನಂತೆ ಅತ್ತು ಎಚ್ಚರಿಸುತ್ತದೆ. ಆಗ ಧರ್ಮ ಸಂಕಟ; ತೊಳಲಾಟ.

ಕೆಲವು ಸಾಹಿತಿಗಳನ್ನು ತೆಗೆದುಕೊಳ್ಳೋಣ. ಅವರು ತಮ್ಮ ಪೋಷಕರನ್ನಾಗಿ ಕೆಲವು ಮಠಾಧೀಶರನ್ನು ಸಿರಿವಂತರನ್ನು, ಆಶ್ರಯಿಸಬೇಕಾಗುತ್ತದೆ. ಅವರ ನೆರವು ತಪ್ಪಿದರೆ ಇವರಿಗೆ ಸಾಹಿತ್ಯವನ್ನು ಪ್ರಕಟಮಾಡಲಿಕ್ಕೂ ಅಸಾಧ್ಯ ಮತ್ತು ವೇದಿಕೆಗಳು ಸಿಗುವುದಿಲ್ಲ. ಅದಕ್ಕಾಗಿ ಮಠಾಧೀಶರನ್ನು ಅಥವಾ ಧಾರ್ಮಿಕ ಮುಖಂಡರನ್ನು ಆಶ್ರಯಿಸುತ್ತಾರೆ. ಆ ಆಶ್ರಯದಾತರೋ, ಕಲವು ನಂಬಿಕೆ, ಇಷ್ಟಾನಿಷ್ಟ, ರಾಗ-ದ್ವೇಷಗಳುಳ್ಳವರಾದರೆ ಅವರು ಮೆಚ್ಚುವಂತೆ ಇವರು ಬರೆಯಬೇಕು. ಹೀಗೆ ಆಶ್ರಯದಾತರಿಗೆ ಸಮಾಧಾನವಾಗುವಂತೆ ಸಾಹಿತ್ಯ ಬರೆದು ಇತಿಹಾಸವನ್ನು ತಿರುಚುವಾಗ ಅಂತರಾತ್ಮದ ಕೂಸು, ಸತ್ಯದ ದನಿ ಎಚ್ಚೆತ್ತು ಅಳುತ್ತದೆ. ಆಗ ಅಂಥ ಸಾಹಿತಿಗಳಿಗೆ ತೊಳಲಾಟ ಕಾಡುತ್ತದೆ. ಇಂತಹ ತೊಳಲಾಟವನ್ನು ಅವರ ಬರವಣಿಗೆಗಳಲ್ಲಿ ಕಾಣುವ ಅಸಂಬದ್ಧತೆ ಮೂಲಕ ಗುರುತಿಸಬಹುದು. ಅಸತ್ಯವನ್ನೂ ಗಟ್ಟಿಯಾಗಿ ಹಿಡಿಯಲಾರರು, ಸತ್ಯವನ್ನು ನಿರ್ದಿಷ್ಟವಾಗಿ ಹೇಳಲಾರರು. ಗುರು ಬಸವಣ್ಣನವರಿಗೂ ಪೂರ್ವದಲ್ಲಿ ಲಿಂಗಾಯತ ಧರ್ಮವಿತ್ತೆಂದು ಹೇಳಬೇಕೆಂದು ಆಶ್ರಯದಾತರು ನಿರೀಕ್ಷಿಸುತ್ತಾರೆ. ಇತಿಹಾಸ, ಸಾಹಿತ್ಯ ಇದನ್ನು ಪುಷ್ಟೀಕರಿಸುವುದಿಲ್ಲ. ಏನು ಮಾಡಬೇಕು. ಬಸವಣ್ಣನವರನ್ನು ಆದ್ಯರನ್ನಾಗಿ ಸ್ವೀಕರಿಸಲು ಬೌದ್ಧಿಕ ಪ್ರಾಮಾಣಿಕತೆ ಇರದು ; ಬಿಟ್ಟು ಸ್ಥಿರೀಕರಿಸಲು ಅನ್ಯಸಾಹಿತ್ಯವೇ ಇಲ್ಲ. "ಈ ಧರ್ಮ ಮೊದಲೇ ಇತ್ತು" ಎನ್ನುವರು.

"ಸರಿ ಹಾಗಾದರೆ ಕಾರಣ ಕರ್ತರು ಯಾರು ?

"ಯಾರೂ ಇಲ್ಲ; ತನ್ನಿಂದ ತಾನೇ ಬೆಳೆಯಿತು."

ಇಂಥ ಸಾಹಿತಿಗಳಿಗೆ ತತ್ತ್ವಜ್ಞಾನದ ಗಂಧವೇ ಇರದು ಎಂದು ತಿಳಿಯುತ್ತದೆ. ಮತ್ತು ಹಾಗೆ ನೈಸರ್ಗಿಕವಾಗಿ ಹುಟ್ಟಿದ ಮತಗಳು (*Natural religions*) ತರ್ಕದ ಒರೆಗೆ ನಿಲ್ಲವು ಎನ್ನುವ ಪ್ರಜ್ಞೆಯೂ ಇರದು. [ಶ್ರೀ ಆಸ್ಕರ್ ಫರ್ನಾಂಡೀಸ್ ಶ್ರೀ ವೀರೇಂದ್ರ ಪಾಟೀಲರನ್ನು ಪಕ್ಷದಿಂದ ನಿವೃತ್ತಿ ಮಾಡಿದ್ದನ್ನು ಅರಗಿಸಿಕೊಳ್ಳಲಾರದೆ ಒದ್ದಾಡುವಂತೆ ಅಂಥ ತೊಳಲಾಟದ ಸಾಹಿತಿಗಳು ಒದ್ದಾಡುತ್ತಾರೆ.]

ಬಸವಣ್ಣನವರ ಈ ಅದ್ಭುತ ವಚನವನ್ನು ರಾಜಕಾರಣಕ್ಕೆ ಹೋಲಿಸೋಣ. ಪ್ರಧಾನಿ ಚಂದ್ರಶೇಖರ್ ಹೇಗಾದರೂ ಪ್ರಧಾನಿಯಾಗಬೇಕು ಎಂದು ಶ್ರೀ ರಾಜೀವರ ಸಖ್ಯ ಬೆಳೆಸಿದರು, ಹಂಗಿಗೆ ಒಳಗಾದರು. ಪಾಪ! ಅವರ ಸಮಾಜವಾದ, ಲೋಹಿಯಾವಾದ, ಜೆ.ಪಿ. ವಾದದ ಕೂಸು ಅತ್ತು ಅತ್ತು ಸೊರಗಿತು. ಆದರೆ ಅದನ್ನು ಸಂತೈಸಲಾರದೆ ಹೋದರು.

ಕೆಲವು ಶ್ರೀಮಂತರು ಧರ್ಮ–ದೇವರು, ಪಾಪ-ಪುಣ್ಯಗಳ ಭೀತಿಯಿಲ್ಲದೆ ಹಣ ಗಳಿಸುತ್ತಾರೆ. ಅವರನ್ನು ಕೂಸಿಲ್ಲದ, ಶರೀರ ಸುಖ ಮಾತ್ರ ಬದುಕಿದ ವೇಶ್ಯೆಗೆ ಹೋಲಿಸಬಹುದು. ಇನ್ನು ಕೆಲವರು ಪಾಪ–ಪುಣ್ಯಗಳ ಭೀತಿಯುಳ್ಳವರಾಗಿರುತ್ತಾರಾದರೂ, ಧನದ ಆಶೆಯಿಂದ ಪೀಡಿತರಾಗಿ ಬದುಕುವರು. ಆಗ ಏನಕೇನ ಪ್ರಕಾರ ಸಿರಿವಂತರಾಗಬೇಕು ಎಂಬ ಪ್ರಯತ್ನ ಮಾಡುವಾಗ, ಸತ್ಯ ಪ್ರಜ್ಞೆಯ ಕೂಸು ಎದ್ದೆದ್ದು ಅಳುತ್ತಿರುತ್ತದೆ. "ನೀನೆಂತಹ ಧರ್ಮವಂತ, ಏಕಿಂತಹ ದುರ್ಮಾರ್ಗದಲ್ಲಿ ಸಾಗುವೆ." ಎಂದು ಅಂತಃಕರಣವನ್ನು ಕಲಕುತ್ತದೆ, ಆಗ ಒಂದು ಕಡೆ ಧನದಾಸೆ (ಭೊಜಗ) ಯನ್ನು ಸಂತೈಸುವರು, ಇನ್ನೊಂದು ಕಡೆ ಅಂತರಾತ್ಮದ ಕೂಗ(ಅಳುವ ಕೂಸು)ನ್ನು ಸಮಾಧಾನ ಪಡಿಸಲೆಳಸುವರು. ಅದೇ ಇನ್ನೂ ಕೆಲವರು, "ಈ ಹಣದ ಬೆನ್ನು ಹತ್ತುವುದೇ ಬೇಡ. ಅದು ಬಂದರೂ ಅಷ್ಟೆ, ಬಿಟ್ಟರೂ ಅಷ್ಟೆ. ಸತ್ಯದ ಸಾಕ್ಷಿಯಾಗಿ, ಅಂತರಾತ್ಮ ಮೆಚ್ಚುವಂತೆ ಬಾಳಿದರಾಯಿತು." ಎಂದು ಬದುಕುತ್ತಾರೋ ಅವರು ಗಂಡನುಳ್ಳ, ಕೂಸುಳ್ಳ ಗರತಿಯರಂತೆ. ನೆಮ್ಮದಿಯಾಗಿ ಇದ್ದು ಬಿಡುವರು. ಅವರು ಆರಿಸಿಕೊಂಡ ಜೀವನ ವಿಧಾನ ಗಂಡನೇ ಹೊರತು ಭೊಜಗನಂತಲ್ಲ. ಆ ಜೀವನ ವಿಧಾನ, ಆದರ್ಶ ಮೌಲ್ಯಗಳ ಕೂಸನ್ನು ಸಂತೈಸಲು ನೆರವಾಗುತ್ತದೆ.

ಈ ವಚನದಲ್ಲಿ ಬಸವಣ್ಣನವರು ತಮ್ಮ ಅಂತರಂಗದ ಅಳಲನ್ನೇ ತೋಡಿಕೊಂಡಿರಬಾರದೇಕೆ ಎಂಬ ಸಂದೇಹವೂ ಬರುತ್ತದೆ. 'ಧನದಾಸೆ ಬಿಡದು' ಎಂಬುದರ ಬದಲಿಗೆ "ಆಸೆ ಬಿಡದು" ಎಂದು ಇಟ್ಟುಕೊಂಡು ಅರ್ಥಮಾಡೋಣ. ಗುರು ಬಸವಣ್ಣನವರ ಪ್ರವೃತ್ತಿ ಸ್ವಭಾವತಃ ಆಧ್ಯಾತ್ಮಿಕ, ಅಂತರ್ಮುಖ ಪ್ರವೃತ್ತಿ. ಸಮಾಜದ ಸೇವೆಗೆ ಅಧಿಕಾರವೊಂದು ಸಾಧನ ಎಂದು ಭಾವಿಸಿ, ತಮ್ಮ ಮನಸ್ಸನ್ನು ಅನಿವಾರ್ಯವಾಗಿ ರಾಜಕೀಯದಲ್ಲಿ ತೊಡಗಿಸಿಕೊಂಡರು. "ಸಜ್ಜನರು ಬೇಸತ್ತು ಅಧಿಕಾರ ಬಿಟ್ಟರೆ, ದುರ್ಜನರ ಅಟ್ಟಹಾಸ ಜಾಸ್ತಿಯಾಗಿ ಜನರು ಶೋಷಣೆಗೊಳ್ಳುವರು ಎಂಬ ಆಸೆ

ಅಥವಾ ಆಮಿಷ (*temptation*) ಆದರ್ಶವಾದಿಗಳು ಅಧಿಕಾರ ಸೂತ್ರ ಹಿಡಿಯಲು ಪ್ರೇರಣೆ ನೀಡುತ್ತದೆ. ಸಮಾಜ ಪರಿವರ್ತನೆ, ಸುಧಾರಣೆ, ಸಮಾನತೆ ಅವರ ಕನಸುಗಳು. ಅಧಿಕಾರವು ಸ್ವಲ್ಪ ಮಟ್ಟಿಗಾದರೂ ಇದಕ್ಕೆ ನೆರವಾಗಬಹುದೆಂಬ ಅಪೇಕ್ಷೆ. ಆದರೆ, ಬಿಜ್ಜಳನು ಸಂಪೂರ್ಣವಾಗಿ ಜಾತಿವಾದಿಗಳ ಪ್ರಭಾವದಿಂದ ಪಾರಾಗಿ ನಿಲ್ಲಲಾರದೆ ಹೋದ. ಒಂದು ವೇಳೆ ಆತ ಧೈರ್ಯಶಾಲಿಯಾಗಿ ಬಸವ ಧರ್ಮಾನುಯಾಯಿಯಾಗಿದ್ದರೆ ಆದರ್ಶ ಸಮಾಜದ ಶಿಶುವನ್ನು ಬಸವಣ್ಣ–ಬಿಜ್ಜಳರು, ಅರ್ಥಾತ್ ಧರ್ಮಶಕ್ತಿ-ರಾಜಶಕ್ತಿ ಸತಿ-ಪತಿಗಳಾಗಿ ಸಾಕಿ, ಪುಷ್ಟೀಕರಿಸುತ್ತಿದ್ದರು. ಬಿಜ್ಜಳನಿಗೆ ರಾಜ್ಯದ ಮೋಹ ಅಧಿಕವಾಯಿತಾದರೆ, ಬಸವಣ್ಣನವರಿಗೆ ತನ್ನ ಆದರ್ಶ ಸಮಾಜದ ಶಿಶುವಿನ ಮಮತೆ ಅಧಿಕವಾಯಿತು. ಶೋಷಿತರಿಗೆ ಆಸರೆಯಾಗಲು, ನೊಂದವರ ದನಿಯಾಗಲು ಪ್ರಧಾನಿ ಪಟ್ಟವನ್ನು, ಹೇಗೋ ಮನಸ್ಸಿನ ಶಿಶುವನ್ನು ಸಂತೈಸಿ ಕೊಂಚ ಕಾಲ ಹಿಡಿದಾಯಿತು. ಆದರೆ ಯಾವಾಗ ತನ್ನ ಆದರ್ಶವನ್ನು ಈ ಅಧಿಕಾರ ಕಾಪಾಡಲಾರದು ಎಂಬ ಭಾವ ಉಂಟಾಯಿತೋ, ಆಗ ಅವರು ಶಿಶು(ಆದರ್ಶ ಮೌಲ್ಯಗಳು)ವನ್ನು ತೊರೆಯಲಿಲ್ಲ ; ಅಧಿಕಾರವನ್ನೇ ಬಿಟ್ಟರು. ಈ ಪದವಿ ತ್ಯಾಗದ ನಿರ್ಧಾರಕ್ಕೆ ಮೊದಲು ಅನೇಕ ಬಾರಿ ಬಿಜ್ಜಳನೊಡನೆ ತಿಕ್ಕಾಡುವಾಗಲೆಲ್ಲ, ಆದರ್ಶ ಪ್ರಜ್ಞೆಯ ಕೂಸು ಎದ್ದೆದ್ದು ಅತ್ತಿರಲೂ ಸಾಕು !

"ಬಸವಣ್ಣಾ, ನನಗಿಂತಲೂ ನಿನಗೆ ಶರಣರೇ ಹೆಚ್ಚೆ ?"

"ಬಸವಣ್ಣಾ, ಪ್ರಧಾನಿ ಪಟ್ಟಕ್ಕಿಂತಲೂ ಹೊಲೆಯರ ಒಡನಾಟವೇ ದೊಡ್ಡದೆ?"

"ಈ ಅಧಿಕಾರಕ್ಕಿಂತಲೂ ಹೊಲೆಗೇರಿಯ ಸುಧಾರಣೆಯೇ ದೊಡ್ಡದೆ ?"

"ಕುಲೋತ್ತಮರಾದ ಕೊಂಡೆ ಮಂಚಣ್ಣ, ನಾರಣಕ್ರಮಿತರಿಗಿಂತಲೂ ಅಸ್ಪೃಶ್ಯ ಕಂಬಳಿ ನಾಗಮಯ್ಯ, ಹರಳಯ್ಯ–ಇವರೇ ದೊಡ್ಡವರೊ ?"

"ಸೃಷ್ಟಿಯಲ್ಲಿ ಜಾತಿಪದ್ಧತಿ ದೇವ ನಿರ್ಮಿತ. ಈ ಕಟ್ಟು ಒಡೆಯಲು ಏಕೆ ಯತ್ನಿಸುವೆ? ವ್ಯವಸ್ಥೆಯ ಪಾಲಕನಾಗಿರು." ಇಂಥ ಮಾತು ಬಂದಾಗಲೆಲ್ಲ ಬಸವಣ್ಣನವರ ಅಂತರಂಗದ ಕೂಸು, ಒಳದನಿ ಎದ್ದೆದ್ದು ಅತ್ತಿರಬಹುದು.

"ಈ ಅಧಿಕಾರದ ಸ್ವಾತಂತ್ರ್ಯ, ಯೋಜನೆಗಳ ಮೂಲಕ ದೀನದಲಿತರನ್ನು ಮೇಲೆತ್ತುವ ಅವಕಾಶವಾದರೂ ಇದೆ. ಇದನ್ನು ಬಿಟ್ಟರೆ ಉಳಿವ ಸೀಮಿತ ಶಕ್ತಿ, ಸೀಮಿತ ಸಂಪರ್ಕದಿಂದ ಏನು ಮಾಡಲು ಸಾಧ್ಯ?" ಹೀಗೆ ಸಂತೈಸಿಕೊಂಡೇ ಬಂದರು. ಆದರೆ ಹರಳಯ್ಯ-ಮಧುವರಸರ ನಂಟಸ್ಥಿಕೆಯಾಗಿ ಗುರು ಬಸವಣ್ಣನವರು ಸತ್ಯದ ಶಿಶುವನ್ನೇ ಪಾಲಿಸುವ ಅನಿವಾರ್ಯತೆ ಉಂಟಾದಾಗ ಅಧಿಕಾರವನ್ನು ತೊರೆದೇ ಬಿಟ್ಟರು !

ಹೀಗೆ ಈ ವಚನ ಹಿಗ್ಗಿಸಿದಷ್ಟೂ ಅಗಲಗೊಳ್ಳುವ, ತನ್ನ ಒಡಲಾಳದಲ್ಲಿ ಅನಂತವಾದ ಅರ್ಥವೈಭವ ತುಂಬಿಕೊಂಡ ಒಂದು ಅದ್ಭುತ ಮತ್ತು ಅಮೂಲ್ಯ ವಚನ !!

ಗುಲಬರ್ಗದಲ್ಲಿ ವಿಶ್ವಧರ್ಮ ಪ್ರವಚನ ಪ್ರಾರಂಭ

ಸೋಮವಾರ ದಿನಾಂಕ 25-3-1991 ರಂದು, ಗುಲಬರ್ಗ ನಗರದ ಜನತೆಯ ... ದಿನ. ಅಂದು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರಿಂದ ... ಧರ್ಮ ಪ್ರವಚನ ಕಾರ್ಯಕ್ರಮದ ಆರಂಭ. ನಗರದ ಪ್ರತಿಷ್ಠಿತ ಪ್ರದೇಶವಾದ ...ೂಪರ್ ಮಾರ್ಕೆಟ್ ಪ್ರದೇಶದಲ್ಲಿರುವ ಸರಕಾರಿ ಬಾಲಕರ ಮಹಾವಿದ್ಯಾಲಯದ ಬಯಲು ರಂಗಮಂದಿರದ ಆವರಣದಲ್ಲಿ ಸುಂದರವಾಗಿ ಅಲಂಕರಿಸಿದ ಮಂಟಪದಲ್ಲಿ ವಿಶ್ವಧರ್ಮ ಪ್ರವಚನ ಕಾರ್ಯಕ್ರಮ ಪ್ರಾರಂಭವಾಯಿತು.

ಅಂದು ಸಾಯಂಕಾಲ 6 ಗಂಟೆಯಿಂದಲೇ ಪ್ರವಚನಕ್ಕೆ ಜನರು ಆಗಮಿಸುತ್ತಿದ್ದರು. ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಬಿಸಿಲಿನ ಧಗೆಯಲ್ಲಿ ಬೆಂದು ಸಾಯಂಕಾಲ ತಂಪುಗಾಳಿ ಶರೀರಕ್ಕೆ ಆಧ್ಯಾತ್ಮದ ಗಾಳಿ ಮುಕ್ತಿಗೆ ಎನ್ನುವಂತೆ ಕಾರ್ಯಕ್ರಮ ಸರಿಯಾಗಿ 7-15 ಕ್ಕೆ ಆರಂಭವಾಯಿತು. ಮೊದಲಿಗೆ ಸಾಮೂಹಿಕ ಪ್ರಾರ್ಥನೆ ನಂತರ ಆಶ್ರಮದ ಸಾಧಕಿಯರಿಂದ ಪ್ರಾರ್ಥನೆ ನಡೆಯಿತು. ನಂತರ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ ಶಾಮಲಿಂಗಜವಳಗಿಯವರು ಪ್ರಾಸ್ತವಿಕವಾಗಿ ಮಾತಾಡುತ್ತಾ ಪೂಜ್ಯ ಅಪ್ಪಾಜಿಯವರು 19 ವರ್ಷಗಳ ನಂತರ ಮಹಾನಗರಕ್ಕೆ ಆಗಮಿಸುತ್ತಿದ್ದಾರೆ. ಇದು ನಾಲ್ಕನೆಯ ಬಾರಿ ಅಪ್ಪಾಜಿಯವರು ಪ್ರವಚನಕ್ಕೆ ಬರುತ್ತಿರುವುದು. ಮೊಟ್ಟ ಮೊದಲು ಅಪ್ಪಾಜಿಯವರು ಪ್ರವಚನ ಪ್ರಾರಂಭಿಸಿದ್ದು 1957 ರಲ್ಲಿ. ಅದೇ ವರ್ಷ ಗುಲಬರ್ಗಕ್ಕೆ ಪ್ರಥಮ ಬಾರಿಗೆ ಬಂದಿದ್ದು, ನಂತರ 1958, 1972 ರಲ್ಲಿ. ಹೀಗೆ ಈ ಭಾಗಕ್ಕೆ ಭಾಗ್ಯ ದೊರಕಿದೆ. ಇಂದಿಗೂ ಅಪ್ಪಾಜಿಯವರ ಪ್ರಭಾವ ಹಾಗೇ ಇದೆ. ಗುಲಬರ್ಗದಲ್ಲಿ ಪ್ರಥಮ ಬಾರಿಗೆ 1972 ರಲ್ಲಿ ಸಾರ್ವಜನಿಕವಾಗಿ ಬಸವ ಜಯಂತಿ ದೊಡ್ಡ ಪ್ರಮಾಣದಲ್ಲಿ ಆಚರಿಸಿದ್ದು ಆಗ ನಗರದ ಜನಸಂಖ್ಯೆ ಎರಡು ಲಕ್ಷವಿತ್ತು. ಆ ವರ್ಷ ಬಸವ ಜಯಂತಿಗೆ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನ ಮೆರವಣಿಗೆಯಲ್ಲಿ ಭಾಗವಹಿಸಿದ್ದು ಇಂದಿಗೂ ಜನ ನೆನಸುತ್ತಾರೆ. ಅದೆಲ್ಲ ಅಪ್ಪಾಜಿಯವರ ಪ್ರಭಾವ ಜನರ ಮನದಲ್ಲಿ ಎಷ್ಟು ಆಳವಾಗಿ ಬೇರೂರಿತ್ತು ಎನ್ನುವುದಕ್ಕೆ ಉದಾಹರಣೆ ಎಂದು ಹೇಳಿದರು. ನಂತರ ಕಾರ್ಯಕ್ರಮದ ಉದ್ಘಾಟನೆಗೆ ಆಗಮಿಸಿದ್ದ ಗದ್ದುಗೆ ಮಠದ ಪೂಜ್ಯ ಶ್ರೀ ರೇವಣಸಿದ್ಧೇಶ್ವರ ಸ್ವಾಮಿಗಳು, ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ಕವಯಿತ್ರಿ ಡಾ॥ ಶೈಲಜಾ ಉಡಚಾಣ ಮತ್ತು ಸರಕಾರಿ ಬಾಲಕರ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ ಜಿ.ವಿ. ಸುರಪುರ ಇವರನ್ನು ಸಭೆಗೆ ಸ್ವಾಗತಮಾಡಿ ಸಭೆಗೆ ಪರಿಚಯಿಸಿದವರು ಶರಣ ಆರ್.ಜಿ ಶೆಟಗಾರ. ನಂತರ ಪೂಜ್ಯ ಅಪ್ಪಾಜಿಯವರ ಪರಿಚಯವನ್ನು ಬೀದರಿನ ಶರಣ ಬಸವ ಕುಮಾರ ಪಾಟೀಲ ಸಭೆಗೆ ಮಾಡಿಸಿಕೊಟ್ಟರು. ನಂತರ ಮಾಲಾರ್ಪಣೆ ಅನೇಕ ಸಂಘ ಸಂಸ್ಥೆಗಳಾದ ಜಿಲ್ಲಾ ವೀರಶೈವ ಸಮಾಜ, ಬಸವ ತತ್ವ ಪ್ರಸಾರ ಸಂಸ್ಥೆ, ರಾಷ್ಟ್ರೀಯ ಬಸವದಳ, ಜಿಲ್ಲಾ ಬಸವದಳ, ಕೂಡಲ

ಸಂಗಮ ಶಿಕ್ಷಣ ಸಂಸ್ಥೆ, ರಾಷ್ಟ್ರೀಯ ಬಸವದಳ ಬೀದರ, ಶ್ರೀ ಬಸವೇಶ್ವರ ಸಹಕಾರ ಸಂಘ, ಚನ್ನಬಸವೇಶ್ವರ ಶಿಶುವಿಹಾರ ಮತ್ತು ಪ್ರಾಥಮಿಕಶಾಲೆ, ವೀರಶೈವ ವಿದ್ಯಾರ್ಥಿ ನಿಲಯದ ಪರವಾಗಿ, ಸರಕಾರಿ ಬಾಲಕರ ಮಹಾವಿದ್ಯಾಲಯದ ಪರವಾಗಿ, ಹಿರಾಪೂರ ಕಪನೂರ, ರಾಜಾಪೂರ, ಗ್ರಾಮಗಳ ಪರವಾಗಿ ಬಸವ ಹಾಗರಗಿ, ಬಸವದಳ ಶಾನಿಲ್ಲ ಳಾದ ಹಳೆ ಶಹಬಾದ, ಹೊಸ ಶಹಬಾದ, ಬೆಲಾಪೂರ, ಬಸವೇಶ್ವರ ಪ್ರಸಾದ ನಿಲಯ ಅಲ್ಲದೆ ಅನೇಕ ಶಿಷ್ಯರು ಪೂಜ್ಯ ಅಪ್ಪಾಜಿಯವರಿಗೆ ಮಾಲಾರ್ಪಣೆ ಮಾಡಿ ಹಾರ್ದಿಕ ವಾಗಿ ಸ್ವಾಗತಿಸಿದರು.

ಮುಖ್ಯ ಅತಿಥಿಗಳಾದ ಪ್ರಾಚಾರ್ಯರಾದ ಜಿ. ವಿ. ಸುರಪೂರ ಅವರು ಮಾತಾಡುತ್ತಾ ಇಂತಹ ಪೂಜ್ಯರ ಪಾದಧೂಳಿಯಿಂದ ನಮ್ಮ ಕಾಲೇಜು ಪವಿತ್ರವಾಯಿತು. ಪೂಜ್ಯರ ಅಮೃತ ವಾಣಿಯಿಂದ ನಾವೆಲ್ಲರೂ ಧನ್ಯರಾಗೋಣ ಎಂದು ಹರ್ಷದಿಂದ ಮಾತಾಡಿ ಬೇಕಾದ ಎಲ್ಲ ಅನುಕೂಲ ಮಾಡಿಕೊಡಲು ನಮ್ಮ ಕರ್ತವ್ಯವೆಂದು ಹೇಳಿದರು. ಇನ್ನೊಬ್ಬರು ಅತಿಥಿಗಳಾದ ಖ್ಯಾತ ಕವಯಿತ್ರಿ ಡಾ ॥ಶೈಲಜಾ ಉಡಚಾಣ ಮಾತಾಡುತ್ತಾ, 'ವಿಚಾರವಂತರಲ್ಲಿ, ಬುದ್ಧಿವಂತರಲ್ಲಿ, ಧರ್ಮದ ಅರಿವು ಇಲ್ಲದಾಗಿದೆ ಪಡೆಯಲು ಆಸಕ್ತರೂ ಆಗುತ್ತಿಲ್ಲ. ಯಾಕೆಂದರೆ ಸರಿಯಾಗಿ ಧರ್ಮದ ಮಾರ್ಗದರ್ಶಕರ ಕೊರತೆ ಇದೆ.' ಎಂದು ಹೇಳುತ್ತಾ 'ಪೂಜ್ಯ ಅಪ್ಪಾಜಿಯವರು ಆಗಮಿಸಿದ್ದಾರೆ, ಹಲವಾರು ವಿಷಯಗಳನ್ನು ಇವರಿಂದ ನಾವು ಪಡೆದು ಪುನೀತರಾಗೋಣ', ಎಂದು ತಿಳಿಸಿದರು. ಈ ಮೊದಲು ಪೂಜ್ಯ ಅಪ್ಪಾಜಿಯವರು 'ವಿಶ್ವಧರ್ಮ ಪ್ರವಚನ' ಪೀಠಿಕೆಯೊಂದಿಗೆ ವಿಶ್ವಧರ್ಮ ಪ್ರವಚನ ಶಬ್ದಗಳ ಅರ್ಥ ತುಂಬ ಮಾರ್ಮಿಕವಾಗಿ ಹೇಳಿದರು. ಈ ಸಲ ಪ್ರಭುದೇವರ ಕುರಿತು ಶೂನ್ಯ ಸಂಪಾದನೆ ಕಥಾವಸ್ತುವಾಗಿಟ್ಟುಕೊಂಡು ಪ್ರವಚನ ಹೇಳುವುದಾಗಿ ತಿಳಿಸಿದರು, ಎಲ್ಲರಿಗೂ ಧರ್ಮದ ಅವಶ್ಯತೆ ಇದೆ ಎಂದು ಹೇಳಿದರು. ಒಬ್ಬ ವ್ಯಕ್ತಿ ಆಕಸ್ಮಿಕವಾಗಿ, ಇನ್ನೊಬ್ಬರ ದೆಸೆಯಿಂದಾಗಿ ಅಥವಾ ತನ್ನ ದೌರ್ಬಲ್ಯದಿಂದಾಗಲಿ ವಿವಿಧ ರಂಗದಲ್ಲಿ ಅಧಃಪತನ ಹೊಂದಬಹುದು. ಯಾವುದೇ ಕಾರಣಕ್ಕಾಗಿಯೇ ಬಿದ್ದಿರಲಿ, ಎಂತಹವನೇ ಬಿದ್ದಿರಲಿ, ಬಿದ್ದವರನ್ನು ಎತ್ತುವುದೇ ಧರ್ಮ ಎಂದರು. ಧರ್ಮವು ಮಾವಿನ ಮರವಿದ್ದಂತೆ, ಜಾತಿ ಜಾಲಿಯಮರವಿದ್ದಂತೆ, ಯಾವ ರೀತಿ ಮಾವಿನಮರವು ಬಳಲಿ ಬಂದವರಿಗೆ ತಂಪಾದ ನೆಳಲನ್ನು ನೀಡಿ ರುಚಿಯಾದ ಫಲವನ್ನು ಇತ್ತು ಸಾಂತ್ವನಿಸಬಲ್ಲುದೋ, ಅದೇ ರೀತಿ ಧರ್ಮವು "ಇವ ನಮ್ಮವ ಇವ ನಮ್ಮವ" ಎಂದು ಎಲ್ಲರನ್ನು ಇಂಬಿಟ್ಟುಕೊಂಡು ಮುಕ್ತಿಯ ಫಲವನ್ನು ಕರುಣಿಸುತ್ತದೆ ಆದರೆ ಜಾತಿಯು ಬಳಲಿ ಬಂದವರಿಗೆ ಸಾಂತ್ವನ ನೀಡುವ ಬದಲು ಸ್ವಾರ್ಥ, ಸಂಕುಚಿತತೆಗಳೆಂಬ ಮುಳ್ಳುಗಳಿಂದ ಚುಚ್ಚಿ ದೂರಮಾಡುತ್ತದೆ. ಆ ಕಾರಣಕ್ಕಾಗಿ ಜಾತಿ ಬೇಡ, ಧರ್ಮ ಬೇಕು ಎಂದರು. ಅಜ್ಞಾನ ಹಾಗೂ ಮತಾಂಧತೆಗಳಿಂದ ಕೂಡಿದ ಬೋಧೆಯು ವ್ಯಕ್ತಿ-ವ್ಯಕ್ತಿಗಳನ್ನು ಸಮಾಜ-ಸಮಾಜಗಳನ್ನು ವಿಂಗಡಿಸಿ, ಬೇರ್ಪಡಿಸುವ ಕತ್ತರಿಯಂತೆ ಕೆಲಸ ಮಾಡಿದರೆ, ತಮ್ಮ ವಿಶ್ವಧರ್ಮ ಪ್ರವಚನವು, ಧರ್ಮ, ಆಧ್ಯಾತ್ಮ ಹಾಗು

ಮಾನವೀಯ ಮೌಲ್ಯಗಳಿಂದ ಎಲ್ಲರನ್ನು ಒಂದುಗೂಡಿಸುವ ಸೂಜಿಯ ಕೆಲಸ ಮಾಡುತ್ತದೆ ಎಂದು ಹೇಳಿದರು.

ನಂತರ ಕಾರ್ಯಕ್ರಮದ ಪ್ರಾರಂಭದಲ್ಲಿ ವಿಶ್ವಗುರು ಬಸವಣ್ಣನವರ ಭಾವಚಿತ್ರದ ಮುಂದೆ ಜ್ಯೋತಿಯನ್ನು ಬೆಳಗಿಸಿದ ಪೂಜ್ಯ ಶ್ರೀ ರೇವಣಸಿದ್ದೇಶ್ವರ ಸ್ವಾಮಿಗಳು ಕೊನೆಗೆ ಆಶೀರ್ವಚನ ನೀಡುತ್ತಾ ಗಾಳಿ ಬಿಟ್ಟಾಗ ತೂರಿಕೊಳ್ಳಿರಿ ಗಾಳಿ ನಿಮ್ಮ ಆಧೀನವಲ್ಲ ಎಂದು ಸುಂದರವಾಗಿ ವಚನಗಳನ್ನು ಹೇಳುತ್ತಾ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಪ್ರವಚನ ಎಂಬ ಗಾಳಿ ಬಿಟ್ಟಿದೆ ಇದರಲ್ಲಿ ನಿಮ್ಮ ಜೀವನ ಪಾವನ ಮಾಡಿಕೊಳ್ಳಿರಿ ಎಂದು ಮಾರ್ಮಿಕವಾಗಿ ಹೇಳಿದರು. ಕೊನೆಗೆ ಶರಣ ಪ್ರೊ. ಜಗನ್ನಾಥ ಮೀಸೆ ಇವರಿಂದ ಶರಣು ಸಮರ್ಪಣೆಯಾದ ನಂತರ ಮಂಗಲದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

—ವರದಿ: ಶಾಮಲಿಂಗ ಜವಳಗಿ

ಗುಲಬರ್ಗ

ಪ್ರವಚನದ ಮೈದಾನ ಸ್ಥಳಾಂತರ

ನಗರದ ಮಧ್ಯಭಾಗವಾದ ಸೂಪರ್ ಮಾರ್ಕೆಟ್ ಪ್ರದೇಶದಲ್ಲಿರುವ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಬಯಲು ದಿನದಿನಕ್ಕೆ ವರ್ಧಿಸಿದ ಶ್ರೋತೃ ಸಮೂಹದಿಂದ ಸಾಕಾಗದೆ ಹೋದುದರಿಂದ, ದಿ. 30-3-1991 ರಂದು ಪ್ರವಚನದ ಸ್ಥಳವನ್ನು ಬದಲಾಯಿಸಲಾಯಿತು. ಗುಲಬರ್ಗಾ ನಗರದ ಮಧ್ಯಭಾಗದಲ್ಲಿರುವ ಟೌನ್ ಹಾಲ್ ಪಕ್ಕದ ಸಾರ್ವಜನಿಕ ಉದ್ಯಾನವನದ ವಿಶಾಲವಾದ ಮೈದಾನದಲ್ಲಿ ಇದೀಗ ನಡೆಯುತ್ತಿದ್ದು, ಜನರು ದಿನದಿಂದ ದಿನಕ್ಕೆ ಅಧಿಕಧಿಕ ಸಂಖ್ಯೆಯಲ್ಲಿ ಸಮಾವೇಶವಾಗುತ್ತಿದ್ದಾರೆ.

ದಿ. 30-3-91 ರಂದು ಜಗನ್ಮಾತಾ ಅಕ್ಕಮಹಾದೇವಿಯ ಜಯಂತಿಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಪ್ರೊ. ಡಾ॥ ಮಲ್ಲಿಕಾರ್ಜುನಲತ್ಮೆಯವರು ಮತ್ತು ಪ್ರೊ. ಡಾ॥ ಮಾಣಿಕರಾವ ಧನಶ್ರೀಯವರು ಆಗಮಿಸಿದ್ದರು.

ಆನೆ ಅಂಕುಶಕ್ಕಂಜುವುದೇ ಅಯ್ಯಾ,
ಮಾಣದೆ ಸಂಹದೆ ನಖವೆಂದಂಜುವುದಲ್ಲದೆ ?
ಆನೀ ಬಿಜ್ಜಳಂಗಂಜುವನೆ, ಅಯ್ಯಾ ಕೂಡಲ ಸಂಗಮದೇವಾ,
ನೀನು ಸರ್ವಜೀವ ದಯಾಪಾರಿಯಾದ ಕಾರಣ
ನಿನಗಂಜುವೆನಲ್ಲದೆ ?

ಉದಗೀರದಲ್ಲಿ ಪೂಜ್ಯ ಮಾತೆ ಗಂಗಾದೇವಿಯವರ ಪ್ರವಚನ ಕಾರ್ಯಕ್ರಮ.

ಮಹಾರಾಷ್ಟ್ರದ ಲಾತೂರ್ ಜಿಲ್ಲೆಯ ಉದಯಗಿರಿಯಲ್ಲಿ (ಉದಗೀರ್) ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರ ಪ್ರವಚನ ಕಾರ್ಯಕ್ರಮವು 55 ದಿವಸ ಕಾಲ ಅವ್ಯಾಹತವಾಗಿ ನಡೆಯಿತು. ಸೋಮವಾರ ದಿ. 28-1-1991 ರಿಂದ ಆರಂಭವಾಗಿ 23-4-1991 ರಂದು ಮಂಗಲಗೊಂಡಿತು. ದಿನದಿನಕ್ಕೆ ಅಧಿಕಧಿಕ ಸಂಖ್ಯೆಯಲ್ಲಿ ಜನರು ಸೇರಿ, ಪ್ರವಚನದಲ್ಲಿ ಭಾಗಿಗಳಾದರು: ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರು 30 ವರ್ಷಗಳ ಹಿಂದೆ ಅಮೋಘ ಪ್ರವಚನವನ್ನು ಮಾಡಿದ ನಂತರ, ಇಂತಹ ಪ್ರವಚನ ಆದುದು ಈಗಲೇ. ಲಿಂಗಪೂಜೆ-ಪ್ರಾರ್ಥನೆ ಬಸವೇಶ್ವರ ಪೂಜಾವ್ರತ-ದೀಕ್ಷೆಗಳಲ್ಲಿ ಅನೇಕರು ಭಾಗಿಗಳಾದರು.

ಮುಕ್ತಾಯ ಸಮಾರಂಭಕ್ಕೆ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರನ್ನು ಕರೆಸಬೇಕೆಂಬ ಜನಾಗ್ರಹಕ್ಕೆ ಮಣಿದು, ಪೂಜ್ಯರು ರಾಣೇಬೆನ್ನೂರು ಪ್ರವಚನವನ್ನು ದಿ. 18-3-91 ರಂದು ಪೂರೈಸಿ, ದಿ. 23-3-91 ರಂದು ಉದಗೀರ ಸಮಾರಂಭದಲ್ಲಿ ಭಾಗಿಗಳಾದರು. ಅಭೂತಪೂರ್ವ ಮೆರವಣಿಗೆಯಲ್ಲಿ ಪೂಜ್ಯರನ್ನು ಸಭೆಗೆ ಕರೆದೊಯ್ಯಲಾಯಿತು. ಪುರಸಭಾಧ್ಯಕ್ಷರಾದಿಯಾಗಿ ಮೆರವಣಿಗೆಯಲ್ಲಿ ಪಾಲುಗಾರರಾಗಿ ಪೂಜ್ಯರನ್ನು ಸ್ವಾಗತಿಸಿದರು.

ಉದಗೀರದಲ್ಲಿ ರಾಷ್ಟ್ರೀಯ ಬಸವ ದಳವನ್ನು ಪೂಜ್ಯರು ಉದ್ಘಾಟಿಸಿದರು. ಅತ್ಯಂತ ಚಟುವಟಿಕೆಯ, ಕ್ರಿಯಾಶೀಲ ವ್ಯಕ್ತಿ ಶರಣ. ಅಶೋಕಸ್ವಾಮಿಯವರನ್ನು ಕಾರ್ಯಾಧ್ಯಕ್ಷರನ್ನಾಗಿಯೂ, ಶರಣ. ನಾಗನಾಥಪ್ಪ ಧನಸಿರಿಯವರನ್ನು ಗೌರವಾಧ್ಯಕ್ಷರನ್ನಾಗಿಯೂ ಶರಣ. ಶಿವರಾಜ ಕನ್ನಾಡೆಯವರನ್ನು ಕಾರ್ಯದರ್ಶಿಯನ್ನಾಗಿಯೂ ಶ್ರೀಮತಿ ಲಕ್ಷ್ಮೀಬಾಯಿ ವಿಶ್ವನಾಥ ಪಂಡಾರೆಯವರನ್ನು ಪ್ರಧಾನ ಸಂಚಾಲಕರನ್ನಾಗಿ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು ಆಯ್ಕೆ ಮಾಡಿದರು. ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರು ಬಸವ ತತ್ತ್ವ ಪ್ರಚಾರ ಮತ್ತು ಸಮಾಜ ಸಂಘಟನೆಯನ್ನು ನಿಷ್ಠೆಯಿಂದ ಮಾಡುವುದಾಗಿ ಪ್ರತಿಜ್ಞೆ ಮಾಡಿದರು.

ತಾಳೀಕೋಟೆಯಲ್ಲಿ ಪ್ರವಚನ

ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೋಕಿನ ತಾಳೀಕೋಟೆ ಪ್ರಮುಖ ಪಟ್ಟಣ. ಪೂಜ್ಯ ಮಾತೆ ಗಂಗಾದೇವಿಯವರು, ಉದಗೀರ್‌ದಲ್ಲಿ ದಿ. 23-3-91 ರಂದು ಪ್ರವಚನ ಮುಕ್ತಾಯ ಮಾಡಿ, 28-3-91 ರಿಂದ ತಾಳೀಕೋಟೆಯ ಪ್ರಾಥಮಿಕ ಶಾಲೆಯ ಬಯಲಿನಲ್ಲಿ ಪ್ರವಚನವನ್ನು ಆರಂಭಿಸಿದ್ದಾರೆ. ಈ ಪ್ರವಚನ ಕಾರ್ಯಕ್ರಮವು ಮೇ ತಿಂಗಳ ಮೊದಲವಾರದಲ್ಲಿ ಮುಕ್ತಾಯವಾಗಲಿದೆ.

ಬಸವ ಧರ್ಮಪೀಠ, ಕೂಡಲ ಸಂಗಮದ ಕಟ್ಟಡ ನಿಧಿಗೆ ದೇಣಿಗೆ ನೀಡಿದ ಶರಣರು

ಶರಣರುಗಳಾದ :

1.	ಮೆ॥ ವಿಜಯಕುಮಾರಸ್ವಾಮಿ ಮತ್ತು ಮಕ್ಕಳು ಉದಗೀರ, ಮಹಾರಾಷ್ಟ್ರ	30000-00
2.	ರಾಜೇಶ್ವರ ಪ್ರಭುವಪ್ಪ ನಿಟ್ಟೂರೆ, ಉದಗೀರ್	30000-00
3.	ಬಾಬೂರಾವ ರಾಮಣ್ಣ ಬಾಬಾಜಿ, ಉದಗೀರ್	5000-00
4.	ಲಕ್ಷ್ಮೀಬಾಯಿ ವಿಶ್ವನಾಥ ಪಂಡಾರೆ, ,,	5000-00
5.	ಸಂಗಮ್ಮಬಾಯಿ ಮಲ್ಲಿಕಾರ್ಜುನ ತಂಬಾಕೆ ,,	5000-00
6.	ಕಮಲಾಬಾಯಿ ಕೆ. ಟಿ. ಸ್ವಾಮಿ ,,	5111-00

ಬಸವ ಧರ್ಮ ಪೀಠದ ಆಶ್ರಯದಲ್ಲಿ ನಡೆಯುವ ನಿತ್ಯ ದಾಸೋಹ ನಿಧಿಗೆ 1111 ರೂ ಸಲ್ಲಿಸಿದವರು

(ಮುಂದುವರಿದ ಯಾದಿ)

ಕ್ರ. ಸಂ.	ಹೆಸರು ಮತ್ತು ಊರು	
	ಶರಣರುಗಳಾದ :	
620.	ಹೆಚ್.ವಿ. ಗುರುಪಾದಪ್ಪ,	ಮೈಸೂರು
621.	ಎಂ.ಎಸ್. ಶಿವಕುಮಾರ್,	ಚಿತ್ರದುರ್ಗ
622.	ಶಿವಪ್ಪ ಬಸಪ್ಪ ಬಣಗಾರ್,	ರಾಣೇಬೆನ್ನೂರು.
623.	ಡಾ॥ ಸಿ. ಎಸ್. ಪುರಾಣಮಠ	,,
624.	ಮಾಕನೂರು ಬಸವನ ಗೌಡರು	,,
625.	ದಾಕ್ಷಾಯಣಮ್ಮ ಶಿವಬಸಪ್ಪ ಬಣಕಾರ	,,
626.	ನಿಸೀಮಪ್ಪ ಬಸಪ್ಪ ಬಣಕಾರ	,,
627.	ಹೆಚ್. ಎನ್. ನಂಜುಂಡಪ್ಪ,	ಮೈಸೂರು.
628.	ನಂದೆಪ್ಪ ಕೊಪ್ಪದ ಮಾಸ್ತರು,	ರಾಣೇಬೆನ್ನೂರು.
629.	ಸರ್ಪಭೂಷಣ ಹಿರೇಮಠ,	,,
630.	ವಿರುಪಾಕ್ಷಪ್ಪ ಹದಡಿ ಮತ್ತು ಮಕ್ಕಳು	,,
631.	ಫಕೀರಪ್ಪ ಹನುಮಂತಪ್ಪ ಮುದೇಗೌಡ	,,
632.	ಸಿ.ಎಸ್. ಗೌಡರ, ರಾಜೇಶ್ವರಿ ನಗರ	,,
633.	ಶಾಂತಮ್ಮ ಮತ್ತು ಸೂರ್ಯಕಾಂತ ಮಲ್ಲಪ್ಪ ಸಾಬೋಜಿ	,,

634. ಚನ್ನಪ್ಪ ಬಾದಾಮಿ ರಾಣೇಬೆನ್ನೂರು
635. ವಿಜಯಕುಮಾರ ಶಶಿಧರ, ,,
636. ಚನ್ನಬಸಮ್ಮ ಚನ್ನಪ್ಪ ಮಾಕನೂರು, ,,
637. ನಾರಾಯಣಪ್ಪ ಬಸಪ್ಪ ಗುಡ್ಡದ, ,,
638. ಸಾಹುಕಾರ ಸಣ್ಣ ವೀರಣ್ಣ, ಮಟಮಾರಿ, ಜಿ-ರಾಯಚೂರು
639. ವೈ. ಮಹಾರುದ್ರಪ್ಪ ವೀರಪ್ಪ ಶೆಟ್ಟರ ,,
640. ಗುರು ಶಾಂತಪ್ಪ ಹಿಂಜೀಗೇರಿ ,,
641. ನಾಗಪ್ಪ ಬಂಡಪ್ಪ ಕಾಡಾದಿ, ಷೊಲ್ಲಾಪುರ
642. ಸದಾಶಿವಪ್ಪ ಬಸಪ್ಪ ಬಣಕಾರ್, ರಾಣೇಬೆನ್ನೂರು
643. ಕುರುವತ್ತೆಪ್ಪ ಶಿವಪ್ಪ ನರಸಗೊಂಡರ ,,
644. ಶಿವಣ್ಣ ತಿಳುವಳ್ಳಿ ,,
645. ಸಿ.ಎಸ್.ಕುರುವತ್ತಿ ಮತ್ತು ಮಕ್ಕಳು ,,
646. ಪಾರ್ವತೆವ್ವ ಕರ್ತಪ್ಪಗೌಡ ಶಿವಣ್ಣನವರು ,,
647. ನೀಲವ್ವ ಚೆನ್ನಬಸಪ್ಪಗೌಡ ಶಿವಣ್ಣನವರು ,,
648. ಸರ್ವಮಂಗಳಮ್ಮ ಶರಣಪ್ಪ ಬೆಲ್ಲದ ,,
649. ಪ್ರೇಮಾ ಮಲ್ಲೇಶಪ್ಪ ಆರಕೇರಿ ,,
650. ಶಿವರಾಜ ಕನಾಡೆ, ಉದಗೀರ
651. ವತ್ಸಲಾಬಾಯಿ ಮನ್ಮಥಪ್ಪ ನೀಲಾ ,,
652. ಗುರಮ್ಮಬಾಯಿ, ಉದಗೀರ
653. ಚಂದ್ರಮ್ಮ ಈರಯ್ಯಸ್ವಾಮಿ ನಳಗಿರಿ ,,
654. ನಾಗನಾಥಪ್ಪ ಶಂಕರಪ್ಪ ಧನಸಿರಿ ,,
655. ಮಹಾದೇವಮ್ಮ ಶಂಕರಪ್ಪ ಬೇಲೂರೆ ,,
656. ಭಾಗೀರಥೀಬಾಯಿ ವೀರಸಂಗಪ್ಪ ಚಿಲ್ಲರ್ಗೆ, ,,
657. ಭಾಗೀರಥೀಬಾಯಿ ವಿಶ್ವನಾಥಪ್ಪ ಪಾಂಡರೆ, ,,
658. ಶಾರದಾಬಾಯಿ ಶಿವರಾಜಪ್ಪ ವದಗೆ, ,,
659. ವಿಶ್ವನಾಥ ಹಾವಗಿರಾವ ಬೀರಾದಾರ ,,
660. ಎಸ್.ವಿ. ಪಟವಾರಿ ,,
661. ಪರಮೇಶ್ವರಪ್ಪ ಹೊಸಳ್ಳಿ, ರಾಣೇಬೆನ್ನೂರು

ವಿಶ್ವಕಲ್ಯಾಣ ಮಿರ್ಷಗೆ, ಗ್ರಂಥ ನಿಧಿಗೆ

ಶರಣ. ಬಿ. ಎಸ್. ರುದ್ರಪ್ಪ, ಬಿದರೆ 5001-00
ಶರಣೆ. ಮಹಾದೇವಿ ಜವಳಿ, ನಿಪ್ಪಾಣಿ 501-00

ಧರ್ಮಗ್ರಂಥ ನಿಧಿಗೆ 1001 ರೂ ಸಲ್ಲಿಸಿದವರು

ಶರಣರುಗಳಾದ :

ಕ್ರ. ಸಂಖ್ಯೆ ಹೆಸರು ಮತ್ತು ಊರು

346. ನಿಂಗಮ್ಮ ಬಸಪ್ಪ ಆಯೆಟ್ಟಿ, ಧಾರವಾಡ
347. ಚಂದ್ರಮ್ಮ ಅಶೋಕ ಕಂಠೆ, ಉದಗೀರ
348. ಕಮಲಾಬಾಯಿ ವಿಜಯಕುಮಾರ ವಿಶ್ವನಾಥೆ, ಉದಗೀರ
349. ಭಾಗೀರಥೀಬಾಯಿ ವೈಜನಾಥಪ್ಪ ಅಂಬೇಸಂಗೆ, ,,
350. ಪಟವಾರಿ ಮೋಹನ ದಿಗಂಬರರಾವ ತೋಂಡೇಕರ ,,
351. ಕಬ್ಬೂರು ಸಹೋದರರು, ರಾಣೇಬೆನ್ನೂರು
352. ನಂದಪ್ಪ ಕೊಪ್ಪದ ಮಾಸ್ಟರು ,,
353. ಚನ್ನವೀರಪ್ಪ ಎಡೆಯೂಪುರ, ರಾಣೇಬೆನ್ನೂರು

ಕೂಡಲ ಸಂಗಮದ ಬಸವ ಮಂಟಪದಲ್ಲಿ ನಡೆಯುವ ಪೂಜಾನಿಧಿಗೆ 501 ರೂ ಸಲ್ಲಿಸಿದವರು

ಶರಣರುಗಳಾದ :

ಕ್ರ. ಸಂಖ್ಯೆ. ಹೆಸರು ಮತ್ತು ಊರು

175. ಬಸವನಗೌಡರ ಕಟಗಿ ಅಡ್ಡೆ, ರಾಣೇಬೆನ್ನೂರು
176. ಕರಿಬಸಪ್ಪ ಕಾಕೋಳ ,,
177. ಶೇಖರಪ್ಪ ಮಲ್ಲೇಶಪ್ಪ ಬುರಡೀಕಟ್ಟಿ ,,
178. ಚನ್ನಬಸಪ್ಪ ಬಸಪ್ಪ ಬಣಗಾರ ,,
179. ಶಿವಯೋಗಿ. ಎಸ್. ಹಿರೇಮಠ ,,
180. ಶಾರದಾ ಹಾವನೂರು ,,
181. ಸಿದ್ಧಲಿಂಗಪ್ಪ ,,
182. ನಾಗಪ್ಪ ಈರಪ್ಪ ದೊಡ್ಡ ಸಿರಿಗೇರಿ. ,,
183. ಪಿ.ಆರ್. ಪಾಟೀಲ, ,,
184. ಎಸ್.ಬಿ. ಹರಿಹರ. ,,
185. ವಿರುಪಾಕ್ಷಪ್ಪ ಚನ್ನಬಸಪ್ಪ ಅಂಗಡಿ ,,
186. ಸುಶೀಲಾಬಾಯಿ ವೈಜನಾಥ ಚೆನ್ನಗೆ, ,,
187. ಹೀರಾಬಾಯಿ ಮಾಧವರಾವ ಶೆಟಕಾರ. ಉದಗೀರ
188. ರತ್ನಮ್ಮಬಾಯಿ ಸಂಗ್ರಾಮಪ್ಪ ಕಡಗೆ, ,,
189. ಮಹಾದೇವಿ ಗುರುಬಸಪ್ಪ ನವಬಾದೆ ,,

190. ಶಿವಾಜಿರಾವ ಹನುಮಂತರಾವ ಹುಡೆ ಉದಗೀರ
191. ಮನೋಹರ ಪಾಟೀಲ್, ಬೋಕ್ನೀಕರ್ ,,
192. ಸುಶೀಲಾಬಾಯಿ ಕಾಶೀನಾಥ ವಿಶ್ವನಾಥೆ ,,
193. ಕಾಶೀನಾಥ ಈರಪ್ಪ ಹುಡಗೆ ,,

ಇವರೆಲ್ಲರಿಗೂ ಮಂತ್ರಪುರುಷ ಬಸವಣ್ಣನವರು ಆಯುರಾರೋಗ್ಯಭಾಗ್ಯ ಸಕಲ ಸಂಪತ್ತನ್ನು ದಯಪಾಲಿಸಲೆಂದು ಹಾರೈಸುತ್ತೇವೆ.

—ಮಾತಾಜಿ, ಕಾರ್ಯಾಧ್ಯಕ್ಷೆ.

ಪೂಜ್ಯ ಮಾತಾಜಿಯವರ ಹುಟ್ಟುಹಬ್ಬಕ್ಕೆ ನುಡಿ ಕಾಣಿಕೆ

ಜನ್ಮದಿನವ ಆಚರಿಸುವೆ ನಾನಿಂದು
ಮಾರ್ಚ್ ತಿಂಗಳ ಹದಿಮೂರರಂದು
ಜನ್ಮ ಜನ್ಮದಲಿ ಇಂಥ ಗುರುವೆ ಸಿಗಲೆಂದು
ಕರ್ತನ ಬೇಡುವೆ ನಾನಿಂದು ||ಪ||

ಮಾತೆಯಂತೆ ಮಮತೆಯ ತೋರುವ
ತಂದೆಯಂತೆ ಬುದ್ಧಿಯ ಕಲಿಸುವ
ಗುರುವಿನಂತೆ ಜ್ಞಾನವ ನೀಡುವ
ಬದುಕುವ ಬಗೆಯನು ಕಲಿಸುವ
ಗುರುವು, ಸಿಗಲಿ ಹೀಗೆ ಎಂದೆಂದೂ ||೧||

ಮಂಗಳ ಮೂರ್ತಿಯ ಮನದಲಿ ಸ್ಮರಿಸಿ
ಗುರುವಿನ ಆದರ್ಶವ ಶಿರದಲಿ ಧರಿಸಿ
ಬಾಳಿನ ಎಡೆಯನು ಪಾದಕೆ ಅರ್ಪಿಸಿ
ಬೆಳೆಯಲಿ ಕೀರ್ತಿಯು ಎಂದು ಬಯಸಿ
ಆಚರಿಸುವೆ ಜನ್ಮದಿನವ ನಾನಿಂದು ||೨||

—ಸೋದರಿ ಕಸ್ತೂರಿ

ಶಾಲೆಗಳಲ್ಲಿ ಕೋಳೀಮೊಟ್ಟೆ

[ಶ್ರೀಯುತ ಬಂಗಾರಪ್ಪನವರು, ಕರ್ನಾಟಕದ ಮುಖ್ಯಮಂತ್ರಿಗಳು ಬೋರಿಂಗ್ ಆಸ್ಪತ್ರೆಯ ಸಮಾರಂಭವೊಂದರಲ್ಲಿ ಭಾಗವಹಿಸಿ, ದಿ. 30-3-1991 ರಂದು ಮಾತನಾಡುವಾಗ, ಗ್ರಾಮೀಣ ಪ್ರದೇಶದ 1 ರಿಂದ 7ನೇ ತರಗತಿಯವರೆಗಿನ ಮಕ್ಕಳಿಗೆ ಮಧ್ಯಾಹ್ನ ಊಟದ ಜೊತೆಗೆ ಮೊಟ್ಟೆ ಕೊಡುವ ಯೋಜನೆಯನ್ನು ಕರ್ನಾಟಕ ಸರ್ಕಾರ ಕೈಗೊಳ್ಳಲಿದೆ ಎಂದು ಪ್ರಕಟಿಸಿದರು. ಈ ಬಗ್ಗೆ ನಾನು ಬಸವ ಧರ್ಮ ಪೀಠದ ಪರವಾಗಿ ಒಂದು ಪತ್ರಿಕಾ ಹೇಳಿಕೆ ನೀಡಿದೆ. ಅದರ ಪೂರ್ಣ ವಿವರ ಹೀಗಿದೆ.]

—ಮಾತಾಜಿ

ಅಧಿಕಾರದ ಗದ್ದುಗೆ ಏರುತ್ತಲೇ ತಾವೇ ಸರ್ವಜ್ಞರೆಂದು, ಸರ್ವಶಕ್ತರೆಂದು ಭಾವಿಸಿ, ಅಧಿಕಾರವಾಣಿಯಿಂದ ನಮ್ಮ ರಾಜಕಾರಣಿಗಳು ಮಾತನಾಡುವುದುಂಟು. ಈ ದೇಶದಲ್ಲಿ ಹೀಗೆಲ್ಲವೂ ಆಗಬಹುದು. ರಾಜಕೀಯ ಪಕ್ಷಗಳ ನಿಧಿಗೆ ವಿಪುಲವಾದ ಕಾಣಿಕೆ ಕೊಡುವುದಾದರೆ, ಕೋಳೀ ಸಾಕಣೆಯವರಿಗೆ ಅನುಕೂಲವಾಗಲೆಂದು ಶಾಲಾ ಮಕ್ಕಳಿಗೆ ಮೊಟ್ಟೆಕೊಡಬಹುದು; ಮಧ್ಯ ಮಾರಾಟದ ಜನರ ವಹಿವಾಟು ವರ್ಧಿಸಲೆಂದು ಹೆಂಡ-ಸಾರಾಯಿಗಳನ್ನೂ ಶಾಲೆಗಳಲ್ಲಿ ಒದಗಿಸುವ ಯೋಜನೆ ಹಾಕಬಹುದು. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಸರ್ಕಾರವೇ ಕಸಾಯಿಖಾನೆ ತೆರೆಯುವ ಪ್ರಯತ್ನ ನಡೆಸಿರುವ ಕಾರಣ, ಸರ್ಕಾರಕ್ಕೆ ಹೆಚ್ಚಿನ ಆದಾಯ ಬರಲೆಂದು ಶಾಲೆಯ ಮಕ್ಕಳಿಗೆ ಉಪ್ಪಿಟ್ಟಿನ ಬದಲಾಗಿ ಮಾಂಸಾಹಾರವನ್ನೇ ಕೊಡುವ ವ್ಯವಸ್ಥೆಯನ್ನೂ ಮಾಡಬಹುದು. ಮಕ್ಕಳಿಗೆ ಬುದ್ಧಿಯನ್ನು ಚುರುಕುಮಾಡಬೇಕೆಂಬ ಕಳಕಳಿಯಿಂದಲೂ; ಮತ್ಸ್ಯೋದ್ಯಮಕ್ಕೆ ಪ್ರೋತ್ಸಾಹ ನೀಡಬೇಕೆಂಬ ಔದಾರ್ಯದಿಂದಲೂ ಮೀನಿನ ಆಹಾರವನ್ನು ಕೊಡುವ ಆಲೋಚನೆ ತಾಳಬಹುದು. ಬೀಡಿ-ಸಿಗರೇಟ್ ಕಂಪನಿಗಳನ್ನು ಉದ್ಧರಿಸಲು ಶಾಲಾ ಮಕ್ಕಳಿಗೆ ಸಿಗರೇಟು-ಬೀಡಿ ಒದಗಿಸಿದರೆ ಇನ್ನೂ ಒಳ್ಳೆತಲ್ಲವೆ? ಈ ಭವ್ಯ, ಮಹಾನ್ ಭಾರತದಲ್ಲಿ ರಾಜಕಾರಣಿಗಳಿಂದ ಏನೇನು ಅಸಂಭವನೀಯವಾದುದು ಸಂಭವಿಸಲಿಕ್ಕಿಲ್ಲ ಎಂಬ ಭಾವವು ಯಾರಿಗಾದರೂ, ಮುಖ್ಯಮಂತ್ರಿ ಶ್ರೀ ಬಂಗಾರಪ್ಪನವರ ಮಾತುಕೇಳಿ, ಬರದೆ ಇರದು. ಹಿಂದೊಮ್ಮೆ ಇದೇ ಮುಖ್ಯಮಂತ್ರಿಗಳು ದೋಸೆ-ಇಡ್ಲಿ ಹಿಟ್ಟಿಗೆ ಹೆಂಡವನ್ನು ಬೆರೆಸಿದರೆ, ಅವಕ್ಕೆ ಹೆಚ್ಚು ರುಚಿಯು ಬರುತ್ತದೆ ಎಂದು ಅತಿರೇಕದ ಮಾತನ್ನಾಡಿದ್ದರು. ಧಾರ್ಮಿಕರು, ಸಾತ್ವಿಕರು, ಸಜ್ಜನಿಕೆಯ ಸೋಗಿನಲ್ಲಿ ನಿರ್ಲಿಪ್ತರಾಗಿ ಇರುವ ಪ್ರವೃತ್ತಿ ಬೆಳೆದು, ರಾಜಸ ಮತ್ತು ತಾಮಸ ಪ್ರವೃತ್ತಿಯ ನಡತೆಗಳು ವಿಜೃಂಭಿಸುವ ಕಾಲ ಬರುತ್ತಿದೆ. "ಕುರುಡರ ರಾಜ್ಯದಲ್ಲಿ ಕಣ್ಣಿದ್ದವನೇ ಅಪರಾಧಿ" ಎಂಬಂತೆ ಸದಾಚಾರ ಸಂಪನ್ನರಾದ, ಸಾತ್ವಿಕ ನಡತೆಯವರೇ ನಾಚಿ ಮೂಲೆಸೇರುವ ಸನ್ನಿವೇಶ ಒದಗುತ್ತಿದೆ.

ಭಾರತ ದೇಶದಲ್ಲಿ ಹಲವಾರು ಧರ್ಮೀಯರು ಶುದ್ಧ ಸಸ್ಯಾಹಾರಿಗಳು, ಮಾಂಸ, ಮೀನು, ಮೊಟ್ಟೆ ಮುಂತಾದುವು ಅವರಿಗೆ ನಿಷಿದ್ಧ. ಮೊಟ್ಟೆಯು ಸಸ್ಯಾಹಾರವೇ, ಮಾಂಸಾಹಾರವೇ ಎಂಬ ಚರ್ಚೆಯನ್ನು ಬದಿಗಿಟ್ಟು, ಅವರವರ ಧಾರ್ಮಿಕ ನಿಯಮ-ನಂಬಿಗೆಗಳನ್ನು ಕಾಪಾಡುವುದು ಈ ದೇಶದ ಸಂವಿಧಾನದ, ಸರ್ಕಾರದ ಹೊಣೆಗಾರಿಕೆ. ಹೀಗಿರುವಾಗ ಸರ್ಕಾರವು ಯಾವ ಧರ್ಮವೂ ನಿಷೇಧಿಸಿರದ - ಉಪ್ಪಿಟ್ಟು, ಅವಲಕ್ಕಿ, ರೊಟ್ಟಿ, ಚಪಾತಿ, ಹಾಲು ಮುಂತಾದುವನ್ನು ಶಾಲಾಮಕ್ಕಳಿಗೆ ಒದಗಿಸಬೇಕೇ ವಿನಾ, ಕೆಲವು ಧರ್ಮಗಳು ತಮ್ಮ ಅನುಯಾಯಿಗಳಿಗೆ ನಿಷೇಧಿಸಿರುವ ಮಾಂಸ, ಮೀನು, ಮೊಟ್ಟೆ, ಮಧ್ಯ ಮುಂತಾದುವನ್ನಲ್ಲ. ಇಂಥ ಆಲೋಚನೆಗಳೇ ಅತಿರೇಕದವು. ಬಹುಶಃ ಬ್ರಿಟಿಷರ ಸರ್ಕಾರ ಸಹ ಇಂತಹ ಧಾರ್ಷ್ಟ್ಯವನ್ನು ಪ್ರದರ್ಶಿಸಿರಲಿಕ್ಕಿಲ್ಲ.

ಇನ್ನು, ಕೋಳೀಮೊಟ್ಟೆ ಪೌಷ್ಟಿಕ ಆಹಾರವೇ ? ಎಂಬ ಸಂಗತಿಯನ್ನು ಪರಿಶೀಲಿಸಿದರೆ "ಪ್ರಕೃತಿ ಜೀವನ ವಿಜ್ಞಾನ" ದೃಷ್ಟಿಯಿಂದ ಸ್ಪಷ್ಟವಾಗಿ "ಅಲ್ಲ" ಎಂದು ಹೇಳಬಹುದು. ಅಶಕ್ತರಿಗೆ ಮೊಟ್ಟೆ ತಿನ್ನಿಸಿದರೆ ಶಕ್ತಿ ಬರುವುದೆಂಬುದು ಸುಳ್ಳು. ಸಹಜವಾದ ಆಹಾರವನ್ನು ಜೀರ್ಣಿಸಿಕೊಳ್ಳದೆ ಅಶಕ್ತನಾದವನು ಮೊಟ್ಟೆಯಂತಹ ಗಡಸು ಪದಾರ್ಥ ತಿಂದು ಜೀರ್ಣಿಸಿಕೊಳ್ಳಬಲ್ಲನೆ ? ಅದನ್ನು ಜೀರ್ಣಿಸಿಕೊಳ್ಳಲು ಇನ್ನಷ್ಟು ತನ್ನ ಶಕ್ತಿಯನ್ನು ವ್ಯಯ ಮಾಡಬೇಕಾಗುತ್ತದೆ. ಪ್ರಜಾಮತ, ಜನವರಿ 29, 1989ರ ಸಂಚಿಕೆಯ 42ನೆಯ ಪುಟದಲ್ಲಿ ಬಂದ ಒಂದು ಬರಹ ಹೀಗಿದೆ : "ಮೊಟ್ಟೆ ಸೇವನೆ-ಹೃದಯಾಘಾತಕ್ಕೆ ಆಹ್ವಾನ ಎಂಬ ಶೀರ್ಷಿಕೆಯಡಿಯಲ್ಲಿ ಈ ವಿವರಗಳಿವೆ. 1985ರಲ್ಲಿ 28ಲಕ್ಷರೂಗಳ ನೋಬೆಲ್ ಪಾರಿತೋಷಕ ಪಡೆದ ವೈದ್ಯ ವಿಜ್ಞಾನಿಗಳಾದ, ಅಮೆರಿಕದ ಡಾ॥ ಮಿಚೆಲ್ ಬ್ರೌನ್ ಮತ್ತು ಡಾ॥ ಜೋಸೆಫ್ ಗೋಲ್ಡ್ ಸ್ಟೈನ್‌ರ ಪ್ರಕಾರ 'ಹೃದಯಾಘಾತವನ್ನು ಬೇಡ ಎನ್ನುವವರು ಮೊಟ್ಟೆ-ಮಾಂಸಗಳನ್ನು ಆಹಾರದಿಂದ ವರ್ಜಿಸಬೇಕು. ಮೊಟ್ಟೆಯೊಳಗಿನ ಹಳದಿ ಲೋಳೆಯು ಕೊಲೆಸ್ಟರಾಲ್ ಅಂಶದಿಂದ ಕೂಡಿದ್ದು, ಇದರ ಸೇವನೆಯಿಂದ ಯಕೃತ (ಲಿವರ್)ಕೆಡುತ್ತದೆ."

ಭಾರತದ ಆರೋಗ್ಯ ಮತ್ತು ಪೌಷ್ಟಿಕಾಂಶ ಸಂಸ್ಥೆಯ ಡಾ॥ ಉಮೇಶ್ ಕಪಿಲ್ ಅವರು ಹೀಗೆ ಹೇಳುತ್ತಾರೆ : "ಸಸ್ಯಾಹಾರಕ್ಕಿಂತಲೂ ಮಾಂಸಾಹಾರವೇ ಹೆಚ್ಚು ಪೌಷ್ಟಿಕಾಂಶಗಳಿಂದ ಕೂಡಿದೆ ಎಂಬ ತಪ್ಪು ಕಲ್ಪನೆಯಿಂದ ಬಹಳಷ್ಟು ಮಂದಿ ಅಧಿಕ ಬೆಲೆಯ ಮಾಂಸಾಹಾರ ಸೇವಿಸುತ್ತಿದ್ದಾರೆ. ಇದು ತಪ್ಪು ; ಸಸ್ಯಾಹಾರವೇ ಹೆಚ್ಚು ಪೌಷ್ಟಿಕವಾದುದು."

ಡಾ॥ ಉಮೇಶ ಕಪಿಲರ ಅಧ್ಯಯನದಂತೆ, ಕಡಲೆಕಾಯಿಯಲ್ಲಿ 567 ಕಿಲೋ ಕಾಲರಿಗಳಿದ್ದರೆ, ರಾಹು ಮೀನಿನಲ್ಲಿ 97 ಕಿಲೋ ಕ್ಯಾಲರಿ ಮಾತ್ರ ಇರುತ್ತದೆ. ಕೋಳೀ ಮಾಂಸದಲ್ಲಿ 109 ಇದ್ದರೆ, ಗೋಧಿಯಲ್ಲಿ 346 ಇರುತ್ತದೆ. ಕೋಳಿಮೊಟ್ಟೆಯಲ್ಲಿ 173 ಕ್ಯಾಲರಿ ಇದ್ದರೆ, ತೊಗರಿಬೇಳೆಯಲ್ಲಿ 372 ಕ್ಯಾಲರಿ ಇರುವುದು. ಕುರಿಯ ಮಾಂಸದಲ್ಲಿ 118 ಇದ್ದರೆ ಹೆಸರು ಬೇಳೆಯಲ್ಲಿ 348 ಕಿಲೋಗ್ರಾಂ ಕ್ಯಾಲರಿ ಇರುತ್ತದೆ.

ಕಡಲೆಕಾಯಿ, ಸೋಯಾಬಿನ್, ಮುಂತಾದ ಎಣ್ಣೆಯ ಕಾಳುಗಳಲ್ಲಿ ಅತ್ಯಧಿಕ ಪ್ರೋಟೀನ್ ಅಂಶವಿರುತ್ತದೆ."

ಹೀಗೆ ತರಕಾರಿ, ಹಣ್ಣು, ಹಾಲು, ಬೇಳೆಕಾಳು, ಮೊಳಕೆ ಕಾಳುಗಳಲ್ಲಿ ಅತ್ಯಧಿಕ ಪೌಷ್ಟಿಕಾಂಶಗಳಿರುತ್ತವೆ. ಇದನ್ನರಿತು ಈಗೀಗ ಪಾಶ್ಚಿಮಾತ್ಯರು ಸಸ್ಯಾಹಾರದತ್ತ ಹೆಚ್ಚು ಒಲಿಯುತ್ತಿದ್ದರೆ, ಭಾರತೀಯರು ತಮ್ಮಲ್ಲಿದ್ದ ಉತ್ತಮ ಮೌಲ್ಯಗಳನ್ನು ತೊರೆಯುತ್ತಿದ್ದಾರೆ.

ಒಂದು ವೇಳೆ ಮುಖ್ಯಮಂತ್ರಿಗಳಿಗೆ ಬಡಮಕ್ಕಳಿಗೆ ಪೌಷ್ಟಿಕ ಆಹಾರವನ್ನೇ ಕೊಡುವ ಇಚ್ಛೆ ಇದ್ದರೆ ಸೌತೇಕಾಯಿ, ಕೆರೆಟ್ಟು, ಟೊಮೆಟೋ ಮುಂತಾದ ತರಕಾರಿಗಳನ್ನಾಗಲೀ, ಪೇರಲ, ಕಿತ್ತಲೆಯಂತಹ ಹಣ್ಣುಗಳನ್ನಾಗಲೀ ಒದಗಿಸಲಿ. ಇದರಿಂದಾಗಿ ಕೆಟ್ಟ ಉಪ್ಪಿಟ್ಟು ತಿಂದು ಹೊಟ್ಟೆನೋವು ಬರಿಸಿಕೊಳ್ಳುವುದು ತಪ್ಪಿ, ಮಕ್ಕಳು ರೋಗರಹಿತರಾಗಿ, ಸರ್ವಾಂಗೀಣವಾಗಿ ಬೆಳೆಯುತ್ತಾರೆ. ಇದರಿಂದ ದೇಶದ ಬೆನ್ನೆಲುಬಾದ ರೈತನನ್ನಾದರೂ ಪೋಷಿಸಿದಂತಾಗುತ್ತದೆ. ಧನದಾಸೆಗಾಗಿ (ಕೆಲವರು ಸ್ವಧರ್ಮವನ್ನೂ ಮರೆತು) ನಡೆಸುವ ಕೋಳಿ ಫಾರ್ಮುಗಳ ಶ್ರೀಮಂತ ಮಾಲಿಕರ ಹಣದ ಥೈಲಿಯನ್ನು ತುಂಬುವುದಕ್ಕಿಂತಲೂ ಒಕ್ಕಲುತನವನ್ನು ತನ್ನ ಪವಿತ್ರ ಉದ್ಯೋಗವನ್ನಾಗಿ ಇರಿಸಿಕೊಂಡು, ಬಸವಳಿದಿರುವ ರೈತನನ್ನಾದರೂ ಬಲಪಡಿಸಿದಂತಾಗುತ್ತದೆ.

ರಾಜಕಾರಣಿಗಳು ಮನಸ್ವೇಚ್ಛೆಯಂತೆ ವರ್ತಿಸಿ, ಧರ್ಮಬಾಹಿರವಾದ ಆಚರಣೆಯನ್ನು ಕಡ್ಡಾಯಗೊಳಿಸಿದರೆ, ಧಾರ್ಮಿಕ ನೇತಾರರು ಸಂಘಟನೆ ಮಾಡಿಕೊಂಡು ವ್ಯವಸ್ಥಿತ ಹೋರಾಟಕ್ಕೆ ಇಳಿಯುವ ಅನಿವಾರ್ಯತೆ ಒದಗಿ ಬಂದೀತು.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ,
ಬಸವ ಧರ್ಮ ಪೀಠ, ಕೂಡಲ ಸಂಗಮ.

ದಿ. 7-4-91 ರಂದು ನೀಡಿದ ಪತ್ರಿಕಾ ಹೇಳಿಕೆಯನ್ನು ಪ್ರಜಾವಾಣಿಯು 8-4-91 ರಂದು ಪುಟ 6 ರಲ್ಲಿ ಮಹತ್ವ ನೀಡಿ ಪ್ರಕಟಿಸಿತು. ಅದಕ್ಕೆ ಧನ್ಯವಾದಗಳು.

ಶ್ರೀಯುತ ಬಂಗಾರಪ್ಪನವರ ಭರವಸೆ

ದಿ. 9-4-91 ಪ್ರಜಾವಾಣಿ ಮುಖಪುಟದಲ್ಲಿ ಮುಖ್ಯ ಮಂತ್ರಿಗಳ ಭರವಸೆ ಹೀಗೆ ಮುದ್ರಣಗೊಂಡಿದೆ : "ಶಾಲೆಗಳಲ್ಲಿ ಕೋಳೀಮೊಟ್ಟೆ ಕೊಡುವ ಯೋಜನೆ ಕೈ ಬಿಡಲಾಗಿದೆ. ಅದನ್ನು ಮುಂದೆ ಪರಿಶೀಲಿಸುವ ಆಲೋಚನೆ ಕೂಡ ಇಲ್ಲ. ಮತ್ತು ಶಾಲೆಗಳಲ್ಲಿ ಕೇವಲ ಸಸ್ಯಾಹಾರ ಮಾತ್ರ ಕೊಡಲಾಗುವುದು."

ಸಮಾರೋಪ

ಮುಖ್ಯಮಂತ್ರಿಗಳ ಹೇಳಿಕೆಯಿಂದಾಗಿ ಬಹುದೊಡ್ಡ ಸಮಾಧಾನ ಸಸ್ಯಾಹಾರಿ ಜೀವನ ಪದ್ಧತಿಯ ಜನರಿಗೆ ಆಗಿರುವುದು ನಿಜ. ಆದರೂ ಈ ದೇಶದಲ್ಲಿ ರಾಜಕೀಯಕ್ಕೆ ಹೊರತಾದ ಒಂದು ನೈತಿಕ ಶಕ್ತಿಯ ಸಂಘಟನೆ ಅತ್ಯಗತ್ಯವಾಗಿದೆ. ಬದಲಾಗುತ್ತಿರುವ ಮೌಲ್ಯಗಳ ಪಾಶವೀ ಅಟ್ಟಹಾಸದಲ್ಲಿ ಒಳ್ಳೆಯ ಆಚಾರ-ವಿಚಾರಗಳನ್ನು ಸರ್ಕಾರವೇ ಗಾಳಿಗೆ ತೂರುವ ಯೋಜನೆಗಳನ್ನು ರೂಪಿಸುವ ಸಂಭವ ಇಲ್ಲದಿಲ್ಲ. ಸರ್ಕಾರಕ್ಕೆ, ನಾಲ್ಕು ದಿನದ ರಾಜರಾಗಿ ಮೆರೆಯುವ ರಾಜಕಾರಣಿಗಳಿಗೆ, ಸಿಕ್ಕಷ್ಟನ್ನು ಸಂಪಾದಿಸಬೇಕೆಂಬ ರಾಜಕಾರಣಿಗಳು ಮತ್ತು ಅಧಿಕಾರ ಶಾಹಿಗೆ ಯಾವ ಮೂಲದಿಂದ ಹಣ ಬಂದರೇನು? ಮುಂದಿನ ಜನಾಂಗವು ಯಾವ ವಿನಾಶದ ಹಾದಿ ತುಳಿದರೇನು?

ಆದ್ದರಿಂದ ಸಾತ್ವಿಕರು, ಧರ್ಮವಂತರು, ನೀತಿ-ನ್ಯಾಯ-ಧರ್ಮ ಉಳಿಯಬೇಕೆನ್ನುವವರು ಒಂದು ನೈತಿಕ ಶಕ್ತಿಯಾಗಿ ಸಂಘಟಿತರಾಗಿ, ಅಗತ್ಯ ಬಿದ್ದಾಗ ಧ್ವನಿ ಎತ್ತುವ ಕಾರ್ಯ ಎಂದಿಗಿಂತಲೂ ಇಂದು ಅತ್ಯಗತ್ಯವಾಗಿದೆ ಎಂಬುದನ್ನು ಮನಗಾಣಬೇಕು.

—ಮಾತಾಜಿ

ಶ್ರೀ ಮಾತೆಗೆ ಶರಣು

ಗುರು ಕರುಣೆಯಿಂದ ಆಯಿತ್ತು ಸುಜ್ಞಾನ
ಗುರು ಕರುಣೆಯಿಂದ ನೆಲೆಗೊಂಡಿತ್ತು ಸದ್ಭಕ್ತಿ
ಗುರು ಕರುಣೆಯಿಂದ ಸಕಲ ಸಂಪದ ಪ್ರಾಪ್ತಿ
ಗುರು ಕರುಣೆಯಿಂದ ದೊರಕುವುದು ಮುಕ್ತಿ
ಇಂತಿವೆಲ್ಲಕೆಯೂ ಗುರುವೇ ಕಾರಣವೆಂದರಿದು
ಗುರು ಮಾತೆ ಮಹಾದೇವಿ
ನಿಮ್ಮಡಿಗಳಿಗೆ ಶರಣು ಶರಣಾರ್ಥಿ ಎಂಬೆನು

—ಶೋಭಾದೇವಿ ಪರಮಾದಿ

ಆರೋಗ್ಯ ಸೂತ್ರಗಳು

ಮಾನವನು ಮಾಂಸಾಹಾರಿಯಲ್ಲ, ಏಕೆಂದರೆ :

1. ನಮಗೆ ಮಂಗಗಳಿರುವಂತೆ ಗಿಡ-ಮರಗಳ, ತೊಪ್ಪಲು-ತರಕಾರಿ, ಹಣ್ಣು ಕಾಯಿಗಳನ್ನು ಹರಿಯಲು ಬರುವಂತಹ ಕೈ ರಚನೆಯಿದೆ. ಸೀಳಲು, ಕತ್ತರಿಸಲು ಬರುವಂತಹ ಹರಿತವಾದ ಉಗುರುಗಳು ಇರುವುದಿಲ್ಲ.

2. ನಮ್ಮ ದವಡೆಗಳು ಮೇಲೆ-ಕೆಳಗೆ, ಅಕ್ಕ-ಪಕ್ಕಕ್ಕೆ ಸರಿದಾಡುತ್ತವೆ. ಆದರೆ ಮಾಂಸಾಹಾರಿ ಪ್ರಾಣಿಗಳ ದವಡೆಯೂ ಮೇಲೆ-ಕೆಳಗಷ್ಟೇ ಸರಿದಾಡುತ್ತವೆ.

3. ನಮ್ಮ ಜೊಲ್ಲು ಟಾಯಲೀನಯುಕ್ತವಾದ ಕ್ಷಾರೀಯ ಗುಣವುಳ್ಳದ್ದಿರುತ್ತದೆ. ಅದು ಪಿಷ್ಟ-ಶರ್ಕರಗಳನ್ನು ಜೀರ್ಣಿಸಲು ಸಹಾಯಕವಾಗಿರುತ್ತದೆ. ಮಾಂಸಾಹಾರೀ ಪ್ರಾಣಿಗಳ ಜೊಲ್ಲು ಪಾರ್ಥಿವ ಪದಾರ್ಥ (ಪ್ರೊಟೀನ) ಗಳನ್ನು ಜೀರ್ಣಿಸಲು ಸಹಾಯಮಾಡುವ ಆಮ್ಲೀಯ ಗುಣವುಳ್ಳದ್ದು.

4. ಮಾಂಸವನ್ನು ಕತ್ತರಿಸಲು ಉಪಯುಕ್ತವಾಗುವಂತಹ ಹರಿತವಾದ ಕೋರೆಯ ಹಲ್ಲುಗಳನ್ನು ನಿಸರ್ಗವು ಮಾಂಸಾಹಾರೀ ಪ್ರಾಣಿಗಳಿಗೆ ಕೊಟ್ಟಿದೆ. ನಮ್ಮ ಎಲ್ಲ ಹಲ್ಲುಗಳೂ ಸಾಮಾನ್ಯವಾಗಿ ಒಂದೇ ಅಳತೆಯದಿರುತ್ತವೆ.

5. ಮಾಂಸಾಹಾರಿ ಪ್ರಾಣಿಗಳ ಜಠರದ ಪಾಚನಸ್ರಾವವು ನಮ್ಮ ಪಾಚನಸ್ರಾವದಂತೆ ಆಮ್ಲೀಯವಾಗಿದ್ದರೂ ಅವುಗಳಲ್ಲಿಯ ಆಮ್ಲದ ಕಟುತೆಯೂ ಮಾಂಸದಲ್ಲಿಯ ಸಾರಜನಕ (ಪ್ರೋಟೀನ) ವನ್ನು ಜೀರ್ಣಿಸಲು ಬರುವಂತೆ ನಾಲ್ಕು ಪಟ್ಟು ಹೆಚ್ಚಾಗಿರುತ್ತದೆ.

6. ನಮ್ಮ ಹೊಟ್ಟೆಯಲ್ಲಿಯ ಸಣ್ಣ ಕರುಳು ಮತ್ತು ದೊಡ್ಡ ಕರುಳಿನ ಒಟ್ಟು ಉದ್ದಳತೆಯು ನಮ್ಮ ಎತ್ತರದ ಸುಮಾರು 4 ಪಟ್ಟು ಉದ್ದವಿರುತ್ತದೆ. ಆದರೆ ಮಾಂಸಾಹಾರಿ ಪ್ರಾಣಿಗಳ ಕರುಳು ಸಾಮಾನ್ಯವಾಗಿ ಅವುಗಳ ಉದ್ದಳತೆಯಷ್ಟೇ ಇರುತ್ತದೆ. ಅದರಿಂದ ಮಾಂಸವು ಬಹಳ ಸಮಯದ ವರೆಗೆ ಅವುಗಳ ಕರುಳಿನಲ್ಲಿ ಉಳಿದು ಕೊಳೆಯುವುದಿಲ್ಲ.

7. ಮಾಂಸಾಹಾರಿ ಪ್ರಾಣಿಗಳ ಯಕೃತ್ ಮತ್ತು ಮೂತ್ರಕೋಶವು ಇತರ ಪ್ರಾಣಿಗಳಿಗಿಂತಲೂ ಬಹಳಷ್ಟು ದೊಡ್ಡವಿರುತ್ತವೆ. ಏಕೆಂದರೆ ಮಾಂಸಾಹಾರದಿಂದ ಸಸಾರಜನಕ (ನೈಟ್ರೋಜಿನ್) ಯುಕ್ತ ಬಹಳಷ್ಟು ಮಲವನ್ನು ಶರೀರದಿಂದ ಹೊರ ಹಾಕಬೇಕಾಗುತ್ತದೆ.

8. ನೆಣಯುಕ್ತ ಮಾಂಸವನ್ನು ಜೀರ್ಣಿಸಲು ಸುಲಭವಾಗುವಂತೆ ಮಾಂಸಾಹಾರಿ ಪ್ರಾಣಿಗಳ ಯಕೃತ್ತು ಹೆಚ್ಚಿನ ಪ್ರಮಾಣದಲ್ಲಿ ಪಿತ್ತರಸವನ್ನು ಸ್ರವಿಸುವಂತೆ ಮಾಡುತ್ತದೆ.

"ಆರೋಗ್ಯ ಮತ್ತು ಆಹಾರ"

ಮಾಸ ಪತ್ರಿಕೆ (ಏಪ್ರಿಲ್ 1991) ಯಿಂದ ಆಯ್ದುದು

ಬಸವ ತತ್ತ್ವ ಪರೀಕ್ಷೆಗಳು 1990 - ಫಲಿತಾಂಶಗಳು

3. ಬಸವ ತತ್ತ್ವ ಪ್ರವೀಣ

ಪ್ರಥಮ ವರ್ಗ

ಪ್ರಥಮ ರ್‍ಯಾಂಕ್ : ಕಲ್ಯಾಣಪ್ಪ ಪರಮಾದಿ (ಹುಬ್ಬಳ್ಳಿ ಕೇಂದ್ರ)
ದ್ವಿತೀಯ ರ್‍ಯಾಂಕ್ : (1) ಕಲ್ಯಾಣಮ್ಮ ಚಂದ್ರಶೇಖರ್ ,,
(2) ಶೋಭಾದೇವಿ ಪರಮಾದಿ ,,
ತೃತೀಯ ರ್‍ಯಾಂಕ್ : ಗಂಗಾಂಬಿಕೆ ಬಸವರಾಜ್ ,,

2. ಬಸವ ತತ್ತ್ವ ಪರಿಚಯ

ಪ್ರಥಮ ವರ್ಗ

ಪ್ರಥಮ ರ್‍ಯಾಂಕ್ : ಭಾರತಿ ಕೆಂಪಯ್ಯ (ಬೆಂಗಳೂರು ಕೇಂದ್ರ)

ತೃತೀಯ ವರ್ಗ

ಭದ್ರೇಶ್ವರ ಸಿದ್ಧರಾಮಪ್ಪ ಕೋಟೆ (ಬೀದರ ಕೇಂದ್ರ)

1. ಬಸವ ತತ್ತ್ವ ಪ್ರವೇಶ

ಪ್ರಥಮ ವರ್ಗ

ಪ್ರಥಮ ರ್‍ಯಾಂಕ್ : ಕಸ್ತೂರಿ (ಬೆಂಗಳೂರು ಕೇಂದ್ರ)
ದ್ವಿತೀಯ ರ್‍ಯಾಂಕ್ : ಚನ್ನಬಸವಣ್ಣ ಬಂಡೆಪ್ಪ ಹಂಗರಗಿ (ಬೀದರ ಕೇಂದ್ರ)
ತೃತೀಯ ರ್‍ಯಾಂಕ್ : ಶಾಂತಾ ಶಿವಗೌಡ ಪಾಟೀಲ (ಸಂಕೇಶ್ವರ ಕೇಂದ್ರ)
ರೇಖಾ ಮಹಾದೇವ ದುಂಡಗೆ ,,

ದ್ವಿತೀಯ ವರ್ಗ

ಸಂಕೇಶ್ವರ ಕೇಂದ್ರ : ಸ್ನೇಹಲತಾ ಕಲ್ಲಪ್ಪಾ ಮಲಕಟ್ಟಿ
ನಾಗರತ್ನ ಗಿರಿಮಲ್ಲಪ್ಪ ಚೌಗಲಾ
ಮಹಾದೇವಿ ದುಂಡಪ್ಪಾ ಲಬ್ಬಿ
ಶೈಲಜಾ ಚಂದ್ರಶೇಖರ ನಾಶಿಪುಡಿ
ವಿಶ್ವನಾಥ ಶಿವಗೌಡ ಪಾಟೀಲ
ಉಮಾದೇವಿ ಚನ್ನಬಸಪ್ಪ ನಡಗದಲ್ಲಿ

ಬೀದರ ಕೇಂದ್ರ : ಬಸವಣ್ಣಾ ಕಂಟೆಪ್ಪ ಪಾಟೀಲ
ಉಮಾ ಹನುಮಂತರಾವ ಪಾಟೀಲ

ಅಕ್ಕಮಹಾದೇವಿ ವೈಜನಾಥಸ್ವಾಮಿ ಪಾಟೀಲ
ಅರುಣಾ ರಾಮಕಿಶನರಾವ ಕುಲಕರ್ಣಿ
ಮನ್ಮಥ ರಾಚಯ್ಯಸ್ವಾಮಿ ಥೋಟಿಮಠ
ರಾಜಕುಮಾರ ಗೌಡಪ್ಪ ಕಾತರಕಿ
ಸಿದ್ಧರಾಮ ಬಸಪ್ಪ ಮಾರಜವಾಡಿ
ಬಸವರಾಜಪ್ಪ ಸಂಗಪ್ಪ ಪಟವಾರಿ
ಶಾಂತಪ್ಪಾ ಚಂದ್ರಶೇಖರ ವಗ್ದರ್ಗಿ
ಸಂಜೀವಕುಮಾರ ಷಣ್ಮುಖಯ್ಯ ಮಠಪತಿ
ಚನ್ನವೀರ ಗುರುಲಿಂಗಪ್ಪಾ ಹೊಗ್ಗಾನಪೂರ

ತೃತೀಯ ವರ್ಗ

ಹುಬ್ಬಳ್ಳಿ ಕೇಂದ್ರ : ಶಂಕರಪ್ಪಾ ಚನ್ನಪ್ಪಾ ಗುಮ್ಮಗೋಳ
ಸುರೇಶ ನಿಂಗಪ್ಪಾ ಧಾರವಾಡಕರ
ಮುರುಗೇಶ ಭೀಮಪ್ಪ ಹೂಗಾರ
ಬಸವರಾಜ ಶಿವಪುತ್ರಪ್ಪ ಶಲವಡಿ
ಲಲಿತಾ ಪ್ರತಾಪಸಿಂಗ್ ಕಿಲ್ಲೇದಾರ
ಶಿವಲೀಲಾ ಕಾಶಪ್ಪಾ ನೂಲ್ವಿ
ನೀಲಾಂಬಿಕಾ ತೋಟಪ್ಪ ಮುಮ್ಮಿಗಟ್ಟಿ

ಸಂಕೇಶ್ವರ ಕೇಂದ್ರ : ಮೀನಾಕ್ಷಿ ಬಾಬುರಾವ ದೇಸಾಯಿ
ರಾವಸಾಹೇಬ ಮಹಾಲಿಂಗ ಕಿವಂಡಾ
ಕಾಡಪ್ಪ ಕಲ್ಲಪ್ಪ ಬಸ್ತವಾಡಿ
ದುರದುಂಡಿ ಲಕ್ಷ್ಮಣ ಮಗದಮ್ಮ
ಗಿರೀಶ ಚನ್ನಬಸಪ್ಪ ನಡಗದಲ್ಲಿ
ಮಲ್ಲಪ್ಪ ಅಲ್ಲಪ್ಪ ಗುಡಮಿ
ಮುರಲೀಧರ ಭೀಮಪ್ಪ ಚಲವಾದಿ
ಕಾವೇರಿ ಸತ್ಯಪ್ಪ ಹಿಡದುಗ್ಗಿ
ದ್ರಾಕ್ಷಾಯಿಣಿ ಸಾತಲಿಂಗಪ್ಪ ಹುಕ್ಕೇರಿ

ಬೀದರ ಕೇಂದ್ರ : ಜಯಶ್ರೀ ವಾಮನರಾವ ಶೇಂದ್ರೆ
ಎಂ. ಎ. ರಹಿಮಾನ ನನ್ನು ಸಾಬ ಪಟೇಲ
ಸಂತೋಷಕುಮಾರಿ ಶರಣಯ್ಯಸ್ವಾಮಿ ಪೂಜಾರಿ
ಕಾಶೀನಾಥ ಭೀಮರಾವ ಸಂತಪೂರೆ
ವಿರೂಪಾಕ್ಷ ಸದಾನಂದ ಮಂತಾಳೆ

ಅಶೋಕ ಮಲ್ಲಿಕಾರ್ಜುನ ಪಾಟೀಲ
ಮಲ್ಲಿಕಾರ್ಜುನಪ್ಪಾ ಸಂಗಪ್ಪ ಪಟವಾರಿ
ಸಂತೋಷಕುಮಾರ ನಾಗಶೆಟ್ಟಿ ಹಜನಾಳೆ
ಗಾಯತ್ರಿ ಚಂದ್ರಪ್ಪ ಮಾನಾ
ಸರ್ವಮಂಗಳಾ ಮಹಾದೇವಪ್ಪಾ ಜಾಪೂರ
ಜಯಾ ಬಸವರಾಜ ಅಂಬಲಗಿ
ದಾಕ್ಷಾಯಿಣಿ ಶಂಕರರಾವ ಕುಲಕರ್ಣಿ
ಸುಜ್ಞಾನಿ ವೀರಶೆಟ್ಟೆಪ್ಪಾ ವೈಲಾರೆ
ಸಂತೋಷಿ ವಿಶ್ವನಾಥ ಕಾಜಿ
ಬಸವರಾಜ ಶಿವರಾಜ ಪಾಟೀಲ
ರೇಣುಕಾ ವೀರಯ್ಯಾ ಅಗ್ರಹಾರೆ
ಮಲ್ಲಿಕಾರ್ಜುನ ಸದಾನಂದ ಪೋಲೀಸ ಪಟೇಲ
ಬಸವರಾಜ ಶಿವಶಂಕರಪ್ಪ ಹೊಟಗೊಂಡ
ಗಂಗಮ್ಮಾ ಮಲ್ಲಿಕಾರ್ಜುನ ಪಾಟೀಲ
ಸಂತೋಷ ಕಾಂತಪ್ಪಾ ಅಂಬುಲಗೆ
ವಿದ್ಯಾವತಿ ಸಂಗಯ್ಯಾ ಮಠಪತಿ
ಮಂಜು ಬಸವರಾಜ ಅಂಬಲಗಿ
ಸೂಗಮ್ಮಾ ಶರಣಪ್ಪ ದೇವರಕಲ್
ಸಂಜೀವಕುಮಾರ ವಿಶ್ವನಾಥ ಚಲುವಾ
ಕಲ್ಯಾಣರಾವ ಮಲ್ಲಶೆಟ್ಟೆಪ್ಪಾ ಝುರಕುಂಟೆ
ಸುನಿತಾ ಬಸವರಾಜ ಹಂಗರಗಿ
ಸುನೀಲ ಸಂಗ್ರಾಮ ಪಾಟೀಲ
ಸಿದ್ಧಾರೂಢ ಅಪ್ಪಾಸಾಹೇಬ ಡಿಗ್ಗಿ
ಸಂಗನ ಬಸವ ಚನ್ನಪ್ಪಗೌಡ ಗೌಡರ
ಪ್ರೇಮೇಶ ಈರಪ್ಪ ಕಲಭಾರ
ಅನುರಾಧಾ ಜಗನಾಥ ಮಡಿವಾಳ
ಶಿವಕುಮಾರ ಚನ್ನಬಸಪ್ಪ ಪಾಟೀಲ
ಚಿದಂಬರೇಶ್ವರಿ ಚಂದ್ರಕಾಂತ ಪೋಸ್ತೆ
ಸವಿತಾ ಶಂಕರರಾವ ಉಣ್ಣೆ
ರಮೇಶ ಕಾಶೀನಾಥ ಧಬಾಲೆ
ಶಿವಪುತ್ರ ಕಲ್ಯಾಣರಾವ ಮೊಳಕೇರಿ
ಸಂಪಾಲರೆಡ್ಡಿ ನರಸಾರೆಡ್ಡಿ ರೆಡ್ಡಿ

ವೀರಶೆಟ್ಟಿ ಪ್ರಭುಶೆಟ್ಟಿ ಉಚ್ಚೆಕರ್
ಮುರುಗೇಶ ಗುರುರಾಜ ಪತ್ತಾರ
ದಾಕ್ಷಾಯಿಣಿ ಬಸವರಾಜ ಸಜ್ಜನಿ
ವಿದ್ಯಾಸಾಗರ ಬಸವರಾಜ ಪಾಟೀಲ
ಶರದಕುಮಾರ ಶಂಭುಲಿಂಗಪ್ಪ ಎತ್ತಿನಮನಿ
ಲಕ್ಷ್ಮೀ ಮಠ
ಸುವರ್ಣಾ ಶಿವಾನಂದ
ತೇಜಸ್ವಿನಿ ರಾಜಗೋವಿಂದಗೌಡ
ಪುಷ್ಪಾವತಿ ಲಿಂಗಪ್ಪಾ
ಪುಣ್ಯವತಿ ಶಿವರಾಜ
ಸವಿತಾ ಸುಭಾಷ ಮೊಳಕೇರಿ
ಸುನಿತಾ ಮನೋಹರರಾವ ಕುಲಕರ್ಣಿ
ವಿಜಯಶ್ರೀ ಮಲ್ಲಿಕಾರ್ಜುನ ಪಾಟೀಲ
ಶಿವಲೀಲಾ ಬಸವರಾಜ
ನಂದಿನಿ ಸಿದ್ಧರಾಮಪ್ಪ ಸಂತಪುರೆ
ಭಾರತಾಂಬಾ ಕಲ್ಯಾಣರಾವ ದಾವನಗಾವೆ
ಮೈತ್ರಾದೇವಿ ವಿಶ್ವನಾಥ ಮಾನಾ
ಪ್ರಭಾವತಿ ಹನುಮಂತಪ್ಪಾ ಹೂಗಾರ
ಮೀನಾಕ್ಷಿ ನಾಗಶೆಟ್ಟೆ ಡಪ್ಪುರೆ
ಬೇಬಿ ಶ್ರೀನಿವಾಸ ಜವಳಗಿಕರ
ಅರ್ಚನಾ ಕಂಟೆಪ್ಪಾ ಹೊಸಮನಿ
ರಂಜನಾ ಶ್ರೀನಿವಾಸರಾವ ಕುಲಕರ್ಣಿ
ಅರ್ಚನಾ ಅನಂತರಾವ ಕುಲಕರ್ಣಿ
ಸುರೇಖಾ ಕಾಶೀನಾಥರಾವ
ಅನಿತಾ ಪುಂಡಲೀಕರಾವ

—ಶರಣೆ ಶೋಭಾದೇವಿ ಪರಮಾಡಿ
ನಿರ್ದೇಶಕರು

ಶ್ರೀ ಬಸವ ಭಾರತಿ ದಿವ್ಯಜ್ಞಾನ ವಿದ್ಯಾಲಯ, 'ಬಸವ ಚೈತನ್ಯ'
ಬಸವನಗರ, ಹೆಗ್ಗೇರಿ ಕಾಲನಿ ಬಳಿ, ಹುಬ್ಬಳ್ಳಿ

ವಿ. ಸೂ. 1991 ನೇ ಇಸ್ವಿ ಆಗಸ್ಟನಲ್ಲಿ ನಡೆಯಲಿರುವ ಪರೀಕ್ಷೆಗಳಿಗೆ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ 20-7-1991.

ಶುಭಹಾರೈಕೆಗಳು

ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಎಲ್ಲರಿಗೂ ಶುಭಹಾರೈಕೆಗಳು. ಶರಣ. ಲಿಂ॥ ವೀರಭದ್ರಪ್ಪ ರುದ್ರಪ್ಪ ಕಮಡೊಳ್ಳಿ ಹುಬ್ಬಳ್ಳಿ, ಇವರು ಬಹುಮಾನಕ್ಕಾಗಿ ಕೊಟ್ಟ ಡಿಪಾಜಿಟ್ ಹಣ ರೂ 1000/. ದ ಮೇಲಿನ ಬಡ್ಡಿ ಹಾಗೂ ಶರಣ ಜಿ. ಎಂ. ಪಾಟೀಲ ಧಾರವಾಡ ಇವರು ಕೊಟ್ಟ ರೂ 200/-ರಿಂದ ಪ್ರಥಮ, ದ್ವಿತೀಯ, ಹಾಗೂ ತೃತೀಯ ರ್‍ಯಾಂಕ್ ವಿಜೇತರಿಗೆ ಕ್ರಮವಾಗಿ ರೂ 50, 30 ಮತ್ತು 20 ರೂ ಬಹುಮಾನವನ್ನು ಕೊಡಲಾಗಿದೆ.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ
ಬಸವ ತತ್ತ್ವ ಪರಿಷತ್ತು, ಬೆಂಗಳೂರು

ಕರುಣಾಮೂರ್ತಿ ಬಸವಣ್ಣ

ಬಸವಣ್ಣಾ, ನೀವೆ ಗತಿ ಮತಿ ಎನಲು
ಗುರುವ ತೋರಿದಿರಿ.
ಬಸವಣ್ಣಾ, ನೀವೆ ತಂದೆ ತಾಯಿ ಎನಲು
ಲಿಂಗವ ಕರುಣಿಸಿದಿರಿ.
ಬಸವಣ್ಣಾ, ನೀವೆ ಸಕಲ ಸಂಪತ್ತು ಎನಲು
ಜಂಗಮವ ತೋರಿದಿರಿ.
ಗುರು, ಲಿಂಗ, ಜಂಗಮದ ಮಹತಿಯ ಅರುಹಲು
ಗುರು ಮಾತೆಯವರನ್ನು ಕರುಣಿಸಿದಿರಿ.
ಇಂತಪ್ಪ ಕರುಣಾಮೂರ್ತಿ
ಗುರು ಬಸವಣ್ಣ ನಿಮ್ಮಡಿಗಳಿಗೆ ಶರಣು ಶರಣಾರ್ಥಿ

—ಶೋಭಾದೇವಿ ಪರಮಾದಿ

ನಾಲ್ಕನೆಯ ಶರಣ ಮೇಳಕ್ಕೆ 501—00 ರೂಗಳ ಮೇಲೆ ಧನ ಸಹಾಯ ಮಾಡಿದವರು

(ಯಾದಿಯು ಜನವರಿ–ಫೆಬ್ರವರಿ ಸಂಚಿಕೆಯಿಂದ ಮುಂದುವರಿದಿದೆ)

ಕ್ರಮಸಂಖ್ಯೆ.	ಊರು–ಹೆಸರು	ಯಾದಿಯ ಸಂಖ್ಯೆ.	ಮೊತ್ತ
62.	ಪೂಜ್ಯ ಶ್ರೀ. ನಿ. ಪ್ರ. ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು, ಬೃಹನ್ಮಠ, ಚಿತ್ರದುರ್ಗ		1001–00
63.	ಬಿ. ಎ. ರಾಜಮಾಣಿಕ್ಯಂ, ಎಲಾಂಪಿಲ್ಲೈ, ತಮಿಳುನಾಡು		1001-00
64.	ಕೆ. ಪ್ರಭುರಾಜ್, ಸಕಲಟ್ಟಿ, ತಮಿಳುನಾಡು		1001.00
65.	ನಾಗರೆಡ್ಡಿ ಮಲ್ಲರೆಡ್ಡಿ, ಕೆರೂರು		1001-00
66.	ಆರ್. ಕೆ. ಮಣಿ, ಬೆಂಗಳೂರು		1001-00
67.	ಎಂ. ಸದಾಶಿವಪ್ಪ ಮತ್ತು ಕೋ. ಬೆಂಗಳೂರು		1001.00
68.	ಉದಯಕುಮಾರ ಶರಣಪ್ಪ ವಂದಾಲ, ಬಾಗಲಕೋಟೆ	(2443)	501.00
69.	ಸಿದ್ಧಗಂಗಮ್ಮ ಸಿದ್ಧರಾಮಣ್ಣ, ತುಮಕೂರು	(2439)	501-00
70.	ಸಿದ್ಧಮ್ಮ ಎಂ. ಬಿ. ಹನುಮಂತಪ್ಪ, ಮಲ್ಲೇನಹಳ್ಳಿ	(2438)	501-00
71.	ಪಾರ್ವತಮ್ಮ ಚಂದ್ರಶೇಖರ ಯರನಾಳ, ಇಳಕಲ್	(2409)	501-00
72.	ಬಿ. ಹಂಪಣ್ಣ, ಗಂಗಾವತಿ	(2408)	501-00
73.	ಮನೋಹರ ಮತ್ತು ಸಹೋದರರು	(2402)	501-00
74.	ಎಂ. ನಾಗರಾಜ್, ಗುಡಿಯಾತ್ತಂ	(2396)	501-00
75.	ಮಡಿವಾಳಪ್ಪ ಉಟಗಿ, ದ್ಯಾಬೇರಿ	(2391)	501-00
76.	ಸಿದ್ಧನಗೌಡ ಗ್ಯಾನಗೌಡರು, ಚಳಗೇರಿ	(2389)	501-00
77.	ರಾಯಪ್ಪ ನಾಗಪ್ಪ ತೆಂಬದ, ಚಳಗೇರಿ	(2388)	501-00
78.	ಶಿವಪ್ಪ ನಾಗೇನಹಳ್ಳಿ ಕೆಂಪಣ್ಣವರ, ಮುದೇನೂರು	(2387)	501.00
79.	ಎಸ್. ಚನ್ನವೀರದೇವರಪ್ಪ, ಬೆಂಗಳೂರು	(1295)	501-00
80.	ಟಿ. ಚಿಕ್ಕಸಿದ್ಧಲಿಂಗಪ್ಪ, ಸೂಲೀಬೆಲೆ	(1297)	501-00
81.	ಕೆ. ಆರ್. ಶಿವಾನಂದ. ಬೆಂಗಳೂರು	(1301)	501-00
82.	ಶ್ರೀ ಮಂಜುನಾಥ ಟ್ರೇಡರ್ಸ್, ಬೆಂಗಳೂರು	(1302)	501-00
83.	ಜಿ.ಎ. ಮಹೇಶ್, ಬೆಂಗಳೂರು.	(1346)	501-00
84.	ಗಣೇಶ ಆಯಿಲ್ ಟ್ರೇಡರ್ಸ್, ಚಳ್ಳಕೆರೆ.	(1400)	ಒಂದು ಡಬ್ಬಿ ಎಣ್ಣೆ
85.	ರವಿಚಂದ್ರ ಆಯಿಲ್ ಇಂಡಸ್ಟ್ರೀಸ್ ,,	(1403)	,,
86.	ಪವಿತ್ರ ಇಂಡಸ್ಟ್ರೀಸ್ ,,	(1406)	,,

ಕ್ರಮಸಂಖ್ಯೆ	ಊರು-ಹೆಸರು	ಯಾದಿಯ ಸಂಖ್ಯೆ	ಮೊತ್ತ
87.	ದಾಕ್ಷಾಯಿಣಿ ಇಂಡಸ್ಟ್ರೀಸ್, ಚಳ್ಳಕೆರೆ	(1408)	ಒಂದು ಡಬ್ಬಿ ಎಣ್ಣೆ
88.	ಸರಸ್ವತಿ ಆಯಿಲ್ ಟ್ರೇಡರ್ಸ್ ,,	(1409)	,,
89.	ಬಾಲಾಜಿ ಆಯಿಲ್ ಇಂಡಸ್ಟ್ರೀಸ್ ,,	(1410)	,,
90.	ಸಿ.ಎ. ಶಿವಣ್ಣ ಮತ್ತು ಮಕ್ಕಳು ,,	(1411)	,,
91.	ಕಾತ್ಯಾಯಿನಿ ಆಯಿಲ್ ಟ್ರೇಡರ್ಸ್ ,,	(1412)	,,
92.	ಸುಜಾತಾ ಇಂಡಸ್ಟ್ರೀಸ್, ,,	(1413)	,,
93.	ಕೆ.ವಿ. ಶಶಿಕಲಾ, ,,	(1431)	,,
94.	ಶಕುಂತಲಾ ಕಲ್ಲಪ್ಪ ಬ್ಯಾಹಟ್ಟಿ. ಧಾರವಾಡ	(1542)	501-00
95.	ಬ್ರಿ. ಜಿ. ಎಂ. ಎಸ್. ಮಲ್ಲಪ್ಪ, ಬೆಂಗಳೂರು	(1582)	500-00
96.	ಇಬ್ರಾಹಿಂ ಎಕ್ಸ್‌ಪ್ರೆಸ್ಸು, ಶಿವಮೊಗ್ಗ	(1643)	501-00
97.	ಹೆಚ್.ಎಸ್. ಶಿವರುದ್ರಪ್ಪ, ಬೆಂಗಳೂರು	(1938)	501-00
98.	ಎ.ಸಿ. ನಂಜುಂಡಪ್ಪ, ಬೆಂಗಳೂರು	(1962)	1001-00
99.	ಶ್ರೀನಿವಾಸ, ಜಯನಗರ, ಬೆಂಗಳೂರು	(1963)	501.00
100.	ದೇವಿಕಾ ಶರಣಪ್ಪ, ಬೆಂಗಳೂರು	(1974)	501-00
101.	ಅನ್ನಪೂರ್ಣ ಎನ್. ಬಸವರಾಜು, ಬೆಂಗಳೂರು	(1976)	501.00
102.	ಶ್ರೀ ಗುರು ಬಸವ ಮಂಟಪ ಟ್ರಸ್ಟ್, ಹುಬ್ಬಳ್ಳಿ	(1984)	501.00
103.	ರಾಷ್ಟ್ರೀಯ ಬಸವ ದಳ, ಹುಬ್ಬಳ್ಳಿ	(1990)	770-00
104.	ಎಸ್. ಕೆ. ಶಕುಂತಲಾ, ಮೈಸೂರು	(2143)	501-00
105.	ವೀರಯ್ಯ, ಮೈಸೂರು	(2144)	501-00
106.	ಅನ್ನಪೂರ್ಣ ಮತ್ತು ಗಂಗಮ್ಮ. ಮೈಸೂರು	(2145)	501-00
107.	ಹೆಚ್.ಎಸ್. ಶಿವರುದ್ರಪ್ಪ, ಬೆಂಗಳೂರು	(2209)	501.00
108.	ಪಾರ್ವತಿ. ಡಾ॥ ಸಿ.ವಿ. ಶಿರೋಳ, ಬೆಂಗಳೂರು	(2211)	501-00
109.	ಆರ್. ಎಂ. ಬಿ. ಆರಾಧ್ಯ, ಬೆಂಗಳೂರು	(2215)	501-00
110.	ಇಂದುಶೇಖರ್ ಓಂಕಾರ ಸ್ವಾಮಿ, ಬೆಂಗಳೂರು	(2216)	501-00
111.	ಭಾರತಿ ಕೆಂಪಯ್ಯ, ಬೆಂಗಳೂರು	(2217)	501-00
112.	ವಿ.ಹೆಚ್. ರಾಮಸಿಂಗ್, ಕಂಪ್ಲಿ	(2304)	501-00
113.	ಎಂ. ವೀರೇಶಪ್ಪ, ಸಿಂಧನೂರು	(2319)	ಒಂದು ಚೀಲ ಅಕ್ಕಿ
114.	ಗೋವಿಂದರೆಡ್ಡಿ, ಸಿಂಧನೂರು	(2320)	ಒಂದು ಚೀಲ ಅಕ್ಕಿ
115.	ಬಾದರ್ಲಿ ಬಸವನಗೌಡರು, ಸಿಂಧನೂರು	(2328)	ಎರಡು ಚೀಲ ಅಕ್ಕಿ
116.	ಎಸ್. ಶಿವನಾಗಪ್ಪ, ಸಿಂಧನೂರು	(2329)	ಎರಡು ಚೀಲ ಅಕ್ಕಿ
117.	ಬಿನ್ನಿಗನೂರು ಐಯ್ಯನಗೌಡರು, ಸಿಂಧನೂರು	(2330)	ಎರಡು ಚೀಲ ಅಕ್ಕಿ

ಕ್ರಮಸಂಖ್ಯೆ	ಊರು-ಹೆಸರು	ಯಾದಿಯ ಸಂಖ್ಯೆ	ಮೊತ್ತ
118.	ಗುಂಜಳ್ಳಿ ಶಂಕರಗೌಡರು, ಸಿಂಧನೂರು	(2331)	ಒಂದು ಚೀಲ ಅಕ್ಕಿ
119.	ಪಿ. ಆರ್. ಪಾಟೀಲ, ಕೂಡಲಸಂಗಮ	(2332)	501-00
120.	ಬಿ. ಎಸ್. ಗೌಡರ, ಕೂಡಲಸಂಗಮ	(2333)	501-00
121.	ಜಿ. ಜಿ. ಪಾಟೀಲ, ಕೂಡಲಸಂಗಮ	(2334)	501-00
122.	ಮಳೆಯಪ್ಪ ಚೌಧರಿ, ಕೂಡಲಸಂಗಮ	(2335)	501-00
123.	ಗುರುಸಂಗಪ್ಪ ಗೌಡರು	(2337)	501-00
124.	ನೀಲಪ್ಪ ಗೌಡರು ಕಟಗೇರಿ	(2338)	501-00
125.	ರವೀಂದ್ರ ಬೆಟಗೇರಿ, ಆಸ್ಟ್ರೇಲಿಯಾ	(2339)	501-00
126.	ಎಂ. ಮಲ್ಲಿಕಾರ್ಜುನ ಶಾಸಕರು, ಗಂಗಾವತಿ	(2435)	ಒಂದು ಚೀಲ ಅಕ್ಕಿ
127.	ಪಿ. ಐ. ಮನವಳ್ಳಿ, ಗಂಗಾವತಿ	(2425)	ಒಂದು ಚೀಲ ಅಕ್ಕಿ
128.	ಎಂ.ಎಸ್. ನಾಗಪ್ಪ, ಗಂಗಾವತಿ	(2417)	ಒಂದು ಚೀಲ ಅಕ್ಕಿ
129.	ಕೆ. ಎಂ. ಹೇಮಯ್ಯ, ಹೊಸಪೇಟೆ	(2416)	ಒಂದು ಚೀಲ ಅಕ್ಕಿ
130.	ಹನುಮಂತರಾಯ ಸಜ್ಜನ, ಢವಳಗಿ	(2386)	ಒಂದು ಚೀಲ ಅಕ್ಕಿ
131.	ಡಾ॥ ಎನ್. ಹಾಲ್‌ದೊರೈ, ಕೊಯಮತ್ತೂರು	(2351)	501-00
132.	ದುರೈಸ್ವಾಮಿ ಅಯ್ಯಾ. ಭವಾನಿ, ತ.ನಾ	(2352)	501-00
133.	ಎಸ್.ಪಿ. ಸದಾಶಿವಮ್, ಶಂಕರಿ, ತ.ನಾ	(2362)	501.00
134.	ಬಿ.ಎ. ಅರ್ಧನಾರಿ ಪಂಡಾರಾಮ್, ಎಲಾಮ್‌ಪಲ್ಲಿ	(2363)	501-00
135.	ಎಂ.ಎಸ್. ಜಯಮ್ಮ ಸೋಮಶೇಖರ್, ಆಲೂರು	(2373)	501-00
136.	ಎಂ.ಸಿದ್ಧಣ್ಣ, ಹುಬ್ಬಳ್ಳಿ	(2374)	501-00
137.	ಮಧುಕರ್ ಶೆಟಗಾರ, ನಾರಾಯಣಖೇಡ	(2375)	501-00

ಈ ಎಲ್ಲ ದಾಸೋಹಿಗಳಿಗೆ ಪರಮಾತ್ಮನು ಮತ್ತು ಮಂತ್ರಪುರುಷ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದ ನೀಡಲೆಂದು ಹಾರೈಸುತ್ತೇವೆ.

—ಮಾತಾಜಿ, ಕಾರ್ಯಾಧ್ಯಕ್ಷೆ

ವಿ.ಸೂ:—

1. ಯಾದಿಯು ದೊಡ್ಡದಾದರೆ ಕಲ್ಯಾಣ ಕಿರಣದ ಓದುಗರಿಗೆ ಬೇಸರವಾಗಬಹುದೆಂದು 501-ರೂ ಕೊಟ್ಟವರ ಪಟ್ಟಿಗೆ ನಿಲ್ಲಿಸಲಾಗಿದೆ. ಅನ್ಯಥಾ ಭಾವಿಸಬಾರದು.
2. 501-ರೂ ಶರಣ ಮೇಳಕ್ಕೆ ನೇರವಾಗಿಯಾಗಲೀ ಅಥವಾ ಯಾರ ಮೂಲಕವಾಗಿಯಾಗಲೀ ಕೊಟ್ಟಿದ್ದು, ಹೆಸರು ಮುದ್ರಣವಾಗಿಲ್ಲದಿದ್ದರೆ ತಿಳಿಸಿರಿ.


॥ಓಂ ಶ್ರೀ ಗುರುಬಸವಲಿಂಗಾಯ ನಮಃ॥

ಗೃಹ ಪ್ರವೇಶ - ಕೆಲವು ಸಲಹೆಗಳು

ಶರಣ ಬಂಧುಗಳೆ,

ಗೃಹಪ್ರವೇಶದ ಸಂದರ್ಭದಲ್ಲಿ ಕೆಳಗಿನ ವಿಷಯಗಳನ್ನು ಗಮನಿಸಬೇಕೆಂದು ವಿನಂತಿಸುತ್ತೇವೆ.

1. ಮನೆಗಳಿಗೆ ಶ್ರೀ ಗುರು ಬಸವಣ್ಣ, ಇತರ ಶರಣರ ಹೆಸರುಗಳೊಂದಿಗೆ ಶರಣ ಸಂಸ್ಕೃತಿಗೆ ಸೂಕ್ತವಾದ ಹೆಸರುಗಳನ್ನು ಇಡಿರಿ.



2. ಮನೆಯ ಹೊರಗಡೆ ಪ್ರವೇಶ ದ್ವಾರದ ಮೇಲ್ಭಾಗದಲ್ಲಿ ಷಟಸ್ಥಲ ಲಾಂಛನವನ್ನು ಪೇಂಟ್, ಸಿಮೆಂಟ್ ಮುಂತಾದವುಗಳಿಂದ ಹಾಕಿಸಿರಿ.

3. ಮನೆಯಲ್ಲಿ ಎದ್ದು ಕಾಣುವ ಹಾಗೆ ಶ್ರೀ ಗುರು ಬಸವಣ್ಣನವರ ಚಿತ್ರ ರಾರಾಜಿಸಲಿ. ಪೂಜಾಮಂದಿರದಲ್ಲಿ ಗುರು ಬಸವಣ್ಣನವರ ಭಾವಚಿತ್ರ ಮಾತ್ರ ಇರಲಿ.
4. ಗೃಹಪ್ರವೇಶದ ಆಹ್ವಾನ ಪತ್ರಿಕೆಗಳಲ್ಲಿ ಶ್ರೀ ಗುರು ಬಸವಣ್ಣನವರ ಚಿತ್ರವನ್ನು ಹಾಕಿದರೆ ಒಳ್ಳೆಯದು. ಮೇಲ್ಭಾಗದಲ್ಲಿ "ಓಂ ಶ್ರೀ ಗುರು ಬಸವಲಿಂಗಾಯ ನಮಃ" ಮಂತ್ರವನ್ನು ಮುದ್ರಿಸಿರಿ.
5. ಸಿದ್ಧವಾದ ಪತ್ರಿಕೆ ತಂದಲ್ಲಿ, ಶರಣ ಸಂಸ್ಕೃತಿಗೆ ಹೊರತಾದ ಚಿತ್ರಗಳನ್ನು ಆಯ್ಕೆ ಮಾಡಬೇಡಿರಿ. ಸೂಕ್ತ ಧಾರ್ಮಿಕ ಲಾಂಛನ ಸಿಗದಿದ್ದರೆ ಕಲಾತ್ಮಕ ಚಿತ್ರಗಳನ್ನು ಆಯ್ಕೆ ಮಾಡಿರಿ.
6. ಆಹ್ವಾನ ಪತ್ರಿಕೆಗಳಲ್ಲಿ ಮುಹೂರ್ತ ಮುಂತಾಗಿ ಮುದ್ರಿಸದೆ ಶರಣರ ಜಯಂತಿ ಇತ್ಯಾದಿ ಇದ್ದರೆ ಅವುಗಳನ್ನು ನಮೂದಿಸಿರಿ. ನಿಮಗೆ ಅನುಕೂಲವಾದ ವಾರ, ದಿನಾಂಕ ಸಮಯಗಳನ್ನು ನಮೂದಿಸಿದರೆ ಸಾಕು.

7. ಆಹ್ವಾನ ಪತ್ರಿಕೆಗಳ ಖಾಲಿ ಸ್ಥಳದಲ್ಲಿ (ಹಿಂಬದಿ ಮುಂತಾದೆಡೆ) ವಚನಗಳನ್ನು ಅಥವಾ ಲಿಂಗಾಯತ ಧರ್ಮದ ಆರು ಸೂತ್ರಗಳನ್ನು ಮುದ್ರಿಸಿರಿ.

ಲಿಂಗಾಯತ ಧರ್ಮದ ಆರು ಸೂತ್ರಗಳು

1. ಧರ್ಮ ಗುರು : ಸಮತಾವಾದಿ ವಿಶ್ವಗುರು ಬಸವಣ್ಣನವರು.
2. ಧರ್ಮ ಸಂಹಿತೆ : ಸಮಾನತೆ ಸಾರುವ ವಚನ ಸಾಹಿತ್ಯ
3. ಧರ್ಮ ಲಾಂಛನ : ವಿಶ್ವದಾಕಾರದಲ್ಲಿರುವ ದೇವರ ಕುರುಹು ಇಷ್ಟಲಿಂಗ
4. ಧರ್ಮ ಕ್ಷೇತ್ರ : ಬಸವಣ್ಣನವರ ಐಕ್ಯ ಕ್ಷೇತ್ರ ಕೂಡಲ ಸಂಗಮ.
5. ಧರ್ಮ ಧ್ವಜ : ಬಸವಮಂತ್ರ ಸಹಿತ ಷಟಸ್ಥಲ ಧ್ವಜ.
6. ಧರ್ಮದ ಧ್ಯೇಯ : ಜಾತಿ-ವರ್ಣ ವರ್ಗ ರಹಿತ ಕಲ್ಯಾಣರಾಜ್ಯ ನಿರ್ಮಾಣ

8. ಪ್ರಾರಂಭದಲ್ಲಿ ಶ್ರೀ ಬಸವೇಶ್ವರ ಪೂಜಾವ್ರತ ಮಾಡಿ, ವಿಭೂತಿಯಿಂದ ಪೂಜಾ ಮಂದಿರ, ಅಡುಗೆ ಮನೆ, ತಿಜೋರಿ ಮುಂತಾದವುಗಳ ಮೇಲೆ ಷಡಸ್ಥಲ ಲಾಂಛನ ಹಾಗೂ ಓಂ ಬರೆದು ಮತ್ತು ವಿಭೂತಿ ಧರಿಸಿದ ಬೆರಳುಗಳಿಂದ "ಓಂ ಶ್ರೀ ಗುರು ಬಸವ ಲಿಂಗಾಯ ನಮಃ" ಗುರು ಮಂತ್ರವನ್ನು 12 ಸಲ ಭಕ್ತಿಯಿಂದ ಪಠಿಸಿ ಷಟಸ್ಥಲ ಲಾಂಛನ ಬರೆದು ತಯಾರಿಸಿದ ಮಂತ್ರೋದಕವನ್ನು ಸಿಂಪಡಿಸಿ, ಮನೆಯನ್ನು ಶುದ್ಧಿ ಮಾಡಿರಿ, ಲಭ್ಯವಿದ್ದರೆ ಶ್ರೀ ಗುರು ಬಸವಣ್ಣನವರ ಚಿತ್ರಗಳಿರುವ ಸ್ಟಿಕರ್, ಬಸವ ನಾಣ್ಯ, ವಚನಪಟ, ಶರಣರ ಫೋಟೋ ಇತ್ಯಾದಿ ಅಲ್ಲಲ್ಲಿ ಹಾಕಿರಿ.
9. ಪೂಜೆಯ ನಂತರ ಅತಿಥಿಗಳಿಗೆ ತೀರ್ಥ ಪ್ರಸಾದ ಕೊಟ್ಟು ದಾಸೋಹ ನಡೆಸಬಹುದು. ಇತರ ಕಾಣಿಕೆಗಳನ್ನು ನೀಡುವುದು ಇದ್ದಲ್ಲಿ ಶ್ರೀ ಬಸವಾದಿ ಶರಣರ ಭಾವಚಿತ್ರ, ವಚನ ಪುಸ್ತಕ, ಮುಂತಾದವುಗಳನ್ನು ಬಂಧು ಮಿತ್ರರಿಗೆ ಪ್ರಸಾದ ರೂಪವಾಗಿ ಕೊಡಿರಿ.

–ಕಲ್ಯಾಣಪ್ಪ ಪರಮಾದಿ.
ಸದಸ್ಯರು, ರಾಷ್ಟ್ರೀಯ ಬಸವ ದಳ
ಕೇಂದ್ರ ಸಮಿತಿ, ಕೂಡಲ ಸಂಗಮ

ವಿಶೇಷ ಸೂಚನೆ: ಅಂಗಡಿ, ಆಸ್ಪತ್ರೆ, ಕಾರಖಾನೆ ಮುಂತಾದವುಗಳನ್ನು ಪ್ರಾರಂಭಿಸುವಾಗಲೂ ಮೇಲಿನ ಪದ್ಧತಿಯನ್ನು ಅನುಸರಿಸಬೇಕಾಗಿ ಶರಣ ಬಂಧುಗಳಲ್ಲಿ ಕಳಕಳಿಯ ವಿನಂತಿ.



ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 [ವಿಧಿ 8]

1.	ಪ್ರಕಟಣೆಯ ಸ್ಥಳ	--	ಬೆಂಗಳೂರು.
2.	ಪ್ರಕಟಣೆಯ ನಿಯತಕಾಲಿಕತೆ	–	ಮಾಸಿಕ
3.	ಮುದ್ರಕರ ಹೆಸರು	–	ಸೋದರಿ ಕಸ್ತೂರಿ.
	ಭಾರತದ ಪ್ರಜೆಯೇ?	–	ಹೌದು.
	ವಿಳಾಸ	–	ಪ್ರಭುದೇವ ಮುದ್ರಣಾಲಯ ಬಸವ ಗಂಗೋತ್ರಿ, ಕುಂಬಳಗೋಡು
4.	ಪ್ರಕಾಶಕರ ಹೆಸರು	–	ಬಿ. ಶಂಭುಲಿಂಗಯ್ಯ
	ಭಾರತದ ಪ್ರಜೆಯೇ?	–	ಹೌದು
	ವಿಳಾಸ	–	ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ ರಾಜಾಜಿನಗರ, ಬೆಂಗಳೂರು-560010
5.	ಸಂಪಾದಕರ ಹೆಸರು.	–	ಬಿ. ಶಂಭುಲಿಂಗಯ್ಯ
	ಭಾರತದ ಪ್ರಜೆಯೇ?	–	ಹೌದು
	ವಿಳಾಸ	–	ಬಸವ ಮಂಟಪ, ರಾಜಾಜಿನಗರ ಬೆಂಗಳೂರು-560010
6.	ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಭಂಡವಾಳ ಶೇ 1ಕ್ಕಿಂತ ಹೆಚ್ಚು ಭಾಗಕ್ಕೆ ಪಾಲು ದಾರರ ಹೆಸರು ಮತ್ತು ವಿಳಾಸ	–	ವಿಶ್ವಕಲ್ಯಾಣ ಮಿಷನ್ (ರಿಜಿಸ್ಟರ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್) ಬಸವ ಮಂಟಪ, ರಾಜಾಜಿನಗರ ಬೆಂಗಳೂರು-560010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು, ನಾನು ಬಿ. ಶಂಭುಲಿಂಗಯ್ಯ ಘೋಷಿಸುತ್ತೇನೆ.

ಪ್ರಕಾಶಕ

ದಿನಾಂಕ 1-3-1991

ಬಿ. ಶಂಭುಲಿಂಗಯ್ಯ
ಕಲ್ಯಾಣ ಕಿರಣ, ಬೆಂಗಳೂರು-10

॥ಓಂ ಶ್ರೀ ಗುರುಬಸವಲಿಂಗಾಯ ನಮಃ॥

ಸಚ್ಚಿದಾನಂದ ಪ್ರಿಯೆ ಮಾತೆಗೊಲಿದ ಬಸವಗುರು
ಮಾತೆ ಎನಗೊಲಿದರು ಬಸವ ಗುರುವೆ
ಅನು ಶರಣಾದೆ ಅವರ ಶ್ರೀ ಪಾದಕೆ
ನೂರಾಜೆ ದಾಟಲವರ ಈ ನಲವತ್ನಾರರ
ಹುಟ್ಟುಹಬ್ಬ

ಶರಣು ಶರಣಾರ್ಥಿ,

ಮಹಾನ್ ಮಮತಾ ಶಕ್ತಿಯೊಂದರ
ಆವಿರ್ಭಾವವಾಗಿ ಇಂದಿಗೆ ನಲವತ್ನಾರು ವರ್ಷಗಳು.
ಆದರೆ ಅವರ ಸಾಧನೆ-ಸೀಮಾತೀತ ಮತ್ತು ಅಮರ.
ಜೀವನ ರಂಗದ ಅಗ್ರಪಂಕ್ತಿಯಲ್ಲಿರುವ ಮಾತಾಜಿ
ಮನುಕುಲದ ಸಾಹಸಕೆ ಹೊಸ ಮೆರಗು!
ಅಳ್ಳೆದೆಯನ್ನೂ ಅರಳಿಸಬಲ್ಲ ಛಲವುಳ್ಳ
ಮಾತಾಜಿ **ಪತಿತನ ಪಾವನಿಸಿದ** ಬಲವಂತರು
'ಗುರು' ಎಂಬ ಶಬ್ಧ ಅರ್ಥವಾಗದ ನನಗೆ
ಜಗದ್ಗುರುವಿನ ಭವ್ಯತೆಯಲ್ಲಿ ತಲೆಗೆ ಹತ್ತಬೇಕು? !
ಮಾತಾಜಿ ನಿಮ್ಮನರಿಯಲು ನಿಮ್ಮಿಂದಲೇ ಸಾಧ್ಯ.
ಹೆಚ್ಚು ಗೊತ್ತಿಲ್ಲ ತಾಯಿ, ತಾವು ಬಸವ ಶಕ್ತಿಯ
ಸಾಕಾರ ರೂಪ. ಜಗತ್ತಿನ ತಾರಕ ದೀಪ.

ಶರಣ. ಎ. ಡಿ. ಚನ್ನಬಸಪ್ಪ

ಅಯ್ಯಾ, ನಿಮ್ಮ ಶರಣರ ದಾಸೋಹಕ್ಕೆ
ಎನ್ನ ತನುಮನಧನವಲಸದಂತೆ ಮಾಡಯ್ಯ
ತನು ದಾಸೋಹಕ್ಕೆ ಉಬ್ಬುವಂತೆ ಮಾಡು
ಮನ ದಾಸೋಹಕ್ಕೆ ಲೀಯುವಹಂತೆ ಮಾಡು
ಧನ ದಾಸೋಹಕ್ಕೆ ಸವೆದು, ನಿಮ್ಮ ಶರಣರ ಪ್ರಸಾದದಲ್ಲಿ
ನಿರಂತರ ಆಡಿ, ಹಾಡಿ, ನೋಡಿ ಕೂಡಿ, ಭಾವಿಸಿ ಸುಖಿಸಿ
ಪರಿಣಾಮಿಸುವಂತೆ ಮಾಡು, ಕೂಡಲ ಸಂಗಮದೇವಾ.

ನಲವತ್ತಾರನೆಯ ಹುಟ್ಟು ಹಬ್ಬಕೆ ನಲವತ್ತಾರು ಪದ್ಯ ಪುಷ್ಪಾರ್ಪಣೆ.

೧. ಬಸವಣ್ಣ ನನಗುಸಿರು ಶರಣರು ನನಹಸಿರು
ಶಿವಜ್ಞಾನ ಶಿವಚಿಂತೆ ನನ ಬಸಿರು
ಮಾತಾಜಿ । ಮುಕ್ತಿಯ ಫಲವು ನನ ಶಿಶುವು !

೨. ಅರಿತವರ ಮರೆತವರ ಪರಿಪಾಲಿಸಿ ನೀವು।
ಅರಿತು ಮರೆತವರ ಎಚ್ಚರಿಸಿ।
ಮಾತಾಜಿ। ಗುರಿಗಮ್ಯಗಳನು ಅರುಹಿದಿರಿ. ।

೩. ಅತ್ತಲಿತ್ತಲು ಹೋಗೆ ವ್ಯರ್ಥಕಾಲ ಕಳೆಯೆ
ಚಿತ್ತ ನಿಮ್ಮ ಪಾದ ನೆನೆವಂತೆ।
ಮಾತಾಜಿ। ಕಾಯಕದ ದೀಕ್ಷೆ ತೊಡಿಸಿರಿ।

೪. ಕಂದನಿವನು ಎಂದು ಚಂದದಾಸರವಿತ್ತು
ಬಸವ ಚಂದ್ರಮನ ತೋರಲು ।
ಮಾತಾಜಿ । ತವರ್ಮಮನೆಯು ನನಗೆ ಮಹಾಮನೆಯು

೫. ಸಾಕಿದಿರಿ ಸಲಹಿದಿರಿ ಸಂತಸದಿ ನೋಡಿದಿರಿ
ಸಂತುಷ್ಟ ಜೀವನವ ನೀಡಿದಿರಿ
ಮಾತಾಜಿ। ಸಂಭ್ರಮದಿ ಶಿವನೊಲುಮೆ ಹರಸಿದಿರಿ.

೬. ಭಕ್ತಿಯ ಕೊಡು ಶಿವನೆ ಭವವನ್ನು ಹೊರಲಾರೆ
ಶರಣರ ಸಂಗ ಬಿಡಲಾರೆ
ಮಾತಾಜಿ। ಭಕ್ತಿಹೀನ ಎಂಬ ಶಬುದ ಹೊರಲಾರೆ॥

೭. ಬಂಧು ಬಳಗವೆಂದು ಸಲ್ಲದಾಟವೇಕೆ
ಬಲ್ಲವರ ಸಂಗ ಇರುವಾಗ
ಮಾತಾಜಿ। ನಿಲ್ಲೆ ನಾನಿಲ್ಲಿ ಸಂಸಾರದಲಿ।

೮. ನಿಮ್ಮ ಕರುಣೆಯ ಹೊನಲು ನಮ್ಮ ಮೇಲೆ ಹರಿದು
ಸಹನೆ ಶಾಂತಿಗಳ ತಂಪುಂಡು
ಮಾತಾಜಿ। ಬಸವ ಶಾಂತಿಯನು ಹೊಂದುವೆವು॥

೯. ಬಸವಾ ಎಂದು ಬಂದೆ ಆಸುವು ನಿಮ್ಮದು ಎಂದೆ
ಶಿವಶಿವ ಮಂತ್ರ ನನದೆಂದೆ
ಮಾತಾಜಿ। ಗುರುವಿನ ಸೇವಕ ನಾನೆಂದೆ

೧೦. ಜೀವನದ ಯೋಗವ ಶಿವಯೋಗಕ್ಕೆ ಎಳಸಿ
ಆಗು ಹೋಗುಗಳು ಶಿವನಾಟ
ಮಾತಾಜಿ। ಬಸವ ಯೋಗವೆ ನನ್ನುಸಿರು

೧೧. ದ್ವಂದ್ವಗಳ ಒತ್ತಿಕ್ಕಿ ನಿಂದೆಗಳ ಬದಿಗಿಕ್ಕಿ
ವಂದ್ಯ ಮೂರುತಿಗಳ ಸೇವಿಸಿ
ಮಾತಾಜಿ।ಸೌಜನ್ಯ ಸರಳತೆ ಗಳಿಸುವೆವು॥

೧೨. ಅಂಜುಕುಳಿ ನಾನಲ್ಲ ಸಂಸಾರಕ್ಕಂಜಿರುವೆ
ಮಂಜು ಕರಗಿದಂತೆ ಮನ ಕರಗಿ
ಮಾತಾಜಿ। ನಿಂದ ನಿಜಬಯಲು ತವಪಾದ॥

೧೩. ಅಮೃತವಿರುವಲ್ಲಿ ಸಂಭ್ರಮದ ಸಿರಿಯುಂಟು
ಗುರು ಸನ್ನಿಧಿಯು ಇರುವಲ್ಲಿ
ಮಾತಾಜಿ। ನಿಜದಾತ್ಮಾನಂದ ತಾನುಂಟು

೧೪. ಪರಬ್ರಹ್ಮನರಿದೇವು ಗುರು ಬ್ರಹ್ಮನಿರುವಲ್ಲಿ
ಹಮ್ಮು ಬಿಮ್ಮುಗಳು (ಹರಿದಲ್ಲಿ) ಕಳೆದಲ್ಲಿ
ಮಾತಾಜಿ। ಶಿವಸಿರಿ ಚಿಮ್ಮಿ ಹೊಮ್ಮುವದು

೧೫. ಸಲಹು ಶಿವನೆ ದಯದಿ ಸಲಹು ಬಸವಈಶ
ನಿನ ಕರುಣೆ ಕರಿಮಣಿ ನನ ಕೊರಳಲಿ
ಮಾತಾಜಿ। ಕಂಕಣ ಬಲವು ನನ ತೋಳಲಿ॥

೧೬. ಸರ್ವ ಪ್ರಕಾರಗಳ ಚಿನ್ಮಯತೆ ನನಗಿರಲಿ
ಚಿಂತನೆಯ ಚಿತ್ತ ಹಸನಿರಲಿ
ಮಾತಾಜಿ। ಸ್ವಂತಿಕೆಯ ಬುದ್ಧಿ ಬಳಿಯಿರಲಿ॥

೧೭. ಬಸವ ಪ್ರೇರಣೆಯಂತೆ ಶಿವನಲ್ಲಿ ತನ್ಮಯತೆ
ಶರಣರ ಕರೆಯಂತೆ ನನ ಇರವು
ಮಾತಾಜಿ। ಗುರುವಿನ ಪಾದದಿ ನನ್ನಿರವು

೧೮. ಸಂತೋಷ ತುಂಬಿದೆ ಶಿವನಾಟ ತುಳುಕಿ
ಬಸವ ಗುರು ಬೀಜ ಮೊಳೆತು
ಮಾತಾಜಿ। ಕಾಯಕವೇ ಕೈಲಾಸ ನಲಿಯಿತು

೧೯. ಏಕಾಂತ ಸಲ್ಲ ಲೋಕಾಂತ ಶ್ರೇಷ್ಠ
ಶರಣರ ಸಂಗ ಉತ್ಕೃಷ್ಟ
ಮಾತಾಜಿ। ಗುರುಪಾದ ಸರ್ವೋತ್ಕೃಷ್ಟ

೨೦. ಪಾದಕೆ ಎರಗುವೆ ಕೈಯನೆ ಮುಗಿಯುವೆ
ಶರಣು ಶರಣಾರ್ಥಿ ಪರಮಾತ್ಮ
ಮಾತಾಜಿ। ಸಂಸಾರ ವೇದನೆ ಮಾಣಿಸು

೨೧. ಭೇದ ಬುದ್ಧಿಯ ತೊರೆದು ಏಕ ಭಾವವ ತಾಳಿ
ವಿಶ್ವ ಧರ್ಮವ ಪರಿಪಾಲಿಸಿ
ಮಾತಾಜಿ। ವಿಶ್ವ ಬಂಧುತ್ವ ಹೊಂದುವೆವು

೨೨. ಆತ್ಮದರಿವು ಹೊಂದಿ ಮತ್ತೆ ಗುರುವನು ಹೊಂದಿ
ಚಿತ್ತದಲಿ ಭಕ್ತಿಯ ನೆಲೆಗೊಳಿಸಿ
ಮಾತಾಜಿ। ಬಸವ ಪಾದದಿ ಸವೆಯುವೆವು.

೨೩. ಉರಿಯೇನು ಸಿರಿಯೇನು ಕಲ್ಲೇನು ಮುಳ್ಳೇನು
ಸರ್ವವೂ ನೀನಾದ ಮೇಲಿನ್ನೇನು
ಮಾತಾಜಿ। ಪರಮಾತ್ಮ ನಮ್ಮಲ್ಲಿ ಇರನೇನು.

೨೪. ಶರಣ ರಕ್ಷಕನವನು ಮರಣ ದೂರನವನು
ಬಸವಣ್ಣನಿತ್ತ ವರದೇವಾ
ಮಾತಾಜಿ। ಅವನಿಗೆ ಜೀವನ ಪಣವಿಡುವೆ॥

೨೫. ಬೇಕು ಬೇಡಗಳೆಂಬ ಹವಣಿಕೆಗಳ ತೊರೆದು
ಬಂದುದೇ ದೈವೀವರವೆಂದು
ಮಾತಾಜಿ। ಪೂಜ್ಯ ಭಾವದಿಂ ಸೇವಿಸುವೆ

೨೬. ಪೆದ್ದ ಗೆದ್ದು ಬಂದೆ। ಗುದ್ದು ತಿಂದು ಬಂದೆ
ಸಂಸಾರದುರಗಗಳ ಬದಿ ಸರಿಸಿ
ಮಾತಾಜಿ। ಓಡೋಡಿ ಬಂದೆ ತವಪಾದಕೆ।

೨೭. ಸರ್ವಾಂಗ ಶುಚಿಗೊಳಿಸಿ ಸದ್ಧರ್ಮದುಡುಪುಡಿಸಿ
ಶುದ್ಧಯಿಸಿ ಮನವಂತಃಕರಣ
ಮಾತಾಜಿ। ಬದ್ಧನಾಗಲು ಬಿಡಿರಿ ಶಿವಮತಕೆ॥

೨೮. ಹಸನಾದ ಮುಖದಿಂದ ಆನಂದ ಚೆಲ್ಲುತ್ತಾ
ಬಸವ ಮಂತ್ರಗಳ ಗುರುಬೀಜ ಹರಡಿ
ಮಾತಾಜಿ। ಶಿವಸಿರಿಬೆಳೆ ಬೆಳೆದುಣ್ಣುವೆ.

೨೯. ಬಸವ ಬಸವಾ ಎನಲು ಭವ ಅಳಿದು ಹೋಗುವದು
ಮನೆ ಅಳಿಯ ಮನೆಗೆ ಬಂದಂತೆ
ಮಾತಾಜಿ। ಶಿವಕರುಣೆ ಎನ್ನ ಮುತ್ತುವುದು.

೩೦. ಅಂಗನೆ ನಾನಿಂದು ಸಿಂಗರಿಸು ಎಲೆ ಅವ್ವಾ
ಶಿವ ಎನಗೆ ಪತಿಯಾಗಿ ಬಂದಿಹನು
ಮಾತಾಜಿ। ಶಿವಯೋಗ ಸರಸದಿ ಕೂಡುವೆನು॥

೩೧. ಚೆಂದುಳ್ಳ ಚೆಲುವೆಗೆ ಇಂದುಧರ ಒಲುಮೆ
ಭಂಗ ಬಟ್ಟುಂಬ ಬಾಳುವೆಗೆ
ಮಾತಾಜಿ। ನಿಮ ಕರುಣೆಯಿಂದ ಪಾರಾದೆ॥

೩೨. ಮೌನವಾಗಿದೆ ಮನವು ಕೆಳಬಾಗಿದೆ ಶಿರವು
ಹರಚರಣಕ್ಕೆನ್ನ ಹೃದಯವು
ಮಾತಾಜಿ। ಅರ್ಪಿತವಾಯ್ತು ಹೂವಾಗಿ.

೩೩. ಸಂಸಾರ ಬಿಸಿಯಕ್ಕಾ। ಶರಣರ ಕೆಳೆಲೇಸು
ಗುರು ಶಿಷ್ಯರ ಸಂಬಂಧವೇ ಲೇಸು
ಮಾತಾಜಿ। ಬಸವಣ್ಣ ಲೇಸು ಶರಣರಿಗೆ॥

೩೪. ಮರಣ ಬಂದರೂ ಬರಲಿ ಶರಣರಕ್ಷೆ ಇರಲಿ
ಗುರುಚರಣಕೆನ ಹರಣ ಹರಿಯಲಿ
ಮಾತಾಜಿ। ಮಗುವಿನ ಮೃದು ಹೃದಯ ನನಗಿರಲಿ

೩೫. ಕರುಣೆ ಇಂದೇ ಇರಲಿ। ಮರಣ ಎಂದೇ ಬರಲಿ
ಜರೆಜನನ ಮರಣ ಭಯ ಬಹುದೂರ
ಮಾತಾಜಿ। ಗುರು ಲಿಂಗಾನಂದರು ಒಡನಿರಲಿ

೩೬. ಮಡದಿ ಮಕ್ಕಳಿಗೆಂದು ನಾನೇಕೆ ಕುದಿಯಲಿ
ಮಡದಿ ಮಹಾದೇವನಿಗೆ ನಾನಾದೆ
ಮಾತಾಜಿ। ಶಿರಬಾಗಿ ನಮಿಸಿದೆ ಬಸವಣ್ಣಗೆ.

೩೭. ಅಚ್ಚರಿ ಪಡಲೇಕೆ ನಿಮ್ಮಿಚ್ಚೆ ಗುರುದೇವ
ಬಾಳಿನ ಕಣಕಣ ನಿಮಗರ್ಪಿತ
ಮಾತಾಜಿ। ನಿಮ್ಮ ಮೆಚ್ಚುಗೆಯೇ ನನ್ನಿಚ್ಚೆ.

೩೮. ಎನಗಿಂತ ಕಿರಿಯರಾರ್ ನಿಮಗಿಂತ ಹಿರಿಯರಾರ್
ಅರಿತ ಶರಣನಿಗೆ ಸಮನಾರ್
ಮಾತಾಜಿ। ಗುರುವಿಗತ್ಯಧಿಕನಾರ್ ?

೩೯. ಸತ್ತು ಬದುಕಿದೆನಯ್ಯಾ ಮತ್ತೆ ಹೊರಡುವೆನಯ್ಯ
ಮಿಥ್ಯ ಸಂಸಾರವ ಹೊರದೂಡಿ
ಮಾತಾಜಿ। ಕಲ್ಯಾಣ ರಾಜ್ಯಕೆ ಪಯಣಿಸುವೆ.

೪೦. ಸಾಗರದ ಅಲೆಗಳು ಭೋರ್ಗರೆದು ಬರುತಿವೆ
ಕೃಪೆಯ ಹಡಗದುವೆ ಬಹುದೂರ
ಮಾತಾಜಿ। ಹಾರೈಸಿ ಬೇಗ ಬರಲೆಂದು.

೪೧. ಸಂಗೀತ ಗುಂಗಿನಲಿ ಶಿವನಿಂಗಿತದ ಗುರಿಯುಂಟು.
ಸೌಂದರ್ಯ ಮೂರುತಿ ಬಸವಣ್ಣಗೆ
ಮಾತಾಜಿ। ನನ ಪ್ರಾಣವೀಣೆ ಮೀಂಟುವುದು.

೪೨. ಸಂತನ ಜೀವನದಿ ಸಂತಸದ ಶಿವನುಂಟು।
ಸಾಂತ್ವನದ ಬೆಳಕು ಬರಲುಂಟು
ಮಾತಾಜಿ। ಸತ್-ಚಿತ್-ಆನಂದ ತರಲುಂಟು.

೪೩. ಸೋಮಾರಿ ಜೀವನವ ಸಂಯಮದಿ ತಡೆಹಿಡಿದು
ತಂದೆ ಶಿವನ ಬಲದಿ ಬಲಗೊಂಡು
ಮಾತಾಜಿ! ತಾಯಿ ಬಸವಣ್ಣನ ಮಡಿಲುಣುವೆ.

೪೪. ಅತ್ತ ಶಿವನಾ ಪಾದ ಇತ್ತ ಬಸವಾಪಾದ
ಎತ್ತೆತ್ತ ನೋಡಿದರೂ ಗುರುಪಾದ
ಮಾತಾಜಿ। ನಿತ್ಯ ನಿಮ್ಮ ಪಾದ ನನ ನೆನಪು.

೪೫. ಸಚ್ಚರಿತೆ ಸವಿನಯ ಸದ್ಭಾವ ಮೂಡಲಿ
ಸದ್ಧಿರದ ಸೇವೆ ನಡೆಯಲಿ
ಮಾತಾಜಿ। ನಿದ್ರೆಯಿರದ ಧ್ಯಾನ ಜರುಗಲಿ

೪೬. ನನ್ನ ಕಾವ್ಯನಾಮ ಚನ್ನಬಸವಾನಂದ
ಚಿನ್ಮಯ ಬದುಕಿನ ಬಂಡುಂಡು
ಮಾತಾಜಿ। ಸಚ್ಚಿದಾನಂದನ ನೆನೆಯುವೆನು.

ರಚನೆ : ಶರಣ .ಎ.ಡಿ. ಚನ್ನಬಸಪ್ಪ
ವಿಶ್ವಸಂಚಾರಿ

ಬಸವಣ್ಣನೇ ತಾಯಿ ಬಸವಣ್ಣನೇ ತಂದೆ
ಬಸವಣ್ಣನೇ ಪರಮ ಬಂಧುವೆನಗೆ
ವಸುಧೀಶ ಕಪಿಲಸಿದ್ಧ ಮಲ್ಲಿಕಾರ್ಜುನ
ನಿಮ್ಮ ಹೆಸರಿಟ್ಟ ಗುರು ಬಸವಣ್ಣನಯ್ಯ.

–ಶಿವಯೋಗಿ ಸಿದ್ಧರಾಮೇಶ್ವರ

ವಿಶ್ವಧರ್ಮ ಪ್ರವಚನದ ಸಂದೇಶ ಸಾರ

* **ವೈಜ್ಞಾನಿಕ ಯುಗದಲ್ಲಿ ಧರ್ಮದ ಅವಶ್ಯಕತೆ ಏನು ?**

ಮಾನವನು ಹಿಂದಿಗಿಂತಲೂ ಹೆಚ್ಚಾಗಿ ಇಂದು ಹಲವಾರು ಬಗೆಯ ಮಾನಸಿಕ ಒತ್ತಡಗಳಿಗೆ ಈಡಾಗುತ್ತಿದ್ದಾನೆ. ಜೀವನದ ವಿವಿಧ ವಿರಿಳಿತಗಳ ಪ್ರಸಂಗದಲ್ಲಿ ಮಾರ್ಗದರ್ಶನ ಮಾಡಬಲ್ಲ ದಿವ್ಯ ಸಂಜೀವಿನಿಯಾಗಿ ಧರ್ಮವು ಕೆಲಸ ಮಾಡಬಲ್ಲದು.

* **ಧರ್ಮವು– ರಾಷ್ಟ್ರ ಸಮಾಜಗಳಲ್ಲಿ ಒಡಕು ಹುಟ್ಟಿಸುವುದೆ ?**

ಧರ್ಮದ ನಿಜವಾದ ಅರ್ಥವನ್ನು ತಿಳಿದುಕೊಂಡು ನಡೆದುದೇ ಆದರೆ ಅದು ಒಡಕು ಹುಟ್ಟಿಸದು, ವಿಶಾಲ ಮನೋಭಾವವನ್ನು ಬೆಳೆಸುವುದು.

* **ಹಿಂದುತ್ವವು ಸಂಕುಚಿತತೆಯ ಮನೋಭಾವ ಬೆಳೆಸುವುದೆ?**

ಹಿಂದುತ್ವವು ಒಂದು ಮಹಾನ್ ಪರಂಪರೆಯನ್ನು ಪ್ರತಿನಿಧಿಸುವ ಪದ. ಭಾರತಮಾತೆಯ ಗರ್ಭದಲ್ಲಿ ಜನಿಸಿರುವ ವಿವಿಧ ಸಂತರು, ಪ್ರವಾದಿಗಳು ಕೊಟ್ಟ ಧರ್ಮ ಮತ ಪಂಥಗಳು ಹಿಂದೂ ಕಕ್ಷೆಯಲ್ಲೇ ಬರುವ ಕಾರಣ, ಹಿಂದೂತ್ವದ ಪ್ರಜ್ಞೆಯು ವಿಶಾಲ ಸಮನ್ವಯ ದೃಷ್ಟಿಯನ್ನು ಬೆಳೆಸುವ ಭಾವೈಕ್ಯತೆಯ ಸಾಧನವೇ ವಿನಾ ಅನೈಕ್ಯತೆ, ವಿಘಟನೆಗೆ ಕಾರಣವಾಗುವ ಮತಾಂಧತೆಯಲ್ಲ.

"ಸ್ವಧರ್ಮದಲ್ಲಿ ಅಭಿಮಾನ ಪರಧರ್ಮ ಸಹಿಷ್ಣುತೆ
ವೈವಿಧ್ಯತೆಯಲ್ಲಿ ಐಕ್ಯತೆ, ಭಿನ್ನತೆಯಲ್ಲಿ ಸಮರಸ
ವಿಚಾರ ಭಿನ್ನಾಭಿಪ್ರಾಯವಿದ್ದರೂ, ಹೃದಯ ಭಿನ್ನಾಭಿಪ್ರಾಯ ಸಲ್ಲದು"

ಈ ಮಹಾನ್ ಸೂತ್ರಗಳೇ ಹಿಂದು ಪರಂಪರೆಯ ಚಿರಂತನ ಘೋಷಣೆಗಳು.

* **ಹಲವಾರು ಧರ್ಮಗಳ ಅಸ್ತಿತ್ವ ದೇಶದ ಪ್ರಗತಿಗೆ ಮಾರಕವೆ ?**

ಭಾರತ ಭೂಮಿಯ ಅಭಿವೃದ್ಧಿ ಎಂಬ ವಾದ್ಯ ವೃಂದದ ಗಾಯನದಲ್ಲಿ ವಿವಿಧ ಧರ್ಮ, ಮತ, ಪಂಥಗಳು ವಿವಿಧ ವಾದ್ಯಗಳಿದ್ದಂತೆ. ಎಲ್ಲ ವಾದ್ಯಗಳೂ ಶ್ರುತಿಯೊಡನೆ ಕೂಡಿ ಸುಸ್ವರವ ಹಾಡುವಂತೆ, ರಾಷ್ಟ್ರಭಕ್ತಿ ಎಂಬ ಶ್ರುತಿಯ ಗತಿಯನ್ನು ಅನುಸರಿಸಿ ಎಲ್ಲ ಧರ್ಮ ಮತ ಪಂಥಗಳವರೂ ವಿಶ್ವಕಲ್ಯಾಣದ ಹಾಡು ಹಾಡಬೇಕು.

ಗುರು ಕರುಣೋದಯ

ಭರವಸೆಯ ಹೊಸದಿಕ್ಕೊಂದು ಗೋಚರಿಸಿತು
ಉತ್ಸಾಹದುನ್ಮತ್ತತೆ ಮೈತುಂಬಿತು. ||ಪ||

ಮಾತಾಜಿ ಮನವು ಮಹಾದೇವನಾಗಿದೆ,
ಮಗುವಿನ ಈ ಜೀವನವ ಪಾವನಿಸಿದೆ,
ಸೇವೆಯ ಕೈಂಕರ್ಯಕೆ ಕರೆಯಿತ್ತಿದೆ,
ಆತ್ಮಾರ್ಪಣೆಗೆ ಹೊಸ ಅವಕಾಶವಿತ್ತಿದೆ. ||೧||

ಹಿಂದಿಲ್ಲ ಮುಂದಿಲ್ಲ ಬಂಧುಗಳ ಕಾಟ ಮೊದಲಿಲ್ಲ ನನಗೆ
ಇಂದು ಮುಂದಿನ ಚಿಂತೆ ಇನ್ನಿಲ್ಲ ನನಗೆ
ಜಗತ್ಕರ್ತ ಶಿವನಾ ಪಾದ ಸೇರುವ ಹಾದಿಯಲಿ
ಗುರು ದೇವಾ ನಿನ್ನೊಡನೆ ಇರುವ ಆಸೆ ||೨||

ತಡಮಾಡೆ ಬಡಭಕ್ತಿ ಒಡನೆ ಸಲಿಸುವೆ
ಸರ್ವಾರ್ಪಣದ ಶ್ರೀಮಂತ ನಾನಾಗುವೆ
ಸೇವಾ ಬದ್ಧತೆಗೆ ಸರಸರನೆ ಅಣಿಯಾಗುವೆ
ಬಗೆ ಬಗೆ ಸೇವೆಗಳ ಪಾಠ ಕಲಿಯುವೆ ||೩||

—ಶರಣ. ಎ. ಡಿ. ಚನ್ನಬಸಪ್ಪ

ಗುರು ಕಾರುಣ್ಯವೇ ಸದಾಚಾರ, ಗುರು ಕಾರುಣ್ಯವೇ ಶಿವಾಚಾರ,
ಗುರು ಕಾರುಣ್ಯವೇ ಪ್ರಸಾದ ರುಚಿ,
ಮುಂದೆ ಗುರು, ಹಿಂದೆ ಲಿಂಗ ಕೂಡಲಸಂಗಮದೇವಾ !

–ವಿಶ್ವಗುರು ಬಸವಣ್ಣ

KALYANA KIRANA- Monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560 074.

ಶರಣ ಬಂಧುಗಳ ಗಮನಕ್ಕೆ

ಶರಣ ಮೇಳ-4, ಕೂಡಲ ಸಂಗಮದಲ್ಲಿ ಅತ್ಯಂತ ಅರ್ಥಪೂರಿತವಾಗಿ, 1991ರ ಜನವರಿ 13, 14 ಮತ್ತು 15 ರಂದು ನಡೆಯಿತಷ್ಟೆ. ಇದರ ಸಂಬಂಧ 3 ವೀಡಿಯೋ ಕೆಸೆಟ್ಟು ಲಭ್ಯವಿವೆ.

1. ಶರಣ ಮೇಳ_4 ರ ಸಮಗ್ರ ವರದಿ – ಬೆಲೆ 250-00 ರೂ.
2. ಸಾಮೂಹಿಕ ಲಿಂಗಪೂಜೆ – ಬೆಲೆ 250-00 ರೂ.
3. ಸಾಂಸ್ಕೃತಿಕ ಕಾರ್ಯಕ್ರಮ – ಬೆಲೆ 250-00 ರೂ.

ಮೊದಲ ಎರಡು ಸದಾ ಲಭ್ಯವಿರುತ್ತವೆ. ಬೆಂಗಳೂರು ಬಸವ ಮಂಟಪದಲ್ಲಿ ಹಣಕೊಟ್ಟು ಕೊಳ್ಳಬಹುದು. 3ನೆಯದಕ್ಕೆ ಮಾತ್ರ ಮೊದಲೇ ಬೇಡಿಕೆ ಸಲ್ಲಿಸಬೇಕು.

ಜನರು ತಾವೇ ವೀಡಿಯೋ ಕೆಸೆಟ್ಟು ತಂದುಕೊಟ್ಟರೆ ಆಗ ಕೇವಲ 100 ರೂ. ಪಡೆದು (ಒಂದು ಕೆಸೆಟ್ಟು) ಬೇಡಿಕೆಯಂತೆ ರೆಕಾರ್ಡ್ ಮಾಡಿಸಿಕೊಡಲಾಗುವುದು. ಇದರಲ್ಲಿ ರೆಕಾರ್ಡಿಂಗ್ ಮೌಲ್ಯ ಮತ್ತು ತಯಾರಿಕೆ ವೆಚ್ಚ ಸೇರಿರುವುದು.

ನಿವೇದನಾ-ಪ್ರಾರ್ಥನಾ ಕೆಸೆಟ್ಟು G-60

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯಿಂದ ಈಗಾಗಲೇ ಪ್ರಾರ್ಥನಾ ಕೆಸೆಟ್ಟು ಸಿದ್ಧವಿರುವವಷ್ಟೆ. ಕೆಲವು ಕಡೆ ಪ್ರಾರ್ಥನೆಗಳನ್ನು ನಡೆಸಲು ರಾಷ್ಟ್ರೀಯ ಬಸವ ದಳಗಳವರು ಕೆಸೆಟ್ಟುಗಳನ್ನೇ ಬಳಸುತ್ತಿದ್ದಾರೆ. ಈಗ ತಯಾರಾಗಿ ಬಿಡುಗಡೆ ಆಗಿರುವ ಪ್ರಾರ್ಥನಾ ಕೆಸೆಟ್ಟಿನಲ್ಲಿ ಮಧ್ಯೆ ವಾದ್ಯಸಂಗೀತವಿದೆ ; ಹೀಗಾಗಿ ಜನ ಸಾಮಾನ್ಯರು ಕೇಳಲು ಚೆನ್ನಾಗಿದ್ದರೂ, ಪ್ರಾರ್ಥನೆಯಲ್ಲಿ ಬಳಸಲು ಕೆಲವು ಅನಾನುಕೂಲತೆ ಇರುವುದನ್ನರಿತು, ಈಗ 'ನಿವೇದನಾ' ಎಂಬ ಹೊಸ ಧ್ವನಿ ಸುರುಳಿಯ ರೆಕಾರ್ಡಿಂಗ್ ಮಾಡಲಾಗಿದೆ.

ಇದರಲ್ಲಿ ಪೂಜ್ಯ ಮಾತಾಜಿಯವರು ತಂಬೂರಿಯ ಶ್ರುತಿಯ ಹಿನ್ನೆಲೆಯಲ್ಲಿ ಮತ್ತಾವ ಪಕ್ಕವಾದ್ಯಗಳಿಲ್ಲದೆ ಹಾಡಿ, ಪ್ರಾರ್ಥನೆ ಮಾಡಿಸುತ್ತಾರೆ. ಜೊತೆಗೆ ಹಿಮ್ಮೇಳವೂ(ಕೋರಸ್) ಇರುವುದರಿಂದ ಪ್ರಾರ್ಥನಾ ಸಭೆಗಳಲ್ಲಿ ಉಪಯೋಗಿಸಲು ತುಂಬಾ ಚೆನ್ನಾಗಿಯೂ ಮತ್ತು ಅನುಕೂಲಕರವಾಗಿಯೂ ಇದೆ. ಆಸಕ್ತರು ತರಿಸಿಕೊಳ್ಳಬಹುದು.

ವಿ. ಸೂ. ರಾಷ್ಟ್ರೀಯ ಬಸವ ದಳಗಳವರು ಪ್ರಾರ್ಥನೆಗಳಲ್ಲಿ ಬಳಸಲು, ಮತ್ತು ಪ್ರಾರ್ಥನಾ ಕೂಟಗಳನ್ನು ಹೊಸ ಸ್ಥಳಗಳಲ್ಲಿ ನಡೆಸಲು ಬಹಳ ಅನುಕೂಲಕರವಾಗಿದೆ.

ಬಿಡಿ ಪ್ರತಿ 28–00, ಅಂಚೆಯಲ್ಲಿ 35–00 ರೂ.

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, 2035, ಎರಡನೆ ಬ್ಲಾಕ್,
20 ನೇ ಮೇಯಿನ್, ರಾಜಾಜಿನಗರ, ಬೆಂಗಳೂರು-560010

ಕಲ್ಯಾಣ ಕಿರಣ

KRNB 312/BGW 92

~~AUGUST 1990~~

APRIL 1991

